
# "ದೈವೀಸತ್ಯ ಎಂದರೇನು, ಅದಕ್ಕೆ ಸೇವೆ ಸಲ್ಲಿಸುವುದು ಹೇಗೆ?"



*Let us serve the Truth*

ಅಖಿಲ ಭಾರತ ಪತ್ರಿಕೆ
ಜನವರಿ 2013

# ಹೊಸವರ್ಷದ ಶುಭಾಶಯಗಳು



*Each victory gained over oneself means new strength to gain more victories.*

- Sri Aurobindo

# ಅಖಿಲ ಭಾರತ ಪತ್ರಿಕೆ

**ಸಂಪಾದಕರು, ಧಾರವಾಡ**
ಡಾ॥ ಕೆ.ಎಸ್. ಆಮೂರ,
ಎಂ.ಎಸ್ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org

**ಬೆಲೆ : 15/–**


## ಪರಿವಿಡಿ

### “ದೈವೀಸತ್ಯ ಎಂದರೇನು, ಅದಕ್ಕೆ ಸೇವೆ ಸಲ್ಲಿಸುವುದು ಹೇಗೆ?”

**ಅನು : ಡಾ. ಕೆ.ಎಸ್. ಆಮೂರ**

**ದೈವೀಸತ್ಯ ಎಂದರೇನು?**


ದೈವೀಸತ್ಯದ ಕೊನೆಯ ವಿಜಯದಲ್ಲಿ ದೃಢನಂಬಿಕೆ 3
ಅವಿದ್ಯೆ ಎಂದರೇನು ? 8
ಏಳು ವಿಧದ ಅವಿದ್ಯೆ 9
ಏಳು ವಿಧದ ಅವಿದ್ಯೆಯನ್ನು ತೊಡೆದು ಹಾಕುವುದು 11
ಮಿಥ್ಯೆಯೆಂದರೇನು? 12


**ಅನು : ಶ್ರೀ ಪುರುಷೋತ್ತಮ ಗಲಗಲಿ**


ಮಿಥ್ಯೆಯ ಮೇಲೆ ಜಯ ಸಾಧಿಸುವುದು 14


**ಅನು : ಶ್ರೀ ವೀರೇಂದ್ರ ಸಿಂಪಿ**


ಸತ್ಯ ಅನಂತಪಟ್ಟು ಸಂಕೀರ್ಣವಾದ ನೈಜತೆಯಾಗಿದೆ 16


**ಅನು : ಡಾ. ಕೆ.ಎಸ್. ಆಮೂರ**


ಪ್ರತಿಯೊಬ್ಬನೂ ತನ್ನ ದೈವೀಸತ್ಯವನ್ನು ತನ್ನಲ್ಲಿಯೇ ಕೊಂಡೊಯ್ಯುತ್ತಾನೆ 20
ಒಂದು ಮೂಲಭೂತ ದೈವೀಸತ್ಯ 23


**ಮನಸ್ಸು ಮತ್ತು ದೈವೀಸತ್ಯ**


ಯೋಚನೆ ಹಾಗೂ ದೈವೀಸತ್ಯ : ಜ್ಞಾನದ–ಸಾಪೇಕ್ಷತೆ 25
ಇತರರನ್ನು ಅರ್ಥಮಾಡಿಕೊಳ್ಳುವುದು : ಆಧ್ಯಾತ್ಮಿಕ ರಹಸ್ಯ ಜ್ಞಾನವಿರುವ ಪ್ರಜ್ಞೆ 28
ಮನಸ್ಸು ಮತ್ತು ದೈವೀಸತ್ಯದ ದರ್ಶನ 31
ಅಂತಿಮ ಸತ್ಯ ಕುರಿತು ವಿಜ್ಞಾನ ಮತ್ತು ಯೋಗ 36
ಬೌದ್ಧಿಕ ಸತ್ಯಗಳು ಹಾಗೂ ಆತ್ಮದ ಸತ್ಯಗಳು 38
ದೈವೀಸತ್ಯದ ಉಚ್ಚತರ ಶಾಖೆಗಳು 41


**ದೈವೀಸತ್ಯವನ್ನು ಕುರಿತು ಉಪನಿಷತ್ತುಗಳು ಹಾಗೂ ವೇದ**


ದೈವೀಸತ್ಯವನ್ನು ಕುರಿತು ಈಶಾವಾಶ್ಯೋಪನಿಷತ್ 43
ಋಗ್ವೇದದಲ್ಲಿ ದೈವೀಸತ್ಯದ ಕಲ್ಪನೆ 45


**ದೈವೀಸತ್ಯಕ್ಕೆ ಸೇವೆ ಸಲ್ಲಿಸುವುದು ಹೇಗೆ ?**


ದೈವೀಸತ್ಯವನ್ನು ಜೀವಿಸಬೇಕು 50
ನಾವು ಕೇವಲ ದೈವೀಸತ್ಯಕ್ಕೆ ಅಧೀನರಾಗಬೇಕಾದರೆ 52
ದೈವೀಸತ್ಯದ ಸೇವೆಗೆ ಇರುವ ಮೊದಲ ನಿಬಂಧನೆ 55
ಕ್ರಿಯೆಗಾಗಿ ಇರುವ ಪ್ರಚೋದನೆಯಲ್ಲಿ ದೈವೀಸತ್ಯ ಹಾಗೂ ಮಿಥ್ಯೆ ಇವುಗಳನ್ನು ಭಿನ್ನವಾಗಿ ನೋಡುವುದು ಹೇಗೆ ? 58
ದೈನಂದಿನ ಜೀವನಕ್ಕೆ ಮಾರ್ಗದರ್ಶನ 60
**ವಾರ್ತಾಪತ್ರ** 63

## ದೈವೀಸತ್ಯದ ಕೊನೆಯ ವಿಜಯದಲ್ಲಿ ದೃಢ ನಂಬಿಕೆ

ಯಾವ ಮಾನವ ಸಂಕಲ್ಪವೂ ಕೊನೆಯಲ್ಲಿ ಭಗವಂತನ ಸಂಕಲ್ಪದ ವಿರುದ್ಧ ವಾಡಿಕೆಯಲ್ಲಿ ಉಳಿದುಕೊಳ್ಳಲಾರದು. ನಾವು ನಮ್ಮನ್ನು ಉದ್ದೇಶಪೂರ್ವಕವಾಗಿ ಹಾಗೂ ಪ್ರತ್ಯೇಕವಾಗಿ ಭಗವಂತನೊಂದಿಗೆ ಇರಿಸೋಣ, ವಿಜಯ ಕಟ್ಟಕಡೆಗೆ ಖಂಡಿತ ದೊರೆಯುತ್ತದೆ.

*

ಮಿಥ್ಯೆ ಮೃತ್ಯು ಹೊಂದುವ ಮೊದಲು ರಭಸದಿಂದ ಮೇಲಕ್ಕೇರುತ್ತದೆ.
ಆದಾಗ್ಯೂ ಜನರು ಕೇವಲ ಅನಾಹುತದ ಪಾಠವನ್ನು ತಿಳಿದುಕೊಳ್ಳುತ್ತಾರೆ.
ಅವರು ದೈವೀಸತ್ಯ ಕುರಿತು ಕಣ್ತೆರೆಯುವ ಮೊದಲೇ ಅದು ಬರಬೇಕೆ?
ಅದಾಗದಿರಲೆಂದು ನಾನು ಎಲ್ಲರೂ ಪ್ರಯತ್ನ ಕೈಕೊಳ್ಳಿರೆಂದು ಕೇಳುತ್ತೇನೆ.
ಶಬ್ದಗಳಲ್ಲಿ ಸತ್ಯ, ಕ್ರಿಯೆಯಲ್ಲಿ ಸತ್ಯ, ಸಂಕಲ್ಪದಲ್ಲಿ ಸತ್ಯ, ಭಾವನೆಗಳಲ್ಲಿ
ಸತ್ಯ ಹೀಗೆ ಸತ್ಯ ಮಾತ್ರ ನಮ್ಮನ್ನು ಕಾಪಾಡಬಲ್ಲದು.
ದೈವೀ ಸತ್ಯಕ್ಕೆ ಸೇವೆ ಸಲ್ಲಿಸುವುದು ಇಲ್ಲವೆ ಹಾಳಾಗಿ ಹೋಗುವುದು
ಇವೆರಡರ ನಡುವೆ ಆಯ್ಕೆ ಮಾಡಿಕೊಳ್ಳುವುದಿದೆ.


*

ಮಿಥ್ಯೆಗಿಂತ ಸತ್ಯ ಹೆಚ್ಚು ಬಲಿಷ್ಠವಾದದ್ದು. ಜಗತ್ತನ್ನಾಳುವ ಅಮರ ದೈವೀ ಸಾಮರ್ಥ್ಯವಿದೆ. ಅದರ ನಿರ್ಣಯಗಳು ಯಾವಾಗಲೂ ಜಯಶಾಲಿಯಾಗುವವು. ನೀವು ಅದರ ಜೊತೆಗೆ ಸೇರಿಕೊಳ್ಳಿರಿ, ಕೊನೆಯ ವಿಜಯದ ಬಗ್ಗೆ ನಿಶ್ಚಿತತೆ ಪಡೆಯುವಿರಿ.

ದೈವೀಸತ್ಯವನ್ನು ನಿಮ್ಮ ಶಕ್ತಿಯನ್ನಾಗಿ ಮಾಡಿಕೊಳ್ಳಿರಿ, ಅದನ್ನೇ ನಿಮ್ಮ ಆಶ್ರಯ ಸ್ಥಾನವನ್ನಾಗಿ ಮಾಡಿಕೊಳ್ಳಿರಿ.

*





**ದೈವೀಸತ್ಯದ ಆಗಮನಕ್ಕೆ ಪ್ರಣಾಮ :**

**ಪ್ರಶ್ನೆ :** *ಮಧುರ ಮಾತೆಯವರೆ, ಯಾವಾಗಲೂ ಒಳ್ಳೆಯವರಾದವರು, ಸತ್ಯವಂತರಾದವರು ಜಯಶಾಲಿಗಳಾಗುತ್ತಾರೆ ಎಂದು ಹೇಳಲಾಗಿದೆ, ಆದರೆ ಬಹಳಷ್ಟುಸಲ ಅದು ಬೇರೆ ರೀತಿಯದಾಗಿರುವುದನ್ನು ನೋಡುತ್ತೇವೆ: ದುಷ್ಟರು ಜಯಗಳಿಸುತ್ತಾರೆ, ಅವರು ವೇದನೆಗೊಳಗಾಗದಂತೆ ರಕ್ಷಣೆ ಪಡೆದಿರುವುದು ಕಂಡುಬರುತ್ತದೆ.*

**ಶ್ರೀಮಾತೆ :** (ನಗುತ್ತಾರೆ, ಸ್ವಲ್ಪ ಕಾಲ ಮೌನದಿಂದ ಇರುತ್ತಾರೆ). ಎರಡು ವಿಚಾರಗಳನ್ನು ಕುರಿತು ಜನರು ಗೊಂದಲಕ್ಕೀಡಾಗುತ್ತಾರೆ. ಅದು ವಿಶ್ವಂಭರ ಹಾಗೂ ಆಧ್ಯಾತ್ಮಿಕ ದೃಷ್ಟಿಕೋನದಿಂದ, ಜನರು ಧನಾತ್ಮಕವಾಗಿ "ಒಳ್ಳೆಯದು" ಎಂದುಕೊಂಡಿರುವುದಾಗಿರುವುದಿಲ್ಲ, ಆದರೆ ದೈವೀಸತ್ಯವಾಗಿರುತ್ತದೆ, ದೈವೀಸತ್ಯ ಕೊನೆಯ ಶಬ್ದವನ್ನು ಹೇಳುತ್ತದೆ, ಅದನ್ನು ಬೇರೆ ಹೇಳಬೇಕಾಗಿಲ್ಲ. ಎಂದರೆ ಕೊನೆಗೆ ಭಗವಂತನೇ ವಿಜಯಿಯಾಗುತ್ತಾನೆ. ಅದನ್ನೇ ಹೇಳಲಾಗಿದೆ, ಆಧ್ಯಾತ್ಮಿಕ ಜೀವನವನ್ನು ಜೀವಿಸಿದವರು ಹೇಳಿದ್ದೂ ಅದೇ ಆಗಿದೆ. ಅದು ಪರಿಪೂರ್ಣವಾಗಿ ವಾಸ್ತವವಾದದ್ದು. ಜನರು ಅದನ್ನು ಅರ್ಥೈಸಿಕೊಂಡು "ನಾನು ಒಳ್ಳೆಯ ಹುಡುಗ,

ನಾನು ಸತ್ಯವೆಂದು ಯೋಚಿಸುವುದರ ಪ್ರಕಾರ ಜೀವಿಸುತ್ತೇನೆ, ಆದ್ದರಿಂದ ಎಲ್ಲ ಅಸ್ತಿತ್ವದಿಂದ ನನಗೆ ಒಳ್ಳೆಯದಾಗಿರಬೇಕು" ಎಂದು ಹೇಳುತ್ತಾರೆ. (ಶ್ರೀಮಾತೆ–ಯವರು ನಗುತ್ತಾರೆ.) ಮೊದಲನೆಯದಾಗಿ ಮನುಷ್ಯ ತನ್ನ ಬಗ್ಗೆ ಹೊಂದಿರುವ ಮೆಚ್ಚಿಕೆ ಯಾವಾಗಲೂ ಸಂಶಯಾಸ್ಪದವಾಗಿರುತ್ತದೆ ಮತ್ತು ಈಗಿರುವ ಹಾಗೆ ಇರುವ ಜಗತ್ತಿನಲ್ಲಿ ಎಲ್ಲವೂ ಮಿಶ್ರಣಕ್ಕೊಳಗಾಗಿರುತ್ತದೆ. ಅರ್ಧ ಕುರುಡಾದ ಮಾನವ ಪ್ರಜ್ಞೆಗೆ ತೆರೆದಿರಿಸಿಕೊಂಡ ರೀತಿಯಲ್ಲಿ ದೈವೀ ಸತ್ಯದ ದೈವೀ ನಿಯಮ ತನ್ನನ್ನು ಪ್ರಕಟಪಡಿಸುವುದಿಲ್ಲ–ಆ ಪ್ರಜ್ಞೆಗೆ ಅದನ್ನು ಅರ್ಥಮಾಡಿಕೊಳ್ಳಲೂ ಕೂಡ ಆಗುವುದಿಲ್ಲ. ಹೆಚ್ಚು ನಿಖರವಾಗಿ ಹೇಳುವುದಾದರೆ ಸತತ ತನ್ನನ್ನು ಸಿದ್ಧಿಸಿಕೊಳ್ಳು–ತ್ತಿರುವುದು ಪರಮೋಚ್ಚ ದರ್ಶನ, ಆದರೆ ಮಿಶ್ರಣಕ್ಕೊಳಗಾದ ಭೌತಿಕ ಜಗತ್ತಿನಲ್ಲಿ ಅದರ ಸಿದ್ಧಿ, ಮನುಷ್ಯರು ಒಳ್ಳೆಯದು ಹಾಗೂ ಸತ್ಯವಾದದ್ದು ಎಂದು ಕರೆಯು–ವಂತಹದರ ವಿಜಯ ಎಂದು ಅಜ್ಞಾನಿ ಮಾನವ ದೃಷ್ಟಿಗೆ ತೋರಿಬರುವುದಿಲ್ಲ ಆದರೆ (ಮೋಜು ಮಾಡುವ ರೀತಿಯಲ್ಲಿ ಹೇಳುವುದಾದರೆ) ಅದು ಭಗವಂತನ ತಪ್ಪಲ್ಲ, ಮನುಷ್ಯರು ಮಾಡುವ ತಪ್ಪು. ಎಂದರೆ ಭಗವಂತ ತಾನು ಏನು ಕೈಕೊಳ್ಳುತ್ತಿದ್ದೇನೆ ಎಂಬುದನ್ನು ಅರಿತಿರುತ್ತಾನೆ, ಮನುಷ್ಯರು ಅದನ್ನು ಅರ್ಥ ಮಾಡಿಕೊಳ್ಳುವುದಿಲ್ಲ. . . .

ಜಗತ್ತು ನಿರಂತರ ಬದಲಾಗುತ್ತದೆ, ಒಂದು ಸೆಕೆಂಡು ಕಾಲ ಕೂಡ ಅದು ತಾನಿದ್ದ ಹಾಗಿರುವುದಿಲ್ಲ ಮತ್ತು ಸಾರ್ವತ್ರಿಕ ಸಾಮರಸ್ಯ ಹೆಚ್ಚು ಹೆಚ್ಚಾಗಿ ತನ್ನನ್ನು ಪರಿಪೂರ್ಣವಾಗಿ ಅಭಿವ್ಯಕ್ತಗೊಳಿಸುತ್ತದೆ, ಆದ್ದರಿಂದ ಯಾವುದೂ ಅದಿದ್ದ ಹಾಗೆ ಉಳಿದುಕೊಳ್ಳುವುದು ಸಾಧ್ಯವಿಲ್ಲ, ತದ್ವಿರುದ್ಧವಾದ ತೋರಿಕೆಗಳಿದ್ದಾಗ್ಯೂ ಇಡಿ–ಯಾದದ್ದು ಸತತ ಪ್ರಗತಿ ಸಾಧಿಸುತ್ತಿರುತ್ತದೆ, ಸಾಮರಸ್ಯ ಹೆಚ್ಚು ಸಮರಸವುಳ್ಳ–ದ್ದಾಗುತ್ತದೆ, ಮತ್ತು ಪ್ರಕಟಣೆಯಲ್ಲಿ ಪ್ರಕಟಿತವಾದದ್ದು ಹೆಚ್ಚು ಹೆಚ್ಚಾಗಿ ಸತ್ಯವುಳ್ಳ–ದ್ದಾಗುತ್ತದೆ. ಆದರೆ ಅದನ್ನು ಕಂಡುಕೊಳ್ಳುವುದಕ್ಕೆ ಇಡಿಯಾದದ್ದನ್ನು ನೋಡಬೇಕು, ಮನುಷ್ಯ ಮಾನವ ವ್ಯಾಪ್ತಿಗೆ ಸೇರಿದ್ದನ್ನು ನೋಡುವುದಿಲ್ಲ, ಕೇವಲ ತನ್ನ ವೈಯಕ್ತಿಕ ವ್ಯಾಪ್ತಿಗೆ ಸೇರಿದ್ದನ್ನು ನೋಡುತ್ತಾನೆ, ಅದು ಸೂಕ್ಷ್ಮದರ್ಶಕದಲ್ಲಿ ಕಂಡುಬರಬಹು–ದಾದಷ್ಟು ಚಿಕ್ಕದಾಗಿರುತ್ತದೆ,–ಅವನು ಅರ್ಥ ಮಾಡಿಕೊಳ್ಳುವುದಿಲ್ಲ.

ತನ್ನನ್ನು ಪರಿಪೂರ್ಣಗೊಳಿಸುತ್ತ ಹೋಗುವ ಎರಡು ರೀತಿಗಳುಳ್ಳ ವಿಷಯವಿದೆ. (ಒಂದರೊಳಗೊಂದು ಸೇರಿಕೊಂಡಿರುವ ಸೂಚನೆ ಮಾಡುತ್ತಾರೆ) ಅದರಲ್ಲಿ ಪರಸ್ಪರ ಕ್ರಿಯೆಯಿರುತ್ತದೆ: ಪ್ರಕಟಣೆ ತನ್ನ ಬಗ್ಗೆ ಹೆಚ್ಚು ಪ್ರಜ್ಞಾಪೂರ್ಣ–



ವಾಗುತ್ತಿದ್ದಂತೆಯೆ ಅದರ ಅಭಿವ್ಯಕ್ತಿ ತನ್ನನ್ನು ಪರಿಪೂರ್ಣಗೊಳಿಸುತ್ತದೆ, ಹೆಚ್ಚು ಸತ್ಯವಾದದ್ದೂ ಆಗುತ್ತದೆ. ಎರಡೂ ಚಲನೆಗಳು ಒಟ್ಟಿಗೆ ಸಾಗುತ್ತವೆ. . . .

ಸಮಸ್ಯೆಗಳೆಂದು ಕರೆಯಲಾಗುವ ಇವೆಲ್ಲವುಗಳು–ಇವುಗಳನ್ನು ಮನುಷ್ಯ ಎಲ್ಲ ಸಮಯದಲ್ಲೂ ಸ್ವೀಕರಿಸುತ್ತಾನೆ. ಮನಸ್ಸಿನ ಸಮಸ್ಯೆಗಳು ಹಾಗೂ ಪ್ರಶ್ನೆಗಳು (ಅವಿದ್ಯೆಯಲ್ಲಿನ ಎಲ್ಲ ಸಮಸ್ಯೆಗಳು ಅವು ಆಗಿರುವುದಿಲ್ಲವೆ?)– ಎರೆಹುಳು ವಿಗಾಗಿರುವ ಸಮಸ್ಯೆಗಳು. ಅಲ್ಲಿ ಮೇಲ್ಗಡೆ ಹೊರಹೊಮ್ಮಿ ಹೋದಾಗ ಇಂತಹ ಸಮಸ್ಯೆಗಳು ಅಸ್ತಿತ್ವದಲ್ಲಿರುವುದು ಸಾಧ್ಯವಿಲ್ಲ, ಅಲ್ಲಿ ವೈರುಧ್ಯಗಳಿರುವುದಿಲ್ಲ. ದರ್ಶನ ಸಾಕಷ್ಟಾಗಿರದೆ ಇರುವ ಕಾರಣದಿಂದಾಗಿ, ಮತ್ತು ವಿಷಯವನ್ನು ಎಲ್ಲ ದೃಷ್ಟಿಕೋನ–ಗಳಿಂದ ಒಂದೇ ಕಾಲಕ್ಕೆ ನೋಡಲು ಅಸಮರ್ಥತೆ ಇರುವುದರಿಂದ ವೈರುಧ್ಯಗಳು ಬರುತ್ತವೆ.

ಸಂದರ್ಭ ಯಾವುದೇ ಇರಲಿ, ಪ್ರಶ್ನೆಯನ್ನು ಅದರ ವಾಸ್ತವ ಸ್ಥಿತಿಯಲ್ಲಿ ನೋಡಿದಾಗ ಯಾವ ಋಷಿಯೂ, ಯಾವುದೇ ಸಮಯದಲ್ಲಾದರೂ "ಒಳ್ಳೆಯ–ವನಾಗು, ಬಾಹ್ಯದಲ್ಲಿ ಎಲ್ಲವೂ ನಿನ್ನೊಂದಿಗೆ ಸರಿಯಾಗಿ ಸಾಗುವುದು" ಎಂದು ಹೇಳಿಲ್ಲ–ಏಕೆಂದರೆ ಅದು ಮೂರ್ಖತನ. ಅವ್ಯವಸ್ಥೆಯಲ್ಲಿರುವ, ಮಿಥ್ಯೆಯಲ್ಲಿರುವ ಜಗತ್ತಿನಲ್ಲಿ ಅದಕ್ಕಾಗಿ ಭರವಸೆ ಹೊಂದಿರುವುದು ತರ್ಕಬದ್ಧವಾಗಿರುವುದಿಲ್ಲ. ಆದರೆ ನೀವಿರುವ ರೀತಿಯಲ್ಲಿ ಸಾಕಷ್ಟು ನಿಷ್ಕಪಟರಾಗಿದ್ದರೆ, ಅಖಂಡವಾಗಿದ್ದರೆ, ಇಡಿಯಾಗಿದ್ದರೆ ನೀವು ಆಂತರಿಕ ಸಂತೋಷ, ಪೂರ್ತಿ ತೃಪ್ತಿಗಳನ್ನು ಎಂತಹದೇ ಪರಿಸ್ಥಿತಿಯಲ್ಲಿ ಪಡೆಯಬಹುದು ಮತ್ತು ಅವುಗಳನ್ನು ಸ್ಪರ್ಶಿಸುವ ಸಾಮರ್ಥ್ಯ ಯಾವುದಕ್ಕೂ ಇರುವುದಿಲ್ಲ.

*

**ಪ್ರಶ್ನೆ :** *"ದೈವೀ ಸತ್ಯದ ಕೊನೆಯ ವಿಜಯದ ಬಗ್ಗೆ ಗಾಢನಂಬಿಕೆ" ಇರಬೇಕೆಂದು ನೀವು ಹೇಳುತ್ತೀರಿ. ಆದರೆ ಈ ಗಾಢನಂಬಿಕೆ ಸಾಮಾನ್ಯ ಜೀವನದಲ್ಲಿ ಕಲಿಸಿಕೊಡುತ್ತಿರುವುದಕ್ಕಿಂತ ಭಿನ್ನವಾಗಿ, ಕೆಲವೊಮ್ಮೆ ತದ್ವಿರುದ್ಧವಾಗಿ ಇರುವುದಿಲ್ಲವೆ?*

**ಶ್ರೀಮಾತೆ :** ಹೌದು. ಸಾಧಾರಣವಾಗಿ ಪ್ರಕೃತಿಯಲ್ಲಿ ವಿಷಯಗಳು ಕೆಟ್ಟ ರೀತಿಯಲ್ಲಿ ಕೊನೆಗೊಳ್ಳುತ್ತವೆ ಎಂದು ನಂಬಲಾಗಿದೆ. ತಮ್ಮ ಜೀವನದಲ್ಲಿ ಶ್ರೇಷ್ಠ ಯಶಸ್ಸು ಗಳಿಸಿದ ಸಂತೋಷ ಪಡೆದು ಕೊನೆಯಲ್ಲಿ ದುಃಖದಾಯಕ ಅಂತ್ಯ

ಕಂಡವರ ಬಗ್ಗೆ, ಅಸಾಧಾರಣ ಕ್ಷಮತೆಗಳಿದ್ದವರು ಕೊನೆಗೆ ಅವುಗಳನ್ನು ಕಳೆದು–ಕೊಂಡುದುದರ ಬಗ್ಗೆ, ಬಹಳ ಕಾಲದವರೆಗೆ ಅದ್ಭುತ ನಾಗರಿಕತೆಯನ್ನು ಉಳಿಸಿ–ಕೊಂಡು ಇತರ ದೇಶಗಳಿಗೆ ಮಾದರಿಯಾಗಿದ್ದ ದೇಶ ಅದನ್ನು ಕಳೆದುಕೊಂಡು ಕೆಟ್ಟ ರೀತಿಯ ಬದಲಾವಣೆಗೆ ಒಳಗಾಗಿ, ತಾನು ಮೊದಲು ಹೇಗಿದ್ದೆ ಎಂಬುದನ್ನು ನೆನಪಿಸಿಕೊಳ್ಳಲೂ ಆಗದಂತಹ ಪರಿಸ್ಥಿತಿಗೆ ಒಳಗಾದ ದೇಶದ ಬಗ್ಗೆ ಪ್ರತಿಯೊಬ್ಬನೂ ತಿಳಿದಿರುತ್ತಾನೆ. ಪೃಥ್ವಿಯ ಕತೆಯಲ್ಲಿ ಮೊದಲಿಗೆ ವಿಜಯಗಳ ಕತೆ, ನಂತರ ಸೋಲುಗಳ ಕತೆ ಬರುತ್ತದೆ, ಸೋಲುಗಳ ಕತೆ ಮೊದಲಿಗೆ, ನಂತರ ವಿಜಯಗಳ ಕತೆ ಬರುವುದಿಲ್ಲ.

ಆದರೆ ವಿಶ್ವಂಭರ ಹಾಗೂ ದೈವಿಕ ವಿಷಯಗಳ ಪ್ರಶ್ನೆ ಇದ್ದಾಗ ಅವಶ್ಯ ವಾದದ್ದು ವಸ್ತು–ವಿಷಯಗಳ ಬಗ್ಗೆ ವಿಶ್ವಂಭರ ದರ್ಶನ ಹಾಗೂ ದೈವೀ ತಿಳಿವಳಿಕೆ, ಅವುಗಳಿಂದಾಗಿ ಸತ್ಯ ತನ್ನನ್ನು ಹೇಗೆ ಅಭಿವ್ಯಕ್ತಪಡಿಸುತ್ತದೆ ಎಂಬುದನ್ನು ತಿಳಿದು–ಕೊಳ್ಳಬಹುದಾಗಿದೆ. ವಿಷಯಗಳು ಒಳ್ಳೇ ರೀತಿಯಲ್ಲಿ ಪ್ರಾರಂಭ ಗೊಂಡಾಗ್ಯೂ ಕೆಟ್ಟ ರೀತಿಯಲ್ಲಿ ಕೊನೆಗೊಳ್ಳುತ್ತವೆ, ದೌರ್ಬಲ್ಯ, ಕಪಟಾಚಾರ, ಮಿಥ್ಯೆ ಮತ್ತು ದುಷ್ಟತನ ಇವುಗಳದೇ ಮೇಲ್ಮೈಯಾಗುತ್ತಿರುವ ಹಾಗೆ ತೋರಿ ಬರುತ್ತದೆ ಎಂಬ ಸರ್ವ ಸಾಮಾನ್ಯ ರೀತಿಯ ನಿರಾಶಾವಾದವಿದೆ. ಆ ಕಾರಣದಿಂದಾಗಿಯೆ, ಜಗತ್ತನ್ನು ತಮ್ಮದೇ ವೈಯಕ್ತಿಕ ಆಯಾಮದಿಂದ ನೋಡುವ ಜನರು ಜಗತ್ತು ಕೆಟ್ಟದ್ದಾಗಿದೆ, ನಾವು ಕೇವಲ ಅದರೊಂದಿಗಿನ ಕಾರ್ಯ ಮುಗಿಸಿ ಅದರಿಂದ ಆದಷ್ಟು ಬೇಗ ಹೊರಟು ಹೋಗಬೇಕು ಎಂದು ಹೇಳಿದ್ದಾರೆ. ಬೋಧಕರು ಇದನ್ನು ಕಲಿಸಿ–ಕೊಟ್ಟಿದ್ದರು ಆದರೆ ಅವರ ಬೋಧನೆಯು ಅವರ ದರ್ಶನ ಬಹಳ ಸಂಕುಚಿತ–ವಾಗಿತ್ತು ಅವರ ಮಾನವ ವ್ಯಕ್ತಿವಿಶಿಷ್ಟತೆಯ ಆಯಾಮದಲ್ಲಿತ್ತು ಎಂದು ಸಿದ್ಧಪಡಿಸುತ್ತದೆ.

ಸತ್ಯ ಹೇಳುವುದಾದರೆ ಪ್ರಕೃತಿಯ ಚಲನೆಗಳು ಸಮುದ್ರದ ಅಲೆಗಳ ಹಾಗಿರುತ್ತವೆ, ಅವು ಮೇಲೇರಿ ಬರುತ್ತವೆ, ಕೆಳಗೆ ಸರಿದು ಹೋಗುತ್ತವೆ. ವಿಶ್ವಂಭರ ಜೀವನದಲ್ಲಿ, ಪೃಥ್ವಿಯ ಮೇಲಿನ ಜೀವನದಲ್ಲಿಯೂ ಕೂಡ ಇದರರ್ಥ ಪ್ರಗತಿಪರ ಮುಂದುವರಿಕೆಯಾಗಿರುತ್ತದೆ, ಆದಾಗ್ಯೂ ಆ ಪ್ರಗತಿ ಹಿಂದೆಗೆತಗಳಿಂದಾಗಿ ಕಡಿತ–ಕ್ಕೊಳಗಾಗುತ್ತದೆ. ಆದರೆ ಈ ಹಿಂದೆಗೆತಗಳು ತೋರಿಕೆಯವಾಗಿರುತ್ತವೆ, ಮುಂದೆ



ಜಿಗಿಯುವುದಕ್ಕಾಗಿ ಸ್ವಲ್ಪ ಹಿಂದೆ ಸರಿದುಕೊಂಡಂತಿರುತ್ತದೆ. ನೀವು ನಿಮ್ಮನ್ನು ಹಿಂದೆಳೆದುಕೊಂಡಂತೆ ಎಂದು ಭಾಸವಾಗುತ್ತದೆ, ಆದರೆ, ಅದು ಸರಳವಾಗಿ, ಬಹಳ ದೂರ ಸಾಗುವುದಕ್ಕಾಗಿರುತ್ತದೆ.

**(15/184, 13/223, 11/75–77, 4/22–23)** **– ಶ್ರೀಮಾತೆ**

*

## ಅವಿದ್ಯೆ ಎಂದರೇನು?

ಅವಿದ್ಯೆ ಎಂದರೆ ಪ್ರತ್ಯೇಕಗೊಳಿಸುವ ಪ್ರಜ್ಞೆ ಹಾಗೂ ಅದರಿಂದ ಹೊರಹರಿದು ಬರುವ ಅಹಂಕಾರದಿಂದ ಕೂಡಿದ ಮನಸ್ಸು ಮತ್ತು ಜೀವನ, ಮತ್ತು ಪ್ರತ್ಯೇಕ–ಗೊಳಿಸುವ ಪ್ರಜ್ಞೆ, ಅಹಂಕಾರದಿಂದ ಕೂಡಿದ ಮನಸ್ಸು ಮತ್ತು ಜೀವನ ಇವುಗಳಿಗೆ ಸ್ವಾಭಾವಿಕ ಎನಿಸುವುದೆಲ್ಲ ಆಗಿರುತ್ತದೆ.

ವಿಶ್ವವ್ಯಾಪಿ ಬುದ್ಧಿಮತ್ತೆ ತನ್ನನ್ನು ಅತಿಮಾನಸ ಪ್ರಕಾಶದಿಂದ ಪ್ರತ್ಯೇಕಗೊಳ್ಳುವ ಚಲನೆಯಿಂದ ಹಾಗೂ ದೈವೀಸತ್ಯವನ್ನು ಕಳೆದುಕೊಂಡಿದ್ದರಿಂದ ಉಂಟಾದ ಪರಿಣಾಮವೇ ಅವಿದ್ಯೆ, ಕಳೆದುಕೊಂಡ ಆ ಸತ್ಯ, ಶಕ್ತಿ ಕ್ರಿಯೆ ಹಾಗೂ ಆನಂದ–ಗಳದಾಗಿತ್ತು.

ಪರಿಣಾಮವಾಗಿ ಸಮಗ್ರ ಸತ್ಯವಿರುವ, ಆಧ್ಯಾತ್ಮ ರಹಸ್ಯವಿದ್ಯೆಯಿಂದ ಸೃಷ್ಟಿಯಾದ ದೈವೀ ಸಾಮರಸ್ಯವಿರುವ ಜಗತ್ತಿನ ಬದಲಾಗಿ, ಅರ್ಧಸತ್ಯ ಮತ್ತು ಅರ್ಧದೋಷವಿರುವ ನಿಮ್ನತರ, ಭಾಗಶಃ ಸತ್ಯವಿರುವ ವಿಶ್ವವ್ಯಾಪಿ ಬುದ್ಧಿಮತ್ತೆಯಿಂದ ಸ್ಥಾಪಿತಗೊಂಡ ಜಗತ್ತು ನಮ್ಮದಾಗಿದೆ.

ಇದನ್ನೇ ಶಂಕರಾಚಾರ್ಯರಂತಹ ಪ್ರಾಚೀನ ಚಿಂತಕರು ಜಗತ್ತಿನ ಹಿಂದಿರುವ ಸತ್ಯ–ಶಕ್ತಿಯನ್ನು ಗ್ರಹಿಸದೆ, ಮಾಯೆ ಎಂದು ಖಂಡಿಸಿದರು ಮತ್ತು ಅದು ಭಗವಂತನ ಅತ್ಯುಚ್ಚ ಸೃಜನಾತ್ಮಕ ಸಾಮರ್ಥ್ಯವಾಗಿರಬಹುದು ಎಂದು ಯೋಚಿಸಿದರು.

ಈ ಸೃಷ್ಟಿಯ ಪ್ರಜ್ಞೆಯಲ್ಲಿರುವುದೆಲ್ಲವೂ ಸೀಮಿತವಾಗಿದೆ ಇಲ್ಲವೆ ಸಮಗ್ರ ದೈವೀ ಪ್ರಕಾಶದಿಂದ ಪ್ರತ್ಯೇಕಗೊಂಡು ವಿಕೃತವಾಗಿದೆ. ಅದು ಗ್ರಹಿಸುವ ಸತ್ಯ ಕೂಡ ಅರ್ಧಜ್ಞಾನ ಪಡೆದ ಸ್ವರೂಪದ್ದಾಗಿದೆ.

ಆದ್ದರಿಂದ ಅದನ್ನು ಅವಿದ್ಯೆ ಎಂದು ಕರೆಯಲಾಗಿದೆ.

*

ಆದರೆ ಅವಿದ್ಯೆ ಈ ಜಗತ್ತಿನ ಪ್ರಕೃತಿಯ ಕೇವಲ ಒಂದು ಭಾಗ, ಇಡಿಯಾದ ಭಾಗವಲ್ಲ, ಮೂಲ ಸಾಮರ್ಥ್ಯವೂ ಅಲ್ಲ, ಸೃಷ್ಟಿಕರ್ತವಾದದ್ದೂ ಅಲ್ಲ, ಅದರ ಉಚ್ಚತರ ಭಾಗದಲ್ಲಿ ಸ್ವ–ಸೀಮಿತತೆಗೆ ಒಳಗಾದ ಜ್ಞಾನ, ಮತ್ತು ಅದರ ನಿಮ್ನ ಭಾಗದಲ್ಲಿ ಕೇವಲ ಭೌತಿಕ ಅಚೇತನವಾದುದರಿಂದ ಹೊರಹೊಮ್ಮುವಿಕೆ, ಅದು ಒತ್ತಿ ಹಿಡಿಯಲ್ಪಟ್ಟ ದೈವೀ ಪ್ರಜ್ಞೆಯಾಗಿದ್ದು ತನ್ನನ್ನು ಕಂಡುಕೊಳ್ಳಲು, ಮೊದಲಿನ ಸ್ವರೂಪ ಪಡೆಯಲು, ದೈವೀ ಜ್ಞಾನವನ್ನು ಪ್ರಕಟಿಸಲು ಶ್ರಮಿಸುತ್ತಿದೆ. ಆ ದೈವೀ ಜ್ಞಾನ ಅದರ ನಿಜವಾದ ಗುಣಲಕ್ಷಣ, ಅಸ್ತಿತ್ವದ ಬುನಾದಿ.

**(22/381, 19/845)** – **ಶ್ರೀ ಅರವಿಂದರು**

*

## ಏಳು ವಿಧದ ಅವಿದ್ಯೆ

ಭೌತಿಕ, ಸ್ಥಳವಿಸ್ತಾರವಿರುವ ಮತ್ತು ಅನಿತ್ಯವಾದ ವಿಶ್ವದಲ್ಲಿ ಪ್ರತ್ಯೇಕಗೊಳಿಸುವ ಅಸ್ತಿತ್ವವಿರುವುದರ ಪರಿಸ್ಥಿತಿಯಿಂದಾಗಿ ಈ ಅವಿದ್ಯೆಯಲ್ಲಿ ನಾವು ಸಾಮಾನ್ಯವಾಗಿ ಜೀವಿಸುತ್ತಿರುವುದನ್ನು ನೋಡಿದಾಗ, ಅದರ ಹೆಚ್ಚು ಮಬ್ಬಾದ ಪಾರ್ಶ್ವದಲ್ಲಿ, ಅದನ್ನು ಯಾವುದೇ ದಿಕ್ಕಿನಿಂದ ನೋಡಿದಾಗ ಇಲ್ಲವೆ ಸಮೀಪಿಸಿದಾಗ, ಅದು ಹಲವಾರು ಪಾರ್ಶ್ವಗಳುಳ್ಳ ಸ್ವ–ಅಜ್ಞಾನದಲ್ಲಿ ತನ್ನನ್ನು ಕುಗ್ಗಿಸಿಕೊಳ್ಳುತ್ತಿರುವುದನ್ನು ನೋಡುತ್ತೇವೆ.

**ಮೊದಲನೆಯದು : ಮೂಲ ಅಜ್ಞಾನ**

ಎಲ್ಲ ಸತ್ತೆಯ ಹಾಗೂ ಸಂಭೂತಿಯ ಮೂಲವಾದ ಸರ್ವತಂತ್ರ ಸ್ವತಂತ್ರ (Absolute) ವಾದುದರ ಬಗ್ಗೆ ನಮಗೆ ಜ್ಞಾನವಿಲ್ಲ. ಸತ್ತೆಯ ಭಾಗಶಃ ವಾಸ್ತವತೆ–ಗಳನ್ನು, ಸಂಭೂತಿಯ ತಾತ್ಕಾಲಿಕ ಸಂಬಂಧಗಳನ್ನು ಅಸ್ತಿತ್ವದ ಇಡೀ ಸತ್ಯವೆಂದು ಭಾವಿಸುತ್ತೇವೆ ಅದು ಮೊದಲನೆಯ ಮೂಲ ಅಜ್ಞಾನ.

**ಎರಡನೆಯದು : ವಿಶ್ವವ್ಯಾಪಿ ಅಜ್ಞಾನ**

ಸ್ಥಳವಿಸ್ತಾರ ರಹಿತ, ಕಾಲರಹಿತ, ನಿಶ್ಚಲ ಮತ್ತು ಬದಲಾಗದ ದಿವ್ಯಾತ್ಮದ ಬಗ್ಗೆ ನಮಗೆ ಜ್ಞಾನವಿಲ್ಲ. ಕಾಲ ಹಾಗೂ ಸ್ಥಳವಿಸ್ತಾರದಲ್ಲಿರುವ ವಿಶ್ವವ್ಯಾಪಿ ಸಂಭೂತಿಯ ಸತತ ಚಲನೆ ಮತ್ತು ಬದಲಾವಣೆಗಳನ್ನು ಅಸ್ತಿತ್ವದ ಇಡೀ ಸತ್ಯವೆಂದು ಭಾವಿಸುತ್ತೇವೆ.–ಅದು ಎರಡನೆಯ ವಿಶ್ವವ್ಯಾಪಿ ಅಜ್ಞಾನ.



**ಮೂರನೆಯದು : ಅಹಂಭಾವ ತುಂಬಿಕೊಂಡದ್ದರಿಂದ ಉಂಟಾಗುವ ಅಜ್ಞಾನ :**

ನಮ್ಮ ವಿಶ್ವಂಭರ ಆತ್ಮ, ವಿಶ್ವಂಭರ ಅಸ್ತಿತ್ವ, ವಿಶ್ವಂಭರ ಪ್ರಜ್ಞೆ, ಎಲ್ಲ ಸತ್ತೆಯೊಡನೆ ಹಾಗೂ ಸಂಭೂತಿಯೊಡನೆ ನಮ್ಮ ಅನಂತ ಏಕತೆ ಇವುಗಳ ಬಗ್ಗೆ ನಮಗೆ ಜ್ಞಾನವಿಲ್ಲ. ನಮ್ಮ ಸೀಮಿತ, ಅಹಂಕಾರ ತುಂಬಿದ ಮನೋವೃತ್ತಿ, ಜೀವಶಕ್ತಿ, ದೈಹಿಕತೆ ಇವುಗಳನ್ನು ನಮ್ಮ ನಿಜವಾದ ಆತ್ಮ ಎಂದು ಭಾವಿಸುತ್ತೇವೆ, ಅದನ್ನು ಹೊರತುಪಡಿಸಿದ್ದನ್ನೆಲ್ಲ ನಮ್ಮ ಆತ್ಮವಲ್ಲ ಎಂದು ಪರಿಗಣಿಸುತ್ತೇವೆ.–ಅದು ಮೂರನೆಯ, ಅಹಂಭಾವ ತುಂಬಿಕೊಂಡಿದ್ದರಿಂದ ಉಂಟಾಗುವ ಅಜ್ಞಾನ.

**ನಾಲ್ಕನೆಯದು : ನಶ್ವರವಾದುದರ ಬಗೆಗಿನ ಅಜ್ಞಾನ**

ಅನಂತ ಕಾಲದಲ್ಲಿ ಸಂಭವಿಸುವ ನಮ್ಮ ಶಾಶ್ವತ ಸಂಭೂತಿಯ ಬಗ್ಗೆ ನಮಗೆ ಜ್ಞಾನವಿಲ್ಲ. ಕಾಲದ ಚಿಕ್ಕ ಅವಧಿಯಲ್ಲಿ, ಸ್ಥಳವಿಸ್ತಾರದ ಚಿಕ್ಕ ಕ್ಷೇತ್ರದಲ್ಲಿಯ ಈ ಚಿಕ್ಕ ಜೀವನವನ್ನು ನಮ್ಮ ಆದಿ, ಮಧ್ಯ ಮತ್ತು ಅಂತ್ಯ ಎಂದು ಭಾವಿಸುತ್ತೇವೆ. ಅದು ನಾಲ್ಕನೆಯ, ನಶ್ವರವಾದುದರ ಬಗೆಗಿನ ಅಜ್ಞಾನ.

**ಐದನೆಯದು : ಮನಶ್ಶಾಸ್ತ್ರೀಯ ಅಜ್ಞಾನ**

ಈ ಅಲ್ಪಕಾಲದ ನಶ್ವರ ಸಂಭೂತಿಯಲ್ಲಿಯೂ ಕೂಡ ನಮ್ಮ ವಿಶಾಲ ಹಾಗೂ ಸಂಕೀರ್ಣ ಸತ್ತೆಯ ಬಗ್ಗೆ, ನಮ್ಮ ಮೇಲ್ಮೈ ಸಂಭೂತಿಗೆ ಅತಿಮಾನಸದ್ದಾಗಿರುವ, ಅವಚೇತನದ್ದಾಗಿರುವ, ಒಳಚೇತನದ್ದಾಗಿರುವ (intraconscrent), ಸುತ್ತುವರಿದ ಚೇತನದಾಗಿರುವ (circum conscient) ಸತ್ತೆಯ ಬಗ್ಗೆ ನಮಗೆ ಜ್ಞಾನವಿರು–ವುದಿಲ್ಲ, ಆ ಮೇಲ್ಮೈ ಸಂಭೂತಿಯನ್ನೇ, ಅದರ ಮಾನಸೀಕರಣಗೊಂಡ ಅನುಭವ ಗಳಲ್ಲಿಯ ಅಲ್ಪಪ್ರಮಾಣದ ಆಯ್ಕೆಗಳನ್ನೇ ನಮ್ಮ ಇಡೀ ಅಸ್ತಿತ್ವವೆಂದು ತೆಗೆದು ಕೊಳ್ಳುತ್ತೇವೆ.–ಅದು ಐದನೆಯದು, ಮನಶ್ಶಾಸ್ತ್ರೀಯ ಅಜ್ಞಾನ.

**ಆರನೆಯದು : ದೈಹಿಕ ಪ್ರಕೃತಿಯ ಅಜ್ಞಾನ :**

ನಮ್ಮ ಸಂಭೂತಿಯ ನಿಜವಾದ ರಚನೆಯ ಬಗ್ಗೆ ನಮಗೆ ತಿಳಿದಿರುವುದಿಲ್ಲ. ಮನಸ್ಸು ಇಲ್ಲವೆ ಪ್ರಾಣ ಇಲ್ಲವೆ ದೇಹ ಇವುಗಳಲ್ಲೊಂದು, ಅಥವಾ ಇವುಗಳಲ್ಲೆರಡು ಅಥವಾ ಅವು ಮೂರೂ ಒಟ್ಟಿಗೆಯೇ ಕೂಡಿಕೊಂಡು ನಾವೇನಾಗಿರುವೆವೋ ಅದರ ನಿಜವಾದ ತತ್ವವಾಗಿದೆ ಇಲ್ಲವೆ ಗಣನೆಗೆ ತೆಗೆದುಕೊಳ್ಳಬಹುದಾದ ಎಲ್ಲವೂ ಆಗಿದೆ ಎಂದು ಭಾವಿಸುತ್ತೇವೆ. ತನ್ನ ರಹಸ್ಯ ಸಾನ್ನಿಧ್ಯದಿಂದ ಯಾವುದು ಅವೆಲ್ಲವುಗಳನ್ನು ರಚಿಸಿದೆ ಹಾಗೂ ನಿರ್ಧರಿಸಿದೆ ಎಂಬುದರ ಬಗ್ಗೆ ನಮ್ಮ

ಲಕ್ಷ್ಯವಿರುವುದಿಲ್ಲ. ಆ ರಹಸ್ಯ ಸಾನ್ನಿಧ್ಯವೇ ತನ್ನ ಹೊರಹೊಮ್ಮುವಿಕೆಯಿಂದ ಅವೆಲ್ಲವುಗಳ ಕಾರ್ಯಾಚರಣೆಗಳನ್ನು ನಿರ್ಧರಿಸುತ್ತದೆ ಎಂಬುದೂ ನಮಗೆ ತಿಳಿದಿರುವುದಿಲ್ಲ–ಅದು ಆರನೆಯದು, ದೈಹಿಕ ಪ್ರಕೃತಿಯ ಬಗ್ಗೆ ಅಜ್ಞಾನ.

**ಏಳನೆಯದು : ವ್ಯಾವಹಾರಿಕ ಅಜ್ಞಾನ :**

ಈ ಎಲ್ಲ ಅಜ್ಞಾನಗಳಿರುವುದರ ಪರಿಣಾಮವೆಂದಾಗಿ ನಾವು ನಿಜವಾದ ಜ್ಞಾನವನ್ನು, ಜಗತ್ತಿನಲ್ಲಿ ಜೀವನದ ಮೇಲಿನ ಆಳಿಕೆಯನ್ನು, ಅದರ ಸಂತೋಷವನ್ನು ತಪ್ಪಿಸಿಕೊಳ್ಳುತ್ತೇವೆ. ನಮ್ಮ ಯೋಚನೆಯಲ್ಲಿ, ಸಂಕಲ್ಪದಲ್ಲಿ, ಸಂವೇದನೆಗಳಲ್ಲಿ, ಕ್ರಿಯೆಗಳಲ್ಲಿ ಅಜ್ಞಾನಿಗಳಾಗಿದ್ದೇವೆ, ಜಗತ್ತು ನಮ್ಮ ಮುಂದಿರಿಸುವ ಪ್ರಶ್ನೆಗೆ ತಪ್ಪಾದ ಇಲ್ಲವೆ ಅಪರಿಪೂರ್ಣ ಉತ್ತರ ಕೊಡುತ್ತೇವೆ, ದೋಷಗಳು ಮತ್ತು ಆಸೆಗಳು, ಹೆಣಗುವಿಕೆಗಳು ಹಾಗೂ ವಿಫಲತೆಗಳು, ನೋವು ಮತ್ತು ಹರ್ಷ, ಪಾಪ ಮತ್ತು ಎಡುವುವಿಕೆಗಳು ಇವುಗಳಿರುವ ಜಟಿಲ ಮಾರ್ಗಜಾಲದಲ್ಲಿ ಅಲೆದಾಡುತ್ತೇವೆ, ವಕ್ರ ಮಾರ್ಗವನ್ನು ಅನುಸರಿಸುತ್ತೇವೆ, ಬದಲಾಗುವ ಗುರಿಗಾಗಿ ಅಂಧರಾಗಿ ತಡಕಾಡುತ್ತೇವೆ.–ಅದು ಏಳನೆಯದು, ವ್ಯಾವಹಾರಿಕ ಅಜ್ಞಾನ.

**(19/654–55)** **– ಶ್ರೀ ಅರವಿಂದರು**

*

## ಏಳು ವಿಧದ ಅವಿದ್ಯೆಯನ್ನು ತೊಡೆದು ಹಾಕುವುದು

ಅವಿದ್ಯೆಯ ಬಗೆಗಿನ ನಮ್ಮ ಕಲ್ಪನೆ ಅವಶ್ಯವಾಗಿ ದೈವೀ ಜ್ಞಾನ ಕುರಿತು ನಮ್ಮ ಕಲ್ಪನೆಯನ್ನು ನಿರ್ಧರಿಸುತ್ತದೆ, ಆ ಕಾರಣದಿಂದಾಗಿ ನಮ್ಮ ಜೀವನ ಏಕಕಾಲಕ್ಕೆ ದೈವೀ ಜ್ಞಾನವನ್ನು ನಿರಾಕರಿಸುವ ಹಾಗೆಯೇ ಅದನ್ನು ಅರಸುತ್ತಿರುವ ಅವಿದ್ಯೆಯಾಗಿದೆ, ಅದು ಮಾನವ ಪ್ರಯತ್ನದ ಹಾಗೂ ವಿಶ್ವವ್ಯಾಪಿ ಪ್ರಯತ್ನದ ಗುರಿಯನ್ನು ನಿರ್ಧರಿಸುತ್ತದೆ. ಆಗ ಸಮಗ್ರ ಜ್ಞಾನದ ಅರ್ಥ ಏಳು ವಿಧದ ಅವಿದ್ಯೆಯನ್ನು ತೊಡೆದು ಹಾಕುವುದಾಗಿರುತ್ತದೆ. ಈ ತೊಡೆದು ಹಾಕುವುದನ್ನು, ಅದು ತಾನು ತಪ್ಪಿಸಿಕೊಂಡ ಮತ್ತು ಅಲಕ್ಷ್ಯಿಸಿದ ನಮ್ಮ ಪ್ರಜ್ಞೆಯಲ್ಲಿರುವ ಏಳು ವಿಧದ ಸ್ವ–ದರ್ಶನವನ್ನು ಶೋಧಿಸುವುದರ ಮೂಲಕ ಮಾಡುತ್ತದೆ–ಅದರರ್ಥ ಎಲ್ಲ ವಸ್ತು–ವಿಷಯಗಳ ಮೂಲವಾಗಿರುವ ಸರ್ವತಂತ್ರ ಸ್ವತಂತ್ರವಾದುದರ ಬಗೆಗಿನ ಜ್ಞಾನ, ದಿವ್ಯಾತ್ಮನ, ದೈವೀಸತ್ತೆಯ ಬಗೆಗಿನ ಜ್ಞಾನ, ವಿಶ್ವವ್ಯಾಪಕತ್ವ ದಿವ್ಯಾತ್ಮನ, ದೈವೀ ಸತ್ತೆಯ ಸಂಭೂತಿ ದಿವ್ಯಾತ್ಮನ ಪ್ರಕಟಣೆ ಎಂಬುದರ ಜ್ಞಾನ;



ನಮ್ಮ ನಿಜವಾದ ಆತ್ಮದ ಪ್ರಜ್ಞೆಯಲ್ಲಿ ಜಗತ್ತು ನಮ್ಮೊಡನೆ ಏಕವಾಗಿದೆ ಎಂಬ ಜ್ಞಾನ, ಹೀಗೆ ಪ್ರತ್ಯೇಕಗೊಳಿಸುವ ವಿಚಾರದಿಂದ ಮತ್ತು ಅಹಂಕಾರದ ಜೀವನದಿಂದ ಉಂಟಾದ ನಮ್ಮ ಹಾಗೂ ಜಗತ್ತಿನ ನಡುವಿನ ವಿಭಜನೆಯನ್ನು ತೊಡೆದು ಹಾಕುವುದರ ಬಗೆಗಿನ ಜ್ಞಾನ, ನಮ್ಮ ಚೈತ್ಯ–ಅಸ್ತಿತ್ವದ ಬಗೆಗಿನ ಹಾಗೂ ಪೃಥ್ವಿಯ ಮೇಲಿನ ಅದರ ಜೀವನ ಹಾಗೂ ಮರಣದಾಚೆ ಕಾಲಗತಿಯಲ್ಲಿ ಅಮರವಾಗಿ ನಿರಂತರ ಉಳಿದುಕೊಳ್ಳುವುದರ ಬಗೆಗಿನ ಜ್ಞಾನ, ಮೇಲ್ಮೈ ಹಿಂದೆ ನಮ್ಮ ಶ್ರೇಷ್ಠತರ ಆಂತರಿಕ ಅಸ್ತಿತ್ವ ಇರುವುದರ ಬಗೆಗಿನ ಜ್ಞಾನ, ನಮ್ಮ ಮನಸ್ಸು, ಪ್ರಾಣ ಹಾಗೂ ದೇಹ ಇವುಗಳು ಆಂತರಿಕ ಆತ್ಮದೊಡನೆ ಹೊಂದಿರುವ ಸಂಬಂಧದ ಹಾಗೂ ಅವುಗಳ ಮೇಲ್ಗಡೆಗಿರುವ ಅತಿ ಪ್ರಜ್ಞೆ (Superconscent), ಆಧ್ಯಾತ್ಮಿಕ ಹಾಗೂ ಅತಿಮಾನಸ ಸತ್ತೆ ಇವುಗಳೊಡನೆ ಇರುವ ನಿಜವಾದ ಸಂಬಂಧದ ಬಗೆಗಿನ ಜ್ಞಾನ, ಕೊನೆಯದಾಗಿ ನಮ್ಮ ಯೋಚನೆಯ, ಸಂಕಲ್ಪದ ಹಾಗೂ ಕ್ರಿಯೆಯ ನಿಜವಾದ ಸಾಮರಸ್ಯದ, ನಿಜವಾದ ಉಪಯೋಗದ ಬಗೆಗಿನ ಹಾಗೂ ದಿವ್ಯಾತ್ಮ, ದೈವತ್ವ ಮತ್ತು ಸಮಗ್ರ ಆಧ್ಯಾತ್ಮಿಕ ದೈವೀ ನೈಜತೆ ಇವುಗಳಲ್ಲಿ ನಮ್ಮ ಎಲ್ಲ ಸ್ವಭಾವ ಹೊಂದಬೇಕಾದ ಬದಲಾವಣೆಯ ಬಗೆಗಿನ ಜ್ಞಾನ.

ಆದರೆ ಇದು ನಮ್ಮ ಸದ್ಯದ ಪ್ರಜ್ಞೆಯ ಎರಕದಲ್ಲಿ ಕಲಿತುಕೊಂಡು ಪೂರ್ಣಗೊಳಿಸಬಹುದಾದ ಬೌದ್ಧಿಕ ಜ್ಞಾನವಲ್ಲ, ಅದು ಒಂದು ಅನುಭವ–ವಾಗಬೇಕು, ಸಂಭೂತಿಯಾಗಬೇಕು, ಪ್ರಜ್ಞೆಯ ಬದಲಾವಣೆ ಆಗಬೇಕು, ಸತ್ತೆಯ ಬದಲಾವಣೆ ಆಗಬೇಕು. ಇದು ದೈವೀ ಸಂಭೂತಿ ಉತ್ಕ್ರಾಂತಿ ಹೊಂದುವುದರ ಗುಣಲಕ್ಷಣವನ್ನು ಮತ್ತು ನಮ್ಮ ಸಾಮಾನ್ಯ ಮಾನಸಿಕ ಅಜ್ಞಾನವು ನಮ್ಮ ಉತ್ಕ್ರಾಂತಿಯಲ್ಲಿ ಒಂದು ಹಂತ ಎಂಬ ವಾಸ್ತವತೆಯನ್ನು ಒಳತರುತ್ತದೆ.

**(19/655)** **– ಶ್ರೀ ಅರವಿಂದರು**

*

## ಮಿಥ್ಯೆಯೆಂದರೇನು?

ಏಕೈಕವಾದ ಪ್ರಜ್ಞೆಯಿಂದ ಪ್ರತ್ಯೇಕಗೊಂಡ ಪ್ರಜ್ಞೆಗಳು, ಅನಿವಾರ್ಯವಾಗಿ, ಅವಿದ್ಯೆಯಲ್ಲಿ ಪತನಗೊಂಡವು ಮತ್ತು ಅವಿದ್ಯೆಯ ಕೊನೆಯ ಪರಿಣಾಮ ಅಚೇತನ (Inconscience) ವಾಗಿತ್ತು. ಅಂಧಕಾರದ ಭವ್ಯ ಅಚೇತನದಿಂದ ಈ ಭೌತಿಕ ಜಗತ್ತು ಮೇಲೆದ್ದು ಬರುತ್ತದೆ, ಅದರಿಂದ ಆತ್ಮವೊಂದು ಉತ್ಕ್ರಾಂತಿಯ ಮೂಲಕ

ಪ್ರಜ್ಞೆಯುಳ್ಳದ್ದಾಗಲು ಹೆಣಗುತ್ತದೆ, ಅದಕ್ಕೆ ಅಡಗಿರುವ ದೈವೀ ಪ್ರಕಾಶದತ್ತ ಆಕರ್ಷಣೆ ಉಂಟಾಗಿತ್ತು, ತಾನು ಬಂದ ಮೂಲ ದೈವಿಕತೆಯನ್ನು ಕಳೆದುಕೊಂಡ ಅದು ಕುರುಡಾಗಿ ಆ ದೈವಿಕತೆಯೆಡೆಗೆ ಆರೋಹಣ ಮಾಡುತ್ತದೆ.

*

ಇನ್ನೊಂದೆಡೆಗೆ ಮಿಥ್ಯೆ ಈ ಅವಿದ್ಯೆಯಲ್ಲ, ಆದರೆ ಅದರ ಕಟ್ಟಕಡೆಯ ಪರಿಣಾಮ, ಅದನ್ನು ಆಸುರಿಕ ಸಾಮರ್ಥ್ಯದಿಂದ ಸೃಷ್ಟಿಸಲಾಗಿದೆ, ಮತ್ತು ಅದು ಸೃಷ್ಟಿಯ ಕಾರ್ಯದಲ್ಲಿ ಮಧ್ಯೆ ಪ್ರವೇಶಿಸುತ್ತದೆ ಮತ್ತು ಅದು ಸತ್ಯದಿಂದ ಪ್ರತ್ಯೇಕಗೊಂಡಿರುತ್ತದೆ, ಆ ಕಾರಣದಿಂದಾಗಿ ಜ್ಞಾನದಲ್ಲಿ ಸೀಮಿತವಾಗಿರುತ್ತದೆ, ದೋಷಕ್ಕೆ ತೆರೆದುಕೊಂಡಿರುತ್ತದೆ ಅಷ್ಟೇ ಅಲ್ಲ, ಸತ್ಯದ ವಿರುದ್ಧ ಬಂಡಾಯ–ವೇಳುತ್ತದೆ ಇಲ್ಲವೆ ವಿಕೃತಗೊಳಿಸುವುದಕ್ಕಾಗಿಯೇ ಸತ್ಯವನ್ನು ಹಿಡಿದುಕೊಂಡಿ–ರುತ್ತದೆ. ಈ ಸಾಮರ್ಥ್ಯ, ಅಂಧಕಾರದ ಆಸುರೀ ಶಕ್ತಿ ಇಲ್ಲವೆ ರಾಕ್ಷಸೀ ಮಾಯಾ, ಅದು ತನ್ನದೇ ವಿಕೃತಗೊಂಡ ಪ್ರಜ್ಞೆಯನ್ನು ನಿಜವಾದ ಜ್ಞಾನವೆಂದು ಮುಂದಿರಿ–ಸುತ್ತದೆ ಮತ್ತು ಸತ್ಯ ಕುರಿತು ಅದರ ಉದ್ದೇಶಪೂರ್ವಕ ವಿರೂಪ–ಗೊಳಿಸುವಿಕೆಗಳು ಇಲ್ಲವೆ ತಲೆ–ಕೆಳಗು ಮಾಡುವಿಕೆಗಳು ವಸ್ತು–ವಿಷಯಗಳನ್ನು ಕುರಿತು ಯಥಾರ್ಥೋಕ್ತಿ ಎನ್ನುವಂತೆ ಮಾಡುತ್ತವೆ. ಈ ವಿರೂಪಗೊಂಡ ಹಾಗೂ ವಿರೂಪಗೊಳಿಸುವ ಪ್ರಜ್ಞೆಯ ಸಾಮರ್ಥ್ಯಗಳನ್ನು ಹಾಗೂ ವ್ಯಕ್ತಿವಿಶಿಷ್ಟತೆಗಳನ್ನು ವಿರೋಧೀ ಶಕ್ತಿಗಳೆಂದು ಹಾಗೂ ವಿರೋಧೀ ಸತ್ತೆಗಳೆಂದು ಕರೆಯುತ್ತೇವೆ. ಅವಿದ್ಯೆಯ ಮೂಲ ಸಾಮಗ್ರಿಯ ಮೂಲಕ ಅವುಗಳಿಂದ ಸೃಷ್ಟಿಯಾದ ವಿರೂಪ–ಗೊಳಿಸುವಿಕೆಯನ್ನು ವಸ್ತು–ವಿಷಯಗಳ ಸತ್ಯವೆಂದು ಮುಂದಿರಿಸುವುದನ್ನು ಮಿಥ್ಯೆ ಎಂದು ಕರೆಯುತ್ತಾರೆ, ಯೌಗಿಕ ಅರ್ಥದಲ್ಲಿ ಅದು ಮಿಥ್ಯೆ ಮತ್ತು ಮೋಹ.

*

**ಜ್ಞಾನವೆಂದರೇನು**?

ಜೀವಂತ ಸಿದ್ಧಿಯಲ್ಲಿ ಪರಾಕಾಷ್ಠೆ ಕಂಡುಕೊಳ್ಳುವ ಏಕಾಗ್ರತೆಯನ್ನು ಮತ್ತು ನಮ್ಮಲ್ಲಿ ಹಾಗೂ ನಮ್ಮ ಅರಿವಿಗೆ ಬರುವ ಎಲ್ಲದರಲ್ಲಿ ಏಕೈಕನಾದವನ ಸಾನ್ನಿಧ್ಯದ ಬಗ್ಗೆ ಸತತ ಭಾವನೆ ತಂದುಕೊಳ್ಳುವುದನ್ನು ಯೋಗದ ಅರ್ಥದಲ್ಲಿ ಜ್ಞಾನ ಮತ್ತು ಜ್ಞಾನಕ್ಕಾಗಿ ಪ್ರಯತ್ನ ಎಂದು ಕರೆಯಲಾಗಿದೆ.

**(22/381–82, 22/27, 20/75)** **– ಶ್ರೀ ಅರವಿಂದರು**

*



# ಮಿಥ್ಯೆಯ ಮೇಲೆ ಜಯ ಸಾಧಿಸುವುದು

**ಪ್ರಶ್ನೆ :** *ಪರಿಪೂರ್ಣ ಮಿಥ್ಯೆ ಮತ್ತು ಪರಿಪೂರ್ಣ ಅಸತ್ಯ ಇರುವುದಿಲ್ಲವೆಂದು ಶ್ರೀ ಅರವಿಂದರು ಹೇಳುತ್ತಾರೆಯೆ?* (ಸೂಕ್ತಿ : 62)

**ಶ್ರೀಮಾತೆ :** ಪರಿಪೂರ್ಣ ಅಸತ್ಯ ಇರುವುದು ಸಾಧ್ಯವಿಲ್ಲ. ವಾಸ್ತವದಲ್ಲಿ ಅದು ಸಾಧ್ಯವಿಲ್ಲ ಏಕೆಂದರೆ ಭಗವಂತ ಎಲ್ಲದರ ಹಿಂದೆ ಇದ್ದಾನೆ.

ಇದು ವಿಶ್ವದಿಂದ ಕೆಲವು ಅಂಶಗಳು ಮಾಯವಾಗಿ ಹೋಗುವವೇ ಎಂದು ಕೇಳುವ ಜನರ ಮಾತಿನ ಹಾಗಿದೆ. ವಿಶ್ವದ ನಾಶ ಎಂಬುದರ ಅರ್ಥವಾದರೂ ಏನು? ನಾವು ನಮ್ಮ ಮೂರ್ಖತನದಿಂದ ಹೊರಬಂದಾಗ, ಯಾವುದನ್ನು ನಾಶವೆಂದು ಕರೆಯಬಹುದು? ಕೇವಲ ರೂಪ, ತೋರಿಕೆ ಹಾಳಾಗುತ್ತವೆ ಮತ್ತು ನಿಜವಾಗಿ ಒಂದರ ನಂತರ ಒಂದರಂತೆ ಎಲ್ಲ ತೋರಿಕೆಗಳೂ ನಾಶವಾಗುತ್ತವೆ. ಅದನ್ನು ಹೇಳಲಾಗಿದೆ–ಎಲ್ಲೆಡೆಯಲ್ಲೂ ಬರೆದಿಡಲಾಗಿದೆ, ಎಷ್ಟೋ ಸಂಗತಿಗಳ ಬಗ್ಗೆ ಹೇಳಲಾಗಿದೆ. ವಿರೋಧೀ ಶಕ್ತಿಗಳನ್ನು ಪರಿವರ್ತನೆಗೊಳಪಡಿಸಲಾಗುತ್ತದೆ ಎಂದರೆ ಅವು ತಮ್ಮೊಳಗಿರುವ ದೈವಿಕತೆಯ ಬಗ್ಗೆ ಅರಿವುಳ್ಳದ್ದಾಗುತ್ತವೆ, ಮತ್ತು ದೈವಿಕವಾಗುತ್ತವೆ ಇಲ್ಲವೆ ಅವುಗಳನ್ನು ನಾಶಮಾಡಲಾಗುತ್ತದೆ. ಆದರೆ 'ನಾಶ–ವಾಯಿತು' ಎಂಬುದರ ಅರ್ಥವೇನು? ಅವುಗಳ ರೂಪವನ್ನು ನಾಶ ಮಾಡ–ಬಹುದು, ಪ್ರಜ್ಞೆಯ ರೂಪವನ್ನು ಕರಗಿಸಿಬಿಡಬಹುದು. ಆದರೆ ಅವುಗಳನ್ನು ಹಾಗೆಯೇ ಎಲ್ಲ ವಸ್ತು–ವಿಷಯಗಳನ್ನು ಅಸ್ತಿತ್ವದಲ್ಲಿರಿಸಿರುವಂತೆ ಮಾಡುವ ಆ ಏನೋ ಒಂದು ಅದನ್ನು ನಾಶ ಮಾಡಲು ಹೇಗೆ ಸಾಧ್ಯ? ವಿಶ್ವವು 'ತತ್' ದ ಇಂದ್ರಿಯ ಗೋಚರ ವಿಷಯ, ಅದರ ವಸ್ತುನಿಷ್ಠ, ಸ್ವ–ಸಂಶೋಧನೆ. ಆ 'ತತ್' ಸನಾತನ ಕಾಲದಿಂದಲೂ ಇದೆ. ಹಾಗಾಗಿ ಎಲ್ಲವೂ ಆಗಿರುವುದು ನಿಂತು ಹೋಗಿಬಿಡುವುದು ಹೇಗೆ? ಅನಂತ, ಸನಾತನವಾದ ದೈವೀ ಎಲ್ಲವೂ ಎಂದರೆ ಯಾವ ಬಗೆಯ ಮಿತಿಗಳೂ ಇಲ್ಲದ ಅದರಿಂದ ಯಾವುದು ಆ 'ತತ್' ದ ಹೊರಗೆ ಹೋಗಲು ಸಾಧ್ಯ? ಅದು ಹೋಗಲು ಸ್ಥಾನವೇ ಇರುವುದಿಲ್ಲ. ಹೋಗುವು–ದಾದರೂ ಎಲ್ಲಿಗೆ? ಅಲ್ಲಿ 'ತತ್' ಅಲ್ಲದೆ ಬೇರೇನೂ ಇಲ್ಲ.

ಇಷ್ಟೇ ಅಲ್ಲದೇ 'ಕೇವಲ 'ತತ್' ಇದೆ' ಎಂದು ನಾವು ಹೇಳಿದಾಗ ಅದಕ್ಕೆ ಎಲ್ಲಿಯೋ ಒಂದು ಸ್ಥಾನವನ್ನು ಕೊಡುತ್ತೇವೆ, ಹಾಗೆ ಮಾಡುವುದು ಮೂರ್ಖ–ತನದ್ದು. ಆದ್ದರಿಂದ ಅಲ್ಲಿಂದ ಏನನ್ನು ದೂರ ಒಯ್ಯಲಾದೀತು!

ಸದ್ಯದ ಪ್ರಕಟಣೆಯಿಂದಾಚೆಗೆ ಪ್ರಕ್ಷೇಪಿಸಲಾದ ಒಂದು ವಿಶ್ವವನ್ನು ಕುರಿತು ಮನುಷ್ಯ ಕಲ್ಪನೆ ಮಾಡಿಕೊಳ್ಳಬಹುದು. ಒಂದರ ನಂತರ ಒಂದರಂತೆ ಬರುವ ವಿಶ್ವಗಳ ಬಗ್ಗೆ ಮತ್ತು ಮೊದಲಿದ್ದ ವಿಶ್ವಗಳು ನಂತರದವುಗಳಲ್ಲಿ ಇರದೆ ಇರುವುದರ ಬಗ್ಗೆ ಕೂಡ ಕಲ್ಪನೆ ಮಾಡಿಕೊಳ್ಳಬಹುದು. ಅದು ಸ್ಪಷ್ಟವಾಗಿಯೂ ಕೂಡ ಇದೆ. ಮಿಥ್ಯೆಯ ಹಾಗೂ ಅಸತ್ಯದ ಇಡೀ ಮೊತ್ತ–ಸದ್ಯ ಮಿಥ್ಯೆ ಹಾಗೂ ಅಸತ್ಯವೆನಿಸುವ ಸಂಗತಿಗಳು ಇನ್ನು ಮುಂದೆ ತೆರೆದುಕೊಳ್ಳಲಿರುವ ವಿಶ್ವಕ್ಕೆ ಸೇರಿದವುಗಳಾಗಿರುವುದಿಲ್ಲ ಎಂಬುದನ್ನು ಮನುಷ್ಯ ಕಲ್ಪನೆ ಮಾಡಿಕೊಳ್ಳಬಹುದು, ಇದನ್ನೆಲ್ಲ ಮನುಷ್ಯ ಅರ್ಥಮಾಡಿಕೊಳ್ಳಬಲ್ಲ. ಆದರೆ ನಾಶ ಮಾಡುವುದು? ನಾಶವಾಗಲು ಅದೆಲ್ಲಿಗೆ ಹೋಗಬೇಕು. ನಾಶ ಮಾಡುವುದನ್ನು ಕುರಿತು ಮಾತನಾಡಿದಾಗ ರೂಪವನ್ನು ನಾಶ ಮಾಡುವುದನ್ನು ಕುರಿತು ಯೋಚಿಸುತ್ತೇವೆ. ಅದು ಪ್ರಜ್ಞೆಯ ಇಲ್ಲವೆ ಭೌತಿಕ ರೂಪವಾಗಿರಬಹುದು, ಆದರೆ ಅದು ಯಾವಾಗಲೂ ರೂಪವೇ ಆಗಿರುತ್ತದೆ. ಆದರೆ ರೂಪ ರಹಿತವಾದದ್ದನ್ನು ನಾಶ ಮಾಡುವುದು ಹೇಗೆ ಸಾಧ್ಯವಾದೀತು?

ಹಾಗಾಗಿ ಮಾಯವಾಗಲಿರುವ ಪರಿಪೂರ್ಣ ಮಿಥ್ಯೆಯನ್ನು ಕುರಿತು ಮಾತನಾಡಿದಾಗ ಸರಳವಾಗಿ ಅದರರ್ಥ ವಿಷಯಗಳ ಇಡೀ ಸಂಗ್ರಹ ಶಾಶ್ವತವಾಗಿ ಗತಕಾಲದಲ್ಲಿರುತ್ತದೆ, ಅದು ಭವಿಷ್ಯತ್ತಿನ ಪ್ರಕಟಣೆಗೆ ಸೇರಿದ್ದಾಗಿರುವುದಿಲ್ಲ, ಅಷ್ಟೆ.

ಮನುಷ್ಯ 'ತತ್' ದಿಂದ ಹೊರಗೆ ಹೋಗಲಾರ.

*

ನಿಜವಾಗಿ ಮಿಥ್ಯೆಯನ್ನು ಹೊರತರುವ ಮತ್ತು ಅದನ್ನು ದೈವೀ ಪ್ರಕಾಶದ ಮುಂದೆ ಇರಿಸುವ ಕ್ರಿಯೆಯೇ ಸ್ವತಃ ಮಹತ್ವಪೂರ್ಣವಾದ ಪರಿವರ್ತನೆ ಮಾಡುವುದಾಗಿರುತ್ತದೆ ಮತ್ತು ಅದು ಕೊನೆಯ ವಿಜಯಕ್ಕೆ ಮಾರ್ಗ ಮಾಡಿಕೊಡುತ್ತದೆ. ಏಕೆಂದರೆ ಪ್ರತಿಯೊಂದು ಮಿಥ್ಯೆಯನ್ನು ಬಯಲು ಮಾಡಿ ತೋರಿಸುವುದೇ ಒಂದು ವಿಜಯವಾಗಿರುತ್ತದೆ. ದೋಷವನ್ನು ಒಪ್ಪಿಕೊಳ್ಳುವ ಪ್ರತಿಯೊಂದು ಕ್ರಿಯೆ ಅಂಧಕಾರದ ಪ್ರಭುಗಳಲ್ಲೊಬ್ಬನನ್ನು ನಾಶಗೊಳಿಸುತ್ತದೆ. ಆ ಒಪ್ಪಿಕೊಳ್ಳುವಿಕೆಯನ್ನು ಮನುಷ್ಯ ತನಗೆ ತಾನೇ ಮಾಡಿಕೊಳ್ಳುವುದಾಗಿರಬಹುದು, ಆದರೆ ಅದು ಪರಿಪೂರ್ಣವಾಗಿ ಪ್ರಾಮಾಣಿಕವಾಗಿರಬೇಕು ಮತ್ತು ಅದು ಮುಂದಿನ ಕ್ಷಣ ಮರೆತು ಬಿಡುವ ಸೂಕ್ಷ್ಮ ರೀತಿಯ ವಿಷಾದಪಡುವಿಕೆ ಆಗಿರಬಾರದು ಮತ್ತು ಆ ತಪ್ಪನ್ನು ಪುನರಾವರ್ತಿಸದಿರುವ, ನಿರ್ಧಾರವನ್ನು ಮುರಿದು ಹಾಕದೇ ಇರುವ



ಬಲವನ್ನು ಹೊಂದಿರಬೇಕು. ಇಲ್ಲವೆ ಆ ತಪ್ಪನ್ನು ಭಗವಂತನ ಮೂರ್ತರೂಪನಾದ ಗುರುವಿನ ಎದುರು ಒಪ್ಪಿಕೊಳ್ಳಬಹುದು. ಗುರುವಿಗೆ ನೇರವಾಗಿ ತಪ್ಪೊಪ್ಪಿಕೊಳ್ಳುವುದರ ಪರಿಣಾಮ ನಿಮ್ಮ ನಿರ್ಧಾರ ನಿಮ್ಮದೇ ಆಗಿ ಉಳಿಯುವುದಿಲ್ಲ. ಏಕೆಂದರೆ ನೀವು ನಿಷ್ಕಪಟರಾಗಿದ್ದರೆ ನಿಮಗೆ ಅನುಗ್ರಹ ರೂಪದಲ್ಲಿ ಭಗವಂತನ ಅಧಿಕಾರ ನಡೆಯುತ್ತದೆ.

**– ಶ್ರೀಮಾತೆ**

*

## ಸತ್ಯ ಅನಂತಪಟ್ಟು ಸಂಕೀರ್ಣವಾದ ನೈಜತೆಯಾಗಿದೆ

ಸತ್ಯ ಅನಂತಪಟ್ಟು ಸಂಕೀರ್ಣವಾದ ನೈಜತೆ. ಅದನ್ನು ಹೆಚ್ಚಿನ ಮಟ್ಟದಲ್ಲಿ ಗುರುತಿಸುವವನು, ಆದರೆ ಅದರ ಅನಂತಪಟ್ಟು ಸಂಕೀರ್ಣತೆಯಿಂದ ಎದೆಗುಂದದೆ ಇರುವವನು ಅದರ ಅತಿ ಹತ್ತಿರಕ್ಕೆ ತಲುಪುವ ಅತ್ಯಂತ ಒಳ್ಳೆಯ ಅವಕಾಶ ಹೊಂದಿರುತ್ತಾನೆ. ನಾವು ನೋಡಲೇಬೇಕಾದುದು ಎಂದರೆ : ಯೋಚನೆಯ ಇಡೀ ಗೋಜಲು, ವಾಸ್ತವತೆ, ಭಾವನೆ, ವಿಚಾರ, ವಿಚಾರದ ಆಚೆಗಿನ ಸತ್ಯ, ತೀರ್ಮಾನ, ವೈರುಧ್ಯ, ಮಾರ್ಪಾಡು, ಆದರ್ಶ, ಆಚರಣೆ, ಸಾಧ್ಯತೆ, ಅಸಾಧ್ಯತೆ (ಆದಾಗ್ಯೂ ಅದನ್ನು ಕುರಿತು ಪ್ರಯತ್ನ ಮಾಡಲೇಬೇಕಾಗುತ್ತದೆ) ಮತ್ತು ಆತ್ಮವನ್ನು ಸ್ಥಿರವಾಗಿರಿಸುವುದು, ಈ ಜಗತ್ತಿನ ಪ್ರಬಲ ನಿರಂತರ ಚಲನೆ ಹಾಗೂ ಸುಳಿ (gurge)* ಗಳಲ್ಲಿ ಸ್ಪಷ್ಟ ದೃಷ್ಟಿಯನ್ನಿಟ್ಟುಕೊಂಡಿರುವುದು, ಎಲ್ಲೆಡೆಯಲ್ಲೂ ಸಾಮರಸ್ಯದ ಒಂದು ಶಬ್ದಕ್ಕಾಗಿ ಅರಸುವುದು, ಕಟ್ಟಕಡೆಯ ಸತ್ಯದಲ್ಲಿ ಸದ್ಯದ ಸತ್ಯವನ್ನು ಮರೆಯದೆ ಇರುವುದು, ಮತ್ತು ಸದ್ಯದ ಸತ್ಯದಲ್ಲಿ ಕಟ್ಟಕಡೆಯ ಸತ್ಯವನ್ನು ಮರೆಯದೆ ಇರುವುದು, ಆದರೆ ಪ್ರತಿಯೊಂದಕ್ಕೂ ಅದಕ್ಕೆ ಯೋಗ್ಯವಾದ ಸ್ಥಾನವನ್ನು, ಅನಂತದ ಉದ್ದೇಶದಲ್ಲಿ ಯೋಗ್ಯ ಭಾಗವನ್ನು ಕೊಡುವುದು.

. . . . . ಕೆಲವು ಜನರು ಸತ್ಯವನ್ನು ಕಾಲ್ಪನಿಕ ಗ್ರಹಿಕೆಯ ಮೂಲಕ ಕಂಡುಕೊಳ್ಳುವುದನ್ನು ಅರಸುತ್ತಾರೆ. ಅದು ತರ್ಕಶಾಸ್ತ್ರದ ಹಾಗೆ ಒಳ್ಳೆಯ ಉಪಕರಣ, ಆದರೆ ತರ್ಕಕ್ಕೆ ಆಗುವ ಹಾಗೆ ಅದು ತನ್ನ ಗುರಿಯನ್ನು ಮುಟ್ಟುವ ಮೊದಲೇ ಭಗ್ನಗೊಳ್ಳುತ್ತದೆ. ಇವೆರಡರಲ್ಲಿ ಯಾವುದಕ್ಕೂ ಕೆಲಮಟ್ಟಿಗಿನ ಮಾರ್ಗದತ್ತ ಕೊಂಡೊಯ್ದು ಅಲ್ಲಿ ನಮ್ಮನ್ನು ಕೈಬಿಡುವುದಕ್ಕಿಂತ ಹೆಚ್ಚಿನ ಕಾರ್ಯವನ್ನು ಮಾಡಲು

* Whirlpool.

ಅನುವು ಮಾಡಿಕೊಡಬಾರದು. ಅತ್ಯುತ್ಕೃಷ್ಟ ತೀರ್ಮಾನ ನಿಜವಾದ ಸಮತೋಲನ–ವನ್ನು ತಲುಪಬಹುದು ಎಂದು ಇತರರು ಯೋಚಿಸುತ್ತಾರೆ. ಅದು ಕೆಲಕಾಲದವರೆಗೆ ಆ ಕಾರ್ಯವನ್ನು ಕೈಕೊಳ್ಳುತ್ತದೆ, ಆದರೆ ನಂತರದ ತಲೆಮಾರು ಒರಟಾದ ಪರೀಕ್ಷೆಗೆ ಒಪ್ಪಿಕೊಂಡು ಇಲ್ಲವೆ ಇನ್ನೂ ಹೆಚ್ಚು ಉತ್ಕೃಷ್ಟವಾದದ್ದು ಬೇಕೆಂದು ಒತ್ತಾಯ ತಂದು ಆ ಸಮತೋಲನವನ್ನು ತಲೆಕೆಳಗು ಮಾಡುತ್ತದೆ. ಧಾರ್ಮಿಕ ಜನರು ಸ್ಫೂರ್ತಿಗೆ ಆದ್ಯತೆ ನೀಡುತ್ತಾರೆ. ಆದರೆ ಸ್ಫೂರ್ತಿ ಮಿಂಚಿನ ಹಾಗಿರುತ್ತದೆ ದೇಶದ ಸೀಮಿತ ಹರವನ್ನು ಮಾತ್ರ ಪ್ರಜ್ವಲ ಪ್ರಕಾಶದಿಂದ ಬೆಳಗುತ್ತದೆ, ಉಳಿದ ಭಾಗವನ್ನು ಅಂಧಕಾರದಲ್ಲಿ ಉಳಿಸಿಬಿಡುತ್ತದೆ. ಆ ಪ್ರಕಾಶದ ತೀಕ್ಷ್ಣತೆಯಿಂದ ಅಂಧಕಾರ ಇನ್ನೂ ಗಾಢವಾಗುತ್ತದೆ. ದೇಶದ ಒಂದು ಭಾಗವನ್ನು ನಾವು ಇಡೀ ವಿಶ್ವವೆಂದು ಭಾವಿಸಿದರೆ ನಮ್ಮ ದೋಷ ಬೃಹತ್ತಾಗಿರುತ್ತದೆ. ಹಾಗಾಗಿ ನಮಗೆ ಸತ್ಯದ ಹೃದಯವನ್ನು ಒದಗಿಸಬಹುದಾದ ಹಾಗೂ ಅಸ್ತಿತ್ವದ ಬೀಗದ ಕೈ ರೂಪದ ಶಬ್ದವನ್ನು ಕೊಡುವ ಜ್ಞಾನದ ಉಪಕರಣವಿಲ್ಲವೆ! ಇದೆ ಎಂದು ನನಗನಿಸುತ್ತದೆ, ಆದರೆ ಮನುಕುಲದ ತಡೆಬಡೆಯಿಲ್ಲದ ಉತ್ಕ್ರಾಂತಿ ಇನ್ನೂ ಬಹಳ ದೂರವಿದೆ. ಮಾನವರ ಅತ್ಯುಚ್ಚ ಹೆಜ್ಜೆ ಆ ಪ್ರಕಾಶದ ಅಂಚಿನಲ್ಲಿದೆ. ಒಟ್ಟಿನಲ್ಲಿ ಬುದ್ಧಿಮತ್ತೆ ನಮ್ಮನ್ನು ಬಹಳ ಉಚ್ಚಮಟ್ಟಕ್ಕೆ ಕರೆದೊಯ್ಯುತ್ತದೆ. ಆದರೆ ಪರಿಶುದ್ಧ ಬುದ್ಧಿಮತ್ತೆಯ ಭಾವಕಲ್ಪನೆಯನ್ನು ಹೀಯಾಳಿಸುವವನು ಮತ್ತು ಅದರ ಅಂಧಾಭಿಮಾನಿ ಭಕ್ತ ಇವರಲ್ಲಾರೂ, ಯಾವ ಜ್ಞಾನದಲ್ಲಿ ಇಂದ್ರಿಯಗಳು ವಸ್ತು–ವಿಷಯಗಳನ್ನು ಪ್ರತಿಫಲಿಸುವವೋ, ಮನಸ್ಸು ಯೋಚಿಸುವುದೋ ಅಷ್ಟೇ ಅಲ್ಲ, ಆದರೆ ಅದರಲ್ಲಿಯ ಆದರ್ಶ ಸಹಜ–ಶಕ್ತಿ ಅವುಗಳನ್ನು ನೇರವಾಗಿ ತಿಳಿದುಕೊಳ್ಳುವುದೋ ಅಂತಹ ಜ್ಞಾನವನ್ನು ಸಿದ್ಧಿಸಿಕೊಳ್ಳಲಾರರು.

*

**ಸತ್ಯವನ್ನು ಸಿದ್ಧಿಸಿಕೊಳ್ಳುವುದು ಹೇಗೆ?**

ಮನುಷ್ಯ ಮನಸ್ಸು ಪ್ರಧಾನವಾದ ಸತ್ತೆಯಾದ ಕಾರಣದಿಂದಾಗಿ ಅವನು ಸ್ವಾಭಾವಿಕವಾಗಿ ಮನಸ್ಸು ಒಂದು ಶ್ರೇಷ್ಠ ನೇತಾರ, ನಟ, ಸೃಷ್ಟಿಕರ್ತ ಇಲ್ಲವೆ ವಿಶ್ವದಲ್ಲಿ ಅನಿವಾರ್ಯವಾದ ಕಾರ್ಯಭಾರಿ (agent) ಎಂದು ಯೋಚಿಸುತ್ತಾನೆ. ಆದರೆ ಇದೊಂದು ದೋಷ, ಜ್ಞಾನಕ್ಕಾಗಿಯೂ ಕೂಡ ಮನಸ್ಸು ಕೇವಲ ಇಲ್ಲವೆ ಅತ್ಯಂತ ಶ್ರೇಷ್ಠ ಉಪಕರಣವಲ್ಲ, ಏಕೈಕ ಅಭೀಪ್ಸೆಪಡುವಂತಹದಲ್ಲ, ಶೋಧದಲ್ಲಿ ತೊಡಗಿ–ಕೊಂಡಂತಹದೂ ಅಲ್ಲ. ಪ್ರಕೃತಿಯ ಬೃಹತ್ ಮತ್ತು ನಿಖರವಾದ ಅವಚೇತನದ



ಕ್ರಿಯೆ ಮತ್ತು ಭಗವಂತನ ಇನ್ನೂ ಹೆಚ್ಚು ಬೃಹತ್ತಾದ ಹುಸಿಹೋಗದ ಅತಿಚೇತನದ ಕ್ರಿಯೆ ಇವೆರಡರ ನಡುವಿನ ಉಪಪ್ರಸಂಗ (interlude).

ಮನಸ್ಸು, ಅದರ ಸಾಮಾನ್ಯ ಸ್ಥಿತಿಯಲ್ಲಿ ಕೈಕೊಳ್ಳಬಹುದಾದ ಯಾವುದ–ಕ್ಕಿಂತಲೂ ಹೆಚ್ಚು ಒಳ್ಳೆಯ ರೀತಿಯಲ್ಲಿ ಅದು ನಿಶ್ಚಲತೆಯಲ್ಲಿ, ಯೋಚನಾರಹಿತ ನೀರವತೆಯಲ್ಲಿ ಕೈಕೊಳ್ಳಬಲ್ಲದು.

ಮನಸ್ಸು ನೀರವತೆಯಲ್ಲಿದ್ದಾಗ, ದೈವೀಸತ್ಯ, ಆ ನಿಶ್ಚಲನೀರವತೆಯಲ್ಲಿ ಪರಿಶುದ್ಧತೆಯಲ್ಲಿ ತನ್ನನ್ನು ಕೇಳಿಸಿಕೊಳ್ಳುವಂತೆ ಮಾಡುವ ಅವಕಾಶ ದೊರಕಿಸುತ್ತದೆ.

ದೈವೀಸತ್ಯವನ್ನು ಮನಸ್ಸಿನ ಯೋಚನೆಯಿಂದ ಸಿದ್ಧಿಸಿಕೊಳ್ಳಲಾಗದು, ಆದರೆ ನಿಶ್ಚಲನೀರವತೆಯಲ್ಲಿಯ ದರ್ಶನದೊಂದಿಗೆ ಗುರುತಿಸಿಕೊಳ್ಳುವುದರಿಂದ ಮಾತ್ರ ಅದನ್ನು ಮಾಡಬಹುದು. ದೈವೀಸತ್ಯ ಸನಾತನ ಸ್ಥಳಾವಕಾಶಗಳ ಸ್ಥಿರ, ನಿಶ್ಯಬ್ದ, ದೈವೀ ಪ್ರಕಾಶದಲ್ಲಿ ಜೀವಿಸುತ್ತದೆ, ಅದು ಗದ್ದಲವಿದ್ದಲ್ಲಿ ಮತ್ತು ತರ್ಕಬದ್ಧವಾದ ವಿವಾದದಂತಹ ಗೊಡ್ಡು ಹರಟೆಯಲ್ಲಿ ಮಧ್ಯೆ ಪ್ರವೇಶ ಮಾಡುವುದಿಲ್ಲ.

ಮನಸ್ಸಿನಲ್ಲಿ ಹುಟ್ಟುವ ಯೋಚನೆ, ಅತಿ ಹೆಚ್ಚೆಂದರೆ, ದೈವೀ ಸತ್ಯದ ಉಜ್ವಲ ಮತ್ತು ಪಾರದರ್ಶಕ ಉಡುಗೆಯಾಗಿರುತ್ತದೆ, ಅದು ದೈವೀಸತ್ಯದ ಯೋಚನಾ–ಶರೀರ ಕೂಡ ಆಗಿರುವುದಿಲ್ಲ. ಆ ನಿಲುವಂಗಿಯ ಮೂಲಕ ನೋಡಿರಿ, ಅದರತ್ತ ನೋಡಬೇಡಿರಿ, ಅದರ ರೂಪ ಕುರಿತು, ಸೂಚನೆಯೊಂದನ್ನು ನೀವು ನೋಡ–ಬಹುದು. ಅಲ್ಲಿ ದೈವೀಸತ್ಯದ ಯೋಚನಾ–ಶರೀರವಿರಬಹುದು, ಆದರೆ ಅದು ಸ್ವಯಂಪ್ರೇರಿತ ಅತಿಮಾನಸ ದೈವೀ ಯೋಚನೆ ಹಾಗೂ ಶಬ್ದ ಇವು ಆ ದೈವೀ ಸತ್ಯದಿಂದ ಪೂರ್ತಿ ರೂಪುಗೊಂಡು ಜಿಗಿದು ಬಂದದ್ದಾಗಿರುತ್ತವೆ, ಅದು ಯಾವುದೇ ಕಠಿಣ ಬಗೆಯ ಮಾನಸಿಕ ಖೋಟಾತನವಾಗಲಿ ಇಲ್ಲವೆ ತೇಪೆ ಮಾಡಿ ರಚಿಸಿದ್ದಾಗಲಿ ಆಗಿರುವುದಿಲ್ಲ. ಅತಿಮಾನಸ ಯೋಚನೆ ದೈವೀಸತ್ಯದತ್ತ ತಲುಪಲು ಒಂದು ಸಾಧನವಲ್ಲ, ಏಕೆಂದರೆ ಅತಿಮನಸ್ಸಿನಲ್ಲಿರುವ ದೈವೀಸತ್ಯ ಸ್ವಯಂ–ಕಂಡುಕೊಂಡದ್ದು, ಇಲ್ಲವೆ ಸ್ವ–ಅಸ್ತಿತ್ವದಲ್ಲಿದ್ದದ್ದು, ಆದರೆ ಅದು ದೈವೀಸತ್ಯವನ್ನು ಅಭಿವ್ಯಕ್ತಪಡಿಸುವ ಒಂದು ರೀತಿ. ಅದು ದಿವ್ಯಸತ್ಯದಿಂದ ಹೊರಬಂದ ಬಾಣ, ಅದನ್ನು ತಲುಪಲು ಒಂದು ಸೇತುವೆಯಲ್ಲ.

ಆಂತರಿಕವಾಗಿ ಯೋಚನೆ ಹಾಗೂ ಶಬ್ದಗಳನ್ನು ನಿಲ್ಲಿಸಿರಿ, ನಿಮ್ಮಂತರಂಗದಲ್ಲಿ ನಿಶ್ಚಲರಾಗಿರಿ, ಮೇಲ್ಗಡೆಗಿರುವ ಪ್ರಕಾಶದಲ್ಲಿ ಮತ್ತು ಬಾಹ್ಯದಲ್ಲಿ ನಿಮ್ಮ ಸುತ್ತಲಿರುವ

ವಿಶಾಲ ವಿಶ್ವವ್ಯಾಪಿ ಪ್ರಜ್ಞೆಯಲ್ಲಿ ನೋಡಿರಿ. ಹೆಚ್ಚು ಹೆಚ್ಚಾಗಿ ಆ ಉಜ್ವಲತೆ ಮತ್ತು ವೈಶಾಲ್ಯದೊಂದಿಗೆ ಏಕವಾಗಿರಿ. ಆಗ ದೈವೀಸತ್ಯ ನಿಮ್ಮ ಮೇಲ್ಗಡೆಯಿಂದ ಮೈದೋರುವುದು ಮತ್ತು ನಿಮ್ಮ ಸುತ್ತಲಿರುವ ಎಲ್ಲೆಡೆಯಿಂದ ನಿಮ್ಮೊಳಗೆ ಪ್ರವಹಿಸುವುದು.

ಆದರೆ ಇದು ಸಾಧ್ಯವಾಗುವುದು ಮನಸ್ಸು ಅದರ ನಿಶ್ಚಲನೀರವತೆಗಿಂತ ಹೆಚ್ಚಾಗಿ ಅದರ ಪರಿಶುದ್ಧತೆಯಲ್ಲಿ ಗಾಢವಾಗಿದ್ದರೆ ಮಾತ್ರ. ಏಕೆಂದರೆ ಅಶುದ್ಧ ಮನಸ್ಸು ನಿಶ್ಚಲನೀರವತೆಯನ್ನು ಕೂಡಲೆ ದಾರಿ ತಪ್ಪಿಸುವ ಪ್ರಕಾಶಗಳಿಂದ, ಮಿಥ್ಯೆಯ ದನಿಗಳಿಂದ, ತನ್ನದೇ ವ್ಯರ್ಥ ಗರ್ವ ಹಾಗೂ ಅಭಿಪ್ರಾಯಗಳಿಂದ ಇಲ್ಲವೆ ಅದರ ರಹಸ್ಯ ಅಭಿಮಾನ, ಜಂಬ, ಮಹತ್ವಾಕಾಂಕ್ಷೆ, ಕಾಮ, ಅತ್ಯಾಸೆ ಇಲ್ಲವೆ ಬಯಕೆ ಇವುಗಳ ಪ್ರತಿಕ್ರಿಯೆಯಿಂದ ಇಲ್ಲವೆ ಇವುಗಳು ಘನತೆ ಕಂಡುಕೊಳ್ಳುವಂತೆ ಮಾಡುವುದರಿಂದ ತುಂಬಿಬಿಡುತ್ತದೆ. ಅದು ದೈವೀ ಧ್ವನಿಗಳು ಹೇಳುವುದನ್ನು ಕೇಳುವುದಕ್ಕಿಂತ ಹೆಚ್ಚು ಮನಸಾರೆ ದೈತ್ಯರ ಹಾಗೂ ರಾಕ್ಷಸರ ಮಾತುಗಳನ್ನು ಇಷ್ಟಪಡುತ್ತದೆ.

ನಿಶ್ಚಲ ನೀರವತೆ ಅತ್ಯಗತ್ಯದ್ದಾಗಿದೆ, ಆದರೆ ವೈಶಾಲ್ಯದ ಆವಶ್ಯಕತೆಯೂ ಇದೆ. ಮನಸ್ಸು ನಿಶ್ಚಲ ನೀರವತೆಯಲ್ಲಿರದಿದ್ದರೆ ಪರಮೋಚ್ಚ ದೈವೀ ಸತ್ಯದ ಪ್ರಕಾಶಗಳನ್ನು ಸ್ವೀಕರಿಸಲಾರದು, ಇಲ್ಲವೆ ಸ್ವೀಕರಿಸಿ ಅದರಲ್ಲಿ ತನ್ನದೇ ಮಿನುಗುವ ಭಾಷೆಗಳನ್ನು ಮತ್ತು ಕುರುಡಾದ ನಾಟಕೀಯ ಹರಟೆಯನ್ನು ಮಿಶ್ರಣ ಮಾಡುತ್ತದೆ. ಕ್ರಿಯಾಶೀಲವಾಗಿ, ಔದ್ಧತ್ಯದಿಂದ ಗದ್ದಲ ಮಾಡುತ್ತ ಅದು ಸ್ವೀಕರಿಸಿದ್ದನ್ನು ವಿಕೃತ ಗೊಳಿಸುತ್ತದೆ, ವಿಕಾರಕ್ಕೀಡುಮಾಡುತ್ತದೆ. ವಿಶಾಲವಾಗಿರದಿದ್ದರೆ ಅದು ದೈವೀಸತ್ಯದ ಪರಿಣಾಮಕಾರಿ ಸಾಮರ್ಥ್ಯಕ್ಕೆ ಹಾಗೂ ಸೃಜನಾತ್ಮಕ ಶಕ್ತಿಗೆ ನಿವಾಸ ಮಾಡಿಕೊಡ–ಲಾರದು. ಸ್ವಲ್ಪ ಪ್ರಕಾಶ ಅಲ್ಲಿ ಲೀಲೆ ನಡೆಸಬಹುದು, ಆದರೆ ಅದು ಸಂಕುಚಿತ, ಸೀಮಿತ ಹಾಗೂ ನಿಷ್ಫಲವಾಗುವುದು. ಇಲ್ಲವೆ ಅವರೋಹಣ ಮಾಡುತ್ತಿರುವ ಶಕ್ತಿ ಇಕ್ಕಟ್ಟಿನಲ್ಲಿ ಸಿಕ್ಕಿ ಹಾಕಿಕೊಳ್ಳುತ್ತದೆ, ಅಡ್ಡಡ್ಡ ಸಾಗುತ್ತದೆ ಮತ್ತು ಆ ಬಂಡಾಯವೇಳುವ ಪರಕೀಯ ಸ್ಥಳದಿಂದ ತನ್ನದೆ ಸಹಜ ಎತ್ತರಗಳಿಗೆ ಹಿಂತೆಗೆದುಕೊಂಡು ಹೋಗುತ್ತದೆ. ಇಲ್ಲವೆ ಸ್ವಲ್ಪಮಟ್ಟಿಗಿನ ಏನಾದರೂ ಕೆಳಗಿಳಿದು ಬಂದು ಉಳಿದು–ಕೊಂಡರೆ ಅದು ಕೆಸರಿನಲ್ಲಿ ಸಿಕ್ಕಿ ಹಾಕಿಕೊಂಡ ಮುತ್ತಿನ ಹಾಗಿರುತ್ತದೆ, ಏಕೆಂದರೆ ಸ್ವಭಾವದಲ್ಲಿ ಯಾವ ಬಗೆಯ ಬದಲಾವಣೆ ಆಗುವುದಿಲ್ಲ ಇಲ್ಲವೆ ಕೇವಲ ಕೃಶವಾದ ಗಾಢತೆ ಇರುತ್ತದೆ, ಅದು ಸಂಕುಚಿತವಾದ ರೀತಿಯಲ್ಲಿ ಮೇಲ್ಗಡೆಗಿರುವ ಶಿಖರ–



ಗಳತ್ತ ಬೆರಳು ಮಾಡಿ ತೋರಿಸುತ್ತದೆ, ಆದರೆ ಆ ಗಾಢತೆಯನ್ನು ಹಿಡಿದಿಟ್ಟುಕೊಳ್ಳಲಾರದು, ತನ್ನ ಸುತ್ತಲಿರುವ ಜಗತ್ತಿನಲ್ಲಿ ಅದನ್ನು ಹರಡಲಾರದು.

**(12/12–13, 255–56)** **– ಶ್ರೀ ಅರವಿಂದರು**

*

## ಪ್ರತಿಯೊಬ್ಬನೂ ತನ್ನ ದೈವೀಸತ್ಯವನ್ನು ತನ್ನಲ್ಲಿಯೇ ಕೊಂಡೊಯ್ಯುತ್ತಾನೆ

ಹಿಂದೊಮ್ಮೆ ನನಗೆ ಕೇಳಲಾದ ಪ್ರಶ್ನೆಗೆ ನಾನಿನ್ನೂ ಉತ್ತರ ನೀಡಿಲ್ಲ. ಅದಕ್ಕೆ ಉತ್ತರ ಇಲ್ಲಿದೆ: ಅದನ್ನು ನಾನೆಲ್ಲಿಯೋ ಬರೆದಿಟ್ಟಿದ್ದೇನೆ.

ಪ್ರತಿಯೊಂದು ಸತ್ತೆಯ ಸರ್ವತಂತ್ರ ಸ್ವತಂತ್ರ (Absolute) ವಾದದ್ದು ಎಂದರೆ ಅದು ಭಗವಂತನೊಂದಿಗೆ ಹೊಂದಿರುವ ಅನನ್ಯ ಸಂಬಂಧ ಮತ್ತು ಭಗವಂತನನ್ನು ಪ್ರಕಟಣೆಯಲ್ಲಿ ಅಭಿವ್ಯಕ್ತಪಡಿಸುವ ಅನನ್ಯ ರೀತಿ ಆಗಿರುತ್ತದೆ. ಇದನ್ನು ಭಾರತದಲ್ಲಿ ಸತ್ತೆಯ ಸತ್ಯ, ಇಲ್ಲವೆ ಸತ್ತೆಯ ನಿಯಮ (ಧರ್ಮ) ಎಂದು ಕರೆಯಲಾಗುತ್ತದೆ, ಅದು ಸತ್ತೆಯ ಕೇಂದ್ರ ಹಾಗೂ ವ್ಯಕ್ತಿವಿಶಿಷ್ಟತೆಗೆ ಕಾರಣ.

ಪ್ರತಿಯೊಬ್ಬನೂ ತನ್ನ ಸತ್ತೆಯ ಸತ್ಯವನ್ನು ತನ್ನಲ್ಲಿ ಕೊಂಡೊಯ್ಯುತ್ತಾನೆ. ಆ ಸತ್ಯ ಅನನ್ಯವಾಗಿರುತ್ತದೆ, ಅದು ಒಟ್ಟಿನಲ್ಲಿ ಅವನದೇ ಆಗಿರುತ್ತದೆ ಮತ್ತು ಅವನು ಅದನ್ನು ತನ್ನ ಜೀವನದಲ್ಲಿ ಅಭಿವ್ಯಕ್ತಪಡಿಸಬೇಕಾಗಿರುತ್ತದೆ. ಆದರೆ ಈ ಸತ್ಯ ಎಂದರೇನು? ಈ ಪ್ರಶ್ನೆಯನ್ನು ನನಗೆ ಕೇಳಲಾಗಿದೆ:

***ಪ್ರಶ್ನೆ :*** *ಸತ್ತೆಯ ಸತ್ಯ ಎಂದರೇನು? ಅದನ್ನು ಬಾಹ್ಯದ ಭೌತಿಕ ಜೀವನದಲ್ಲಿ ಹೇಗೆ ಅಭಿವ್ಯಕ್ತಪಡಿಸಲಾಗುತ್ತದೆ?*

**ಶ್ರೀಮಾತೆ :** ಅದನ್ನು ಅಭಿವ್ಯಕ್ತಪಡಿಸುವ ರೀತಿ ಹೀಗಿದೆ : ಪ್ರತಿಯೊಂದು ಸತ್ತೆ ಮೂಲ ಪರಮೋಚ್ಚವಾದುದರೊಂದಿಗೆ ನೇರ ಹಾಗೂ ಅನನ್ಯ ಸಂಬಂಧ ಹೊಂದಿರುತ್ತದೆ, ಅದು ಎಲ್ಲ ಸೃಷ್ಟಿಯಾಚೆಗಿರುತ್ತದೆ. ಈ ಅನನ್ಯ ಸಂಬಂಧವನ್ನೇ ಮನುಷ್ಯ ತನ್ನ ಜೀವನದಲ್ಲಿ, ಭಗವಂತನೊಂದಿಗೆ ಅನನ್ಯ ಸಂಬಂಧ ದೊರಕಿಸುವುದರ ಮೂಲಕ, ಅಭಿವ್ಯಕ್ತಪಡಿಸಬೇಕು. ಆದ್ದರಿಂದ ಪ್ರತಿಯೊಬ್ಬನೂ ನೇರವಾಗಿ, ಪ್ರತ್ಯೇಕವಾಗಿ ಭಗವಂತನೊಡನೆ ಸಂಬಂಧದಲ್ಲಿರುತ್ತಾನೆ. ಮನುಷ್ಯ ಭಗವಂತನೊಡನೆ ಹೊಂದಿರುವ ಆ ಸಂಬಂಧ ಅನನ್ಯ ಹಾಗೂ ಪ್ರತ್ಯೇಕ–ವಾಗಿರುತ್ತದೆ. ಅದರಿಂದಾಗಿ ನೀವು ಸ್ವೀಕರಿಸುವ ಸ್ಥಿತಿಯಲ್ಲಿದ್ದಾಗ, ಹೊಂದಲು

ಸಾಧ್ಯವಿರುವ ಇಡಿಯಾದ ಸಂಬಂಧವನ್ನು ಸ್ವೀಕರಿಸುತ್ತೀರಿ, ಇದನ್ನು ಬೇರೆ ಯಾರೊಂದಿಗೆ ಪಾಲು ಮಾಡಿಕೊಳ್ಳುವುದಿರುವುದಿಲ್ಲ, ಭಾಗಶಃವಾಗಿರುವುದಿಲ್ಲ, ಪುನರಾವರ್ತಿಸುವುದಾಗಿರುವುದಿಲ್ಲ, ಆದರೆ ಪ್ರತಿಯೊಬ್ಬನೂ ಭಗವಂತನೊಂದಿಗೆ ಹೊಂದಿರಬಹುದಾದ ಅವನದೇ ಸಂಬಂಧವಾಗಿರುತ್ತದೆ. ಆದ್ದರಿಂದ ಮನಶ್ಶಾಸ್ತ್ರೀಯ ದೃಷ್ಟಿಕೋನದಿಂದ, ಭಗವಂತನೊಂದಿಗೆ ನೇರ ಸಂಬಂಧ ದೊರಕಿಸುವುದರಲ್ಲಿ ಮನುಷ್ಯ ತಾನೊಬ್ಬನೇ ಇರುತ್ತಾನೆ.

ಪರಮೋಚ್ಚನಾದವನೊಂದಿಗೆ ಮನುಷ್ಯ ತಾನೊಬ್ಬನೇ ಇರುತ್ತಾನೆ.

ಭಗವಂತನೊಡನೆ ಮನುಷ್ಯ ಹೊಂದಬಹುದಾದ ಸಂಬಂಧದಲ್ಲಿ ಅವನಿಗೆ ಸಮನಾದವನು ಬೇರೆ ಯಾರೂ ಇರುವುದಿಲ್ಲ, ಇನ್ನೊಬ್ಬ ಹೊಂದಿರುವ ಸಂಬಂಧ ಅದೇ ಬಗೆಯದಾಗಿರುವುದಿಲ್ಲ. ಯಾರೇ ಇಬ್ಬರು ಒಂದೇ ರೀತಿಯವರಾಗಿರು–ವುದಿಲ್ಲ, ಆದ್ದರಿಂದ ಇನ್ನೊಬ್ಬನಿಗೆ ಕೊಡುವುದಕ್ಕಾಗಿ ನಿಮ್ಮಿಂದ ಏನನ್ನೂ ಕಿತ್ತುಕೊಳ್ಳಲಿಕ್ಕಾಗುವುದಿಲ್ಲ. ಈ ಸಂಬಂಧ ಸೃಷ್ಟಿಯಿಂದ ಮಾಯವಾದರೆ, ಅದು ನಿಜವಾಗಿ ಮಾಯವಾಗುವುದು–ಅದು ಅಸಾಧ್ಯವಾದದ್ದು.

ಮತ್ತು ಇದರರ್ಥ ಮನುಷ್ಯ ತನ್ನ ಸತ್ತೆಯ ಸತ್ಯದಲ್ಲಿ ಜೀವಿಸುತ್ತಿದ್ದರೆ ಅವನು ಸೃಷ್ಟಿಯ ಅತ್ಯಗತ್ಯ ಭಾಗವಾಗುತ್ತಾನೆ. ಸ್ವಾಭಾವಿಕವಾಗಿ ತಾನೇನಾಗಬೇಕೆಂದು ಮನುಷ್ಯ ಬಯಸುತ್ತಾನೋ ಆ ರೀತಿಯಾದಾಗ ಎಂಬ ಅರ್ಥದಲ್ಲಿ ನಾನು ಹೇಳಿಲ್ಲ. ನಾನು ಹೇಳುತ್ತಿರುವುದು: ಮನುಷ್ಯ ತನ್ನ ಸತ್ತೆಯ ಸತ್ಯವನ್ನು ಜೀವಿಸು–ತ್ತಿದ್ದರೆ ಮತ್ತು ಅಭಿವೃದ್ಧಿ ಹೊಂದುತ್ತ ಅವನು ತನ್ನ ಸತ್ತೆಯ ಸತ್ಯದ ಸಂಪರ್ಕದಲ್ಲಿ ಪ್ರವೇಶಿಸಿದರೆ, ಕೂಡಲೆ ಭಗವಂತನೊಡನೆ ಅನನ್ಯವಾದ ಮತ್ತು ಪ್ರತ್ಯೇಕವಾದ ಸಂಬಂಧದಲ್ಲಿರುತ್ತಾನೆ, ಅದಕ್ಕೆ ಸಮಾನವಾದುದು ಬೇರೆ ಯಾವುದೂ ಇರುವುದಿಲ್ಲ.

ಅದಿರುವುದು ಹಾಗೆ.

ಮತ್ತು ಸ್ವಾಭಾವಿಕವಾಗಿ, ಅದು ನಿಮ್ಮ ಸತ್ತೆಯ ಸತ್ಯವಾಗಿರುವುದರಿಂದ ಅದನ್ನೇ ನೀವು ನಿಮ್ಮ ಜೀವನದಲ್ಲಿ ಅಭಿವ್ಯಕ್ತಪಡಿಸಬೇಕು.

*

***ಪ್ರಶ್ನೆ :*** *ಮನುಷ್ಯ ಸತ್ಯವನ್ನು ವಸ್ತು–ವಿಷಯಗಳಲ್ಲಿ ಕಂಡುಕೊಂಡರೆ, ಅವನು ಭಗವಂತನನ್ನು ಕಂಡುಕೊಂಡಿದ್ದಾನೆ ಎಂದು ಅರ್ಥ ಮಾಡಿಕೊಳ್ಳಬಹುದೇ?*



**ಶ್ರೀಮಾತೆ :** ನಿಶ್ಚಿತವಾಗಿ ಇರುವ ಮಾರ್ಗ ಅದೊಂದೇ. ಪ್ರತಿಯೊಂದೂ, ಅದೇನೇ ಆಗಿರಲಿ, ತನ್ನಲ್ಲಿ ಸನಾತನ ಸತ್ಯವನ್ನು ಕೊಂಡೊಯ್ಯದ ಯಾವ ವಸ್ತುವೂ ಇರುವುದಿಲ್ಲ, ಅದು ಸನಾತನ ಸತ್ಯವನ್ನು ಕೊಂಡೊಯ್ಯದಿದ್ದರೆ, ಅಸ್ತಿತ್ವದಲ್ಲೇ ಇರುವುದಿಲ್ಲ, ವಿಶ್ವ ತನ್ನಲ್ಲಿ ಸತ್ಯವನ್ನು ಒಳಗೊಳ್ಳದಿದ್ದರೆ, ಒಂದು ಸೆಕೆಂಡಿನ ಸಹಸ್ರ ಭಾಗಗಳಲ್ಲಿ ಒಂದು ಭಾಗದಷ್ಟೂ ಕಾಲ ಅಸ್ತಿತ್ವದಲ್ಲಿರಲಾರದು.

ಅತ್ಯಂತ ಗಮನಾರ್ಹ ಸಂಗತಿ ಎಂದರೆ ನೀವು ನಿಷ್ಕಪಟರಾಗಿದ್ದರೆ ವಸ್ತು–ವಿಷಯಗಳು ಏಕಿವೆ, ಹಾಗೇಕಿವೆ, ಅವುಗಳ ಕಾರಣ, ಮೂಲ ಮತ್ತು ವಿಧಾನ ಏನು ಎಂಬುದನ್ನು ಕಂಡುಕೊಳ್ಳುವಿರಿ. ಏಕೆಂದರೆ ಅದು ಏಕೈಕ ವಿಷಯ. ಎಲ್ಲದರ ಆಧಾರವಾದ ದೈವೀಸತ್ಯ ಅಲ್ಲಿದೆ, ಅದು ಅಲ್ಲಿರದಿದ್ದರೆ ಯಾವುದೂ ಇರುತ್ತಿರಲಿಲ್ಲ. ಒಮ್ಮೆ ನೀವು ದೈವೀಸತ್ಯವನ್ನು ಕಂಡುಕೊಂಡಿರಾದರೆ, ಮೂಲವನ್ನು ಕಾರಣವನ್ನು ಬದಲಿಸುವ ಸಾಧನವನ್ನು–ಅದು ಆ ರೀತಿ ಏಕಿದೆ, ಅದಿರುವುದೇಕೆ, ಅದನ್ನು ಬದಲಿಸುವುದು ಹೇಗೆ ಎಂಬುದನ್ನು ಕಂಡುಕೊಳ್ಳುವಿರಿ. ನೀವು ಭಗವಂತನ ಸಂಪರ್ಕದಲ್ಲಿದ್ದರೆ ಪ್ರತಿಯೊಂದಕ್ಕೂ ನಿಮ್ಮಲ್ಲಿ ಬೀಗದಕೈ ಇರುತ್ತದೆ. ಏಕೆ, ಹೇಗೆ, ಬದಲಿಸುವ ಸಾಧನವೇನು? ಎಂಬುದನ್ನು ತಿಳಿದುಕೊಳ್ಳುವಿರಿ.

ಕೈಕೊಳ್ಳಬೇಕಾದ ಏನೋ ಒಂದಿದೆ, ಕಾರ್ಯಮಾಡುವುದಿದೆ, ಅದು ಬಹಳ ಸ್ವಾರಸ್ಯಕರವಾಗಿರುತ್ತದೆ. ಅಸ್ತವ್ಯಸ್ತವಾದ ಗುಡ್ಡೆಯಂತಿರುವ ದ್ರವ್ಯದ ಚಿಕ್ಕ ಮೊತ್ತ–ವೊಂದನ್ನು ನೀವು ಪ್ರತಿನಿಧಿಸುತ್ತೀರಿ, ಅದೇ ನಿಮ್ಮನ್ನು ರೂಪಿಸಿದೆ. ಅದರೊಳಗೆ ಪ್ರವೇಶಿಸಿರಿ ಹಾಗೂ ಅದಕ್ಕೆ ಬೀಗದ ಕೈಯನ್ನು ಅರಸಿರಿ. ನೀವು ಅಲ್ಲಿ ಕೇವಲ ಅದರೊಳಗೆ ಇಳಿದು ಹೋಗಬೇಕು. "ಅದು ನನ್ನ ಅಳವಿನಾಚೆಗೆ ಇರುವ ವಿಷಯ, ಅದು ನನಗೆ ಅತಿ ಭವ್ಯವಾದದ್ದೆನಿಸುತ್ತದೆ" ಎಂದು ಹೇಳಬೇಡಿರಿ. ನಿಮ್ಮ ಚಿಕ್ಕ ವ್ಯಕ್ತಿವಿಶಿಷ್ಟತೆಯೊಳಗೆ ಇಳಿದು ಹೋಗಿರಿ, ಅಲ್ಲಿ ಬೀಗದ ಕೈ ಇರುವುದನ್ನು ಕಂಡು–ಕೊಳ್ಳುವಿರಿ, ಅದು ಎಲ್ಲ ದ್ವಾರಗಳನ್ನು ತೆರೆದಿರಿಸುತ್ತದೆ.

*

ನೀವು ಸಾಮಾನ್ಯ ಮನುಷ್ಯರಾಗಿದ್ದರೆ, ತೊಂದರೆ ತೆಗೆದುಕೊಂಡು ವಿಧಾನವನ್ನು ತಿಳಿದುಕೊಳ್ಳಿರಿ. ಬೆಳವಣಿಗೆಗಾಗಿ ನಿಮ್ಮ ಕ್ಷಮತೆಗೆ ಬಹುಮಟ್ಟಿಗೆ ಮಿತಿಯಿರುವುದಿಲ್ಲ.

ಪ್ರತಿಯೊಬ್ಬನೂ ಒಂದು ವಿಶಿಷ್ಟ ಮಾದರಿಯವನಾಗಿರುತ್ತಾನೆ ಎಂಬ ವಿಚಾರ ವಿದೆ. ಉದಾಹರಣೆಗೆ ಪಾಯಿನ್ (pine) ಗಿಡ ಓಕ ಗಿಡವಾಗುವುದು ಎಂದಿಗೂ ಸಾಧ್ಯವಿಲ್ಲ (palm) ಗಿಡ ಗೋದಿ ಸಸ್ಯವಾಗುವುದು ಎಂದಿಗೂ ಸಾಧ್ಯವಿಲ್ಲ. ಇದು ಸ್ಪಷ್ಟವಿದೆ. ಆದರೆ ಅದು ಬೇರೆ ವಿಷಯ: ಅದರರ್ಥ ನಿಮ್ಮ ಸತ್ತೆಯ ಸತ್ಯ ನಿಮ್ಮ ನೆರೆಹೊರೆಯವನ ಸತ್ಯವಾಗಿರುವುದಿಲ್ಲ ಎಂದಿದೆ. ಆದರೆ ನಿಮ್ಮ ಸತ್ತೆಯ ಸತ್ಯದಲ್ಲಿ, ನಿಮ್ಮ ರೂಪಗೊಂಡಿರುವಿಕೆಗೆ ಅನುಗುಣವಾಗಿ ನಿಮ್ಮ ಪ್ರಗತಿ, ಬಹುಮಟ್ಟಿಗೆ, ಮಿತಿಯಿಲ್ಲದ್ದಾಗಿರುತ್ತದೆ. ಅದು ಮಿತಿಗೊಳಪಟ್ಟಿದೆ ಎಂದು ನೀವು ಮನವರಿಕೆ ಮಾಡಿಕೊಂಡಿದುದರ ಕಾರಣದಿಂದಾಗಿ ಹಾಗೂ ನಿಜವಾದ ವಿಧಾನದ ಬಗ್ಗೆ ಇರುವ ಅಜ್ಞಾನದಿಂದಾಗಿ ಅದು ಮಿತಿಗೊಳಗಾಗಿರುತ್ತದೆ.

ಕೈಕೊಳ್ಳುವುದು ಹೇಗೆ ಎಂದು ಮನುಷ್ಯ ತಿಳಿದುಕೊಂಡಿದ್ದರೆ, ಅವನು ಕೈಕೊಳ್ಳಲು ಅಸಾಧ್ಯವಾದ ಯಾವುದೂ ಇರುವುದಿಲ್ಲ.

**(8/280–81, 5/40–41, 8/387)** **– ಶ್ರೀಮಾತೆ**

*

## ಒಂದು ಮೂಲಭೂತ ದೈವೀಸತ್ಯ

ಜಗತ್ತು ಒಂದು ರೂಪ, ಭಗವಂತ ನೈಜತೆಯಾಗಿದ್ದಾನೆ. ರೂಪದಲ್ಲಿ ಮನುಷ್ಯ ದೈವೀ ಸಾನ್ನಿಧ್ಯವನ್ನು ಕಾಣಬೇಕು.

*

ಇಲ್ಲಿರುವುದೆಲ್ಲವೂ ದೇವ, ದಿವ್ಯಾತ್ಮ ಇಲ್ಲವೆ ದೈವೀ ಸ್ವ–ಅಸ್ತಿತ್ವ, ಬ್ರಹ್ಮ, ಏಕಮಾದ್ವಿತೀಯ ಇತರ ಬೇರೇನೂ ಇಲ್ಲ, ಭಿನ್ನವಾದುದೂ ಇಲ್ಲ. ಪ್ರಕೃತಿ ಇದೆ ಮತ್ತು ಅದು ದೈವೀ ಪ್ರಜ್ಞೆಯ ಉಪಕರಣವಾಗಿರುತ್ತದೆ, ಬೇರೇನೂ ಆಗಿರಲಾರದು. ಎಲ್ಲ ಸತ್ತೆಗಳಿವೆ, ಅವು ದೈವೀ ಸತ್ತೆಯ ಆಂತರಿಕ ಹಾಗೂ ಬಾಹ್ಯ, ವಸ್ತುನಿಷ್ಠ ಇಲ್ಲವೆ ವ್ಯಕ್ತಿನಿಷ್ಠ ಆತ್ಮರೂಪಗಳು ಇಲ್ಲವೆ ದೈಹಿಕ ರೂಪಗಳು ಮಾತ್ರವಾಗಿರುತ್ತವೆ, ಇಲ್ಲವೆ ಆ ಸತ್ತೆಯ ದೈವೀ ಪ್ರಜ್ಞೆಯ ಸಾಮರ್ಥ್ಯದ ಪರಿಣಾಮ ಸ್ವರೂಪದವಾಗಿರುತ್ತವೆ, ಸಾಂತವಾದದ್ದನ್ನು ಕೈಗೆತ್ತಿಕೊಳ್ಳುವುದಕ್ಕೆ ಅನಂತವಾದದ್ದು ಅಸಮರ್ಥವಾಗಿಲ್ಲ, ಬದಲಾಗಿ ಇಡೀ ವಿಶ್ವ ಅನಂತ ಸಾಂತರೂಪ ತಳೆದುದರ ಪರಿಣಾಮವಾಗಿದೆ. ನಾವು ನೋಡಬಲ್ಲೆವು, ನಾವು ಹೇಗೆ ಬೇಕಾದರೂ ನೋಡಲಿ, ನಾವು ವಾಸಿಸುತ್ತಿರುವ ಇಡೀ ಜಗತ್ತಿನಲ್ಲಿ ಅದನ್ನು ಬಿಟ್ಟು ಬೇರೇನೂ ಇಲ್ಲ. ದಿವ್ಯಾತ್ಮ ರೂಪ



ತಾಳುವುದಕ್ಕೆ ಅಸಮರ್ಥನಾಗಿರುವುದರ ಬದಲಾಗಿ ಇಲ್ಲವೆ ಭೌತದ್ರವ್ಯ ಅಥವಾ ಮನಸ್ಸು ಇವುಗಳ ರೂಪದೊಡನೆ ಸಂಪರ್ಕ ಇಟ್ಟುಕೊಳ್ಳುವುದನ್ನು ಮತ್ತು ಸೀಮಿತ ಸ್ವಭಾವ ಇಲ್ಲವೆ ದೇಹಧಾರಣೆ ಮಾಡುವುದನ್ನು ಇಷ್ಟಪಡದೆ ಇರುವುದರ ಬದಲಾಗಿ ಇಲ್ಲಿರುವುದೆಲ್ಲ ಅದೇ ಆಗಿದೆ, ಜಗತ್ತು ಆ ಬಗೆಯ ಸಂಪರ್ಕ ಹಾಗೂ ರೂಪ ತಾಳುವಿಕೆ ಇವುಗಳ ಮೂಲಕ ಅಸ್ತಿತ್ವದಲ್ಲಿದೆ. ಜಗತ್ತು ತನ್ನಲ್ಲಿರುವ ಆತ್ಮ ಇಲ್ಲವೆ ಜೀವಶಕ್ತಿ, ಮನಸ್ಸು ಮತ್ತು ದೇಹ ಇವುಗಳ ಕ್ರಿಯೆಯಲ್ಲಿ ಮಧ್ಯೆ ಪ್ರವೇಶಿಸದ, ನಿಯಮವನ್ನು ಮಾತ್ರ ಅನುಸರಿಸುವ ಯಾಂತ್ರಿಕತೆಯಾಗಿಲ್ಲ.–ಕೇವಲ ಯಾವುದೋ ಮೂಲ, ಉದಾಸೀನ, ದಿವ್ಯಾತ್ಮ ನಿಷ್ಕ್ರಿಯವಾಗಿ, ಎಲ್ಲಿಯೋ ಹೊರಗೆ ಇಲ್ಲವೆ ಮೇಲ್ಗಡೆ ಅಸ್ತಿತ್ವದಲ್ಲಿದೆ ಎಂದಲ್ಲ, ತದ್ವಿರುದ್ಧವಾಗಿ ಇಡೀ ಜಗತ್ತು ಹಾಗೂ ಅದರ ಪ್ರತಿಯೊಂದು ಕಣ, ಕಾರ್ಯದಲ್ಲಿ ತೊಡಗಿಕೊಂಡಿರುವ ದೈವೀ ಶಕ್ತಿಯಲ್ಲದೆ ಬೇರೇನಲ್ಲ. ಮತ್ತು ದೈವೀಶಕ್ತಿ ಅದರ ಪ್ರತಿಯೊಂದು ಚಲನೆಯನ್ನು ನಿರ್ಧರಿಸುತ್ತದೆ, ಅದರ ಮೇಲೆ ಆಳಿಕೆ ನಡೆಸುತ್ತದೆ, ಅದರ ಪ್ರತಿಯೊಂದು ರೂಪದಲ್ಲಿ ವಾಸಿಸುತ್ತದೆ, ಇಲ್ಲಿ ಪ್ರತಿಯೊಂದು ಜೀವಶಕ್ತಿಯನ್ನು ಮನಸ್ಸನ್ನು ತನ್ನ ವಶದಲ್ಲಿಟ್ಟುಕೊಂಡಿರುತ್ತದೆ. ಎಲ್ಲವೂ ಇಲ್ಲಿ ಭಗವಂತನಲ್ಲಿದೆ, ಅವನಲ್ಲಿ ಚಲಿಸುತ್ತದೆ, ಮತ್ತು ತನ್ನ ಸತ್ತೆಯನ್ನು ಹೊಂದಿದೆ, ಪ್ರತಿಯೊಂದು ಜೀವಿ ಮುಸುಕಿನಲ್ಲಿದ್ದ ನಾರಾಯಣ.

ಜನ್ಮತಾಳದ ಸತ್ತೆಗೆ ಜನ್ಮತಾಳುವ ಸಾಮರ್ಥ್ಯವಿಲ್ಲದಿರುವುದಕ್ಕಿಂತಲೂ ಹೆಚ್ಚಾಗಿ, ಎಲ್ಲ ಸತ್ತೆಗಳು ತಮ್ಮ ವ್ಯಕ್ತಿವಿಶಿಷ್ಟತೆಗಳಲ್ಲಿಯೂ ಕೂಡ ಜನ್ಮತಾಳದ ಆತ್ಮಗಳು, ಆದಿ ಅಂತ್ಯಗಳಿಲ್ಲದ ಸನಾತನವಾಗಿರುವಂತಹವು ಮತ್ತು ಅವುಗಳ ಸಾರಭೂತ ಅಸ್ತಿತ್ವದಲ್ಲಿ ಮತ್ತು ಅವುಗಳ ವಿಶ್ವಂಭರತೆಯಲ್ಲಿ ಎಲ್ಲವೂ ಏಕೈಕವಾದ ಜನ್ಮತಾಳದ ದಿವ್ಯಾತ್ಮವೇ ಆಗಿರುತ್ತವೆ. ಅವುಗಳಿಗೆ ಜನ್ಮ, ಮೃತ್ಯುಗಳು ಧಾರಣ ಮಾಡುವ ಹಾಗೂ ರೂಪಗಳನ್ನು ಬದಲಿಸುವ ಗೋಚರ ಸಂಗತಿಗಳಾಗಿರುತ್ತವೆ. ಪರಿಪೂರ್ಣವಾದದ್ದು ಅಪರಿಪೂರ್ಣ ಧಾರಣ ಮಾಡುವುದು ವಿಶ್ವದ ಇಡೀ ರಹಸ್ಯ ಗೋಚರ ಸಂಗತಿ, ಆದರೆ ಅಪರಿಪೂರ್ಣತೆ ಧಾರಣ ಮಾಡಿದ ಮನಸ್ಸು ಅಥವಾ ದೇಹದಲ್ಲಿ ತೋರಿಬರುತ್ತದೆ, ಗೋಚರ ಸಂಗತಿಯಲ್ಲಿ ಉಳಿದು–ಕೊಳ್ಳುತ್ತದೆ, ಆದರೆ ಅದನ್ನು ಧಾರಣ ಮಾಡಿರುವುದರಲ್ಲಿ ಅಪರಿಪೂರ್ಣತೆ ಇರುವುದಿಲ್ಲ. ಇದು ಇರುವ ರೀತಿಯನ್ನು, ಎಲ್ಲವನ್ನೂ ಬೆಳಗುವ ಸೂರ್ಯನಲ್ಲಿ ಪ್ರಕಾಶದ ಇಲ್ಲವೆ ದರ್ಶಿಸುವ ದೋಷವಿಲ್ಲದೆ ಇದ್ದರೂ ಅದು ಕೇವಲ ವ್ಯಕ್ತಿಯ ನೋಡುವ ಇಂದ್ರಿಯ (ಕಣ್ಣು)ದ ಕ್ಷಮತೆಗಳಲ್ಲಿ ಇರುವುದಕ್ಕೆ ಹೋಲಿಸಬಹುದು.

ದೇವರು ಎಲ್ಲೋ ದೂರದಲ್ಲಿರುವ ಸ್ವರ್ಗದಲ್ಲಿದ್ದುಕೊಂಡು ಜಗತ್ತನ್ನು ಆಳುವುದಿಲ್ಲ, ಆದರೆ ಅದನ್ನು ತನ್ನ ನಿಕಟ ಸರ್ವವ್ಯಾಪಿತ್ವ (omnipresence) ದಿಂದ ಕೈಕೊಳ್ಳು–ತ್ತಾನೆ. ಶಕ್ತಿಯ ಪ್ರತಿಯೊಂದು ಸಾಂತ ಕಾರ್ಯಗತಿಯಲ್ಲಿ ಅನಂತ ದೈವೀಶಕ್ತಿಯ ಕ್ರಿಯೆಯಿರುತ್ತದೆ. ಅಲ್ಲಿ ಸೀಮಿತ, ಪ್ರತ್ಯೇಕ, ಸ್ವ–ಅಸ್ತಿತ್ವದಲ್ಲಿರುವ ಚೈತನ್ಯ ತನ್ನದೇ ಶ್ರಮದಿಂದ ಕೈಕೊಳ್ಳುವ ಕಾರ್ಯಗತಿ ಇರುವುದಿಲ್ಲ, ಸಂಕಲ್ಪ ಹಾಗೂ ಜ್ಞಾನದ ಪ್ರತಿಯೊಂದು ಕಾರ್ಯಗತಿಯಲ್ಲಿ ಅದಕ್ಕೆ ಆಧಾರ ಒದಗಿಸುತ್ತಿರುವ ಅನಂತ ಸರ್ವ–ಸಂಕಲ್ಪ ಮತ್ತು ಸರ್ವ–ಜ್ಞಾನ ಇರುವುದನ್ನು ಶೋಧಿಸಬಹುದು. ಭಗವಂತನ ನಿಯಮವು ಉಪಸ್ಥಿತವಿಲ್ಲದೆ ಇರುವ, ಪರಕೀಯ, ಬಾಹ್ಯ ಆಡಳಿತದ ರೀತಿಯದಾಗಿರುವುದಿಲ್ಲ, ಅವನು ಎಲ್ಲರ ಮೇಲೆ ಆಳಿಕೆ ನಡೆಸುತ್ತಾನೆ, ಏಕೆಂದರೆ ಅವನು ಎಲ್ಲವನ್ನೂ ಅತಿಶಯಿಸುತ್ತಾನೆ, ಆದರೆ ಹಾಗೆಯೇ ಅವನು ಎಲ್ಲ ಚಲನೆಗಳಲ್ಲಿ ವಾಸಿಸುತ್ತಾನೆ ಮತ್ತು ಅವುಗಳ ಪರಿಪೂರ್ಣ ಆತ್ಮ ಹಾಗೂ ಜೀವಶಕ್ತಿಯಾಗಿರುತ್ತಾನೆ.

*

ಪ್ರಾಚೀನ ವೈದಿಕ ವಚನಗಳಿಂದ ಪ್ರಾರಂಭಿಸೋಣ: 'ಓಂ ತತ್ ಸತ್' ಇರುವುದು ಕೇವಲ ಬ್ರಹ್ಮನ್. 'ಸರ್ವಂ ಖಲ್ವಿದಂ ಬ್ರಹ್ಮ', ನಮ್ಮ ಅರಿವಿಗೆ ಬರುವ ಸರ್ವವೂ ಬ್ರಹ್ಮ. . . .

ಇದರಲ್ಲಿ ನಾವು ಎಲ್ಲದರ ಒಂದು ಮೂಲಭೂತ ಸತ್ಯದತ್ತ ತಲುಪುತ್ತೇವೆ. ಮತ್ತು ಸ್ವಲ್ಪ ಮಟ್ಟಿಗಿನ ಆಲೋಚನೆ ತೋರಿಸಿಕೊಡುವುದೇನೆಂದರೆ ನಾವು ನಿಜವಾಗಿ ಮತ್ತು ಸರಿಯಾಗಿ ಅದನ್ನು ಅರಿತುಕೊಂಡರೆ ಉಳಿದವುಗಳೆಲ್ಲ ತಾವೇ ಬಹುಶಃ ತಮ್ಮನ್ನು ತೆರೆದುತೋರಿಸಿಕೊಡುತ್ತವೆ ಮತ್ತು ಅವು ತಮ್ಮ, ತಮ್ಮ ಸ್ಥಾನದಲ್ಲಿರುತ್ತವೆ ಎಂಬುದಾಗಿದೆ, 'ತಸ್ಮಿನ್ ವಿಜ್ಞಾತೆ ಸರ್ವಮ್ ವಿಜ್ಞಾತಮ್'.

**(23/1081,13/143–44)** **– ಶ್ರೀ ಅರವಿಂದರು**

*

## ಯೋಚನೆ ಹಾಗೂ ದೈವೀಸತ್ಯ: ಜ್ಞಾನದ ಸಾಪೇಕ್ಷತೆ

ಯೋಚನೆ ಎಷ್ಟೊಂದು ಅಂದಾಜಿನ ವಿಷಯವಾಗಿರುತ್ತದೆ, ಸತ್ಯದಿಂದ ಎಷ್ಟೊಂದು ದೂರವಿರುತ್ತದೆ, . . . ಅದು ಕೇವಲ ಒಂದು ಬಗೆಯ, ಅಸ್ಪಷ್ಟ, ಅಪೂರ್ಣ, ಗೊಂದಲಕ್ಕೀಡಾದ ಚಿಂತನೆ, ಅದರ ಅತಿ ಒಳ್ಳೆಯದೂ ಕೂಡ ಮಿಥ್ಯೆ–



ಯಿಂದ ತುಂಬಿಕೊಂಡಿರುತ್ತದೆ. ಹಾಗಾಗಿ, ನಿಜವಾಗಿ, ಅದು ವ್ಯಾವಹಾರಿಕ–ವಾಗುವ ಕ್ಷಣವಾಗಿರುತ್ತದೆ, ಮತ್ತು ನಿಮಗೆ "ಸರಿ, ಈ ಯೋಚನೆ ಪ್ರಗತಿಗೆ ಸಹಾಯಕವಾಗುವುದಾದರೆ, ಅದನ್ನು ಒಪ್ಪಿಕೊಳ್ಳುತ್ತೇನೆ" ಎಂದು ಹೇಳುತ್ತೀರಿ. ಆದರೆ ಅದೇ ಪರಿಪೂರ್ಣ ಸತ್ಯ ಎಂದು ಯೋಚಿಸಿದರೆ, ನೀವು ತಪ್ಪು ಮಾಡುವುದು ನಿಶ್ಚಿತ, ಏಕೆಂದರೆ ಪರಿಪೂರ್ಣ ಸತ್ಯವಾಗಿರುವ ಒಂದೂ ಯೋಚನೆ ಇರುವುದಿಲ್ಲ.

*

ಶ್ರೀ ಅರವಿಂದರ ಒಂದು ಚಿಕ್ಕ ಚಿಂತನೆ ಅದ್ಭುತವಾಗಿದೆ. ಅದರಲ್ಲಿ ಅವರು "ಯಾವುದೇ ಬೋಧನೆ ಅದೆಷ್ಟೇ ಶ್ರೇಷ್ಠವಾಗಿರಲಿ, ಎಷ್ಟೇ ಪರಿಶುದ್ಧವಾಗಿರಲಿ, ಎಷ್ಟೇ ಉದಾರವಾಗಿರಲಿ, ಸತ್ಯವಾಗಿರಲಿ, ಅದು ದೈವೀ ಸತ್ಯದ ಒಂದು ಮುಖ ಮಾತ್ರ–ವಾಗಿರುತ್ತದೆ ಇಡೀ ದೈವೀಸತ್ಯವಾಗಿರುವುದಿಲ್ಲ" ಎಂದು ಹೇಳಿದ್ದಾರೆ. ನಾನಿಲ್ಲಿ ಆ ಚಿಂತನೆ ಕುರಿತು ವಿಮರ್ಶಾತ್ಮಕ ಮಾತುಗಳನ್ನು ಹೇಳಿದ್ದೇನೆ, ಅವರದೇ ಮಾತು–ಗಳನ್ನಲ್ಲ,* ಸರಿ, ಅದಿರುವುದು ಹಾಗಿದೆ. ನಿಮ್ಮ ಯೋಚನೆ ಏನೇ ಆಗಿರಲಿ, ಅದು ಅತ್ಯುಚ್ಚ, ಬಹಳ ಪರಿಶುದ್ಧ, ಉದಾರ ಹಾಗೂ ಸತ್ಯವಾದದ್ದೇ ಆಗಿದ್ದರೂ ಕೂಡ, ಸೂಕ್ಷ್ಮದರ್ಶಕಕ್ಕೆ ಕಂಡುಬರುವಷ್ಟು ದೈವೀಸತ್ಯದ ಭಾಗವಾಗಿರುತ್ತದೆ, ಪರಿಣಾಮ ವಾಗಿ ಅದು ಇಡೀ ಸತ್ಯವಾಗಿರುವುದಿಲ್ಲ. ಹಾಗಾಗಿ ಈ ಕ್ಷೇತ್ರದಲ್ಲಿ ವ್ಯವಹಾರ ಜ್ಞಾನ ಉಪಯೋಗಿಸಬೇಕು, ನಾನು ಹೇಳಿದ ಹಾಗೆ, ಆ ಯೋಚನೆಯನ್ನು ಸದ್ಯದ ಮಟ್ಟಿಗೆ ಒಪ್ಪಿಕೊಳ್ಳಿರಿ, ಅದನ್ನು ನೀವಿಟ್ಟುಕೊಂಡಾಗ ಅದು ಪ್ರಗತಿ ಸಾಧಿಸುವುದಕ್ಕೆ ಸಹಾಯಕವಾಗುವುದು. ಕೆಲವೊಮ್ಮೆ ಅದು ಜ್ಞಾನೋದಯವನ್ನು ಉಂಟು–ಮಾಡುವ ರೀತಿಯಲ್ಲಿ ಬರುತ್ತದೆ, ಮತ್ತು ಅದು ಪ್ರಗತಿಗೆ ಸಹಾಯಕವಾಗಿರುತ್ತದೆ. ಅದು ನಿಮಗೆ ಸಹಾಯಕವಾಗಿರುವವರೆಗೆ ಅದನ್ನು ಕಾದಿಟ್ಟುಕೊಂಡಿರಿ, ಚೂರುಚೂರಾಗಲು ತೊಡಗಿದಾಗ ಅದನ್ನು ತ್ಯಜಿಸಿರಿ, ಪ್ರಗತಿಯ ದಾರಿಯಲ್ಲಿ ಇನ್ನೂ ಹೆಚ್ಚು ದೂರ ಕರೆದೊಯ್ಯುವ ಇನ್ನೊಂದು ಯೋಚನೆಯನ್ನು ದೊರಕಿಸಲು ಪ್ರಯತ್ನಿಸಿರಿ.

ಜನರು ಜ್ಞಾನ, ನಂಬಿಕೆ, ಬೋಧನೆಗಳು, ಪರಿಸ್ಥಿತಿಗಳು ಇವೆಲ್ಲವುಗಳ ಸಾಪೇಕ್ಷತೆ ಯನ್ನು . . . , ಒಂದು ವಿಷಯ ಎಷ್ಟರಮಟ್ಟಿಗೆ ಸಾಪೇಕ್ಷವಾಗಿ ಮಹತ್ವದ್ದಾಗಿದೆ

* "ಸನಾತನ ಸತ್ಯವನ್ನು ಯೋಚನೆಯಾಗಲಿ, ಶಬ್ದವಾಗಲಿ ಹಿಡಿದಿಡಲಾರದು"

**– ಶ್ರೀ ಅರವಿಂದರು.**

ಎಂಬುದನ್ನು ತಿಳಿದುಕೊಂಡರೆ ಜಗತ್ತಿನಲ್ಲಿರುವ ಅನೇಕ ದುಸ್ಥಿತಿಗಳು ಹಾಗೂ ದುರದೃಷ್ಟಕರ ವಿಷಯಗಳು ಮಾಯವಾಗುವವು. ಸದ್ಯದ ಕ್ಷಣದಲ್ಲಿ ಆ ಯೋಚನೆ ಬಹಳ ಮಹತ್ವದ್ದಾಗಿರಬಹುದು, ಅದು ನಿಮ್ಮನ್ನು ಜೀವನದತ್ತ, ಇಲ್ಲವೆ ಮೃತ್ಯುವಿನತ್ತ ಕರೆದೊಯ್ಯಬಹುದು–ಭೌತಿಕ ಜೀವನ ಮತ್ತು ಮೃತ್ಯು ಕುರಿತು ನಾನು ಹೇಳುತ್ತಿಲ್ಲ, ಆತ್ಮದ ಜೀವನ ಹಾಗೂ ಮೃತ್ಯು ಕುರಿತು ಹೇಳುತ್ತಿದ್ದೇನೆ–ಆದರೆ ಅದು ಸದ್ಯದ ಕ್ಷಣಕ್ಕೆ ಸಂಬಂಧಿಸಿದ್ದು, ಮತ್ತು ನೀವು ಸ್ವಲ್ಪ ಮಟ್ಟಿಗಿನ ಪ್ರಗತಿಯನ್ನು ಸಾಧಿಸಿದಾಗ, ಆಧ್ಯಾತ್ಮಿಕ ದೃಷ್ಟಿಕೋನದಿಂದ ಹಲವಾರು ವರ್ಷಗಳ ಕಾಲದ ವಯಸ್ಸನ್ನು ದಾಟಿದಾಗ, ಮತ್ತು ಆ ವಿಷಯವನ್ನು ಕುರಿತು ಹಿಂತಿರುಗಿ ನೋಡಿದಾಗ, ಬಹುಶಃ ನಿಮ್ಮ ಜೀವನವನ್ನು ನಿರ್ಧರಿಸಿದ ಈ ಪರಿಸ್ಥಿತಿ ಇಲ್ಲವೆ ವಿಚಾರ ನಿಮಗೆ ಎಷ್ಟೊಂದು ಸಾಪೇಕ್ಷವಾದದ್ದು, ಮುಖ್ಯವಲ್ಲದ್ದು ಎಂದು ತೋರಿ–ಬರುತ್ತದೆ ಎಂದರೆ, ಮತ್ತು ಹೊಸ ಪ್ರಗತಿಗಾಗಿ ನಿಮಗೆ ಇನ್ನೂ ಉಚ್ಚತರವಾದ ಏನೋ ಒಂದರ ಆವಶ್ಯಕತೆ ಉಂಟಾಗುತ್ತದೆ.

ಇದನ್ನು ನೆನಪಿನಲ್ಲಿಟ್ಟುಕೊಳ್ಳಲು ಮನುಷ್ಯನಿಗೆ, ಯಾವಾಗಲೂ, ಸಾಧ್ಯವಾದರೆ, ಸರಿ ಬಹಳಷ್ಟಿರುವ ಪಂಥೀಯ ಮನೋಧರ್ಮವನ್ನು, ಅತಿ ಅಸಹಿಷ್ಣುತೆಯನ್ನು ತಪ್ಪಿಸಬಹುದು ಮತ್ತು ಎಲ್ಲ ಜಗಳಗಳನ್ನು ಕೂಡಲೆ ನಿರ್ಮೂಲ ಮಾಡಬಹುದು, ಏಕೆಂದರೆ ಜಗಳದ ಅರ್ಥ ಇದೇ ಆಗಿರುತ್ತದೆ. ಒಬ್ಬ ಒಂದು ರೀತಿಯಲ್ಲಿ ಯೋಚಿಸುತ್ತಾನೆ, ಇನ್ನೊಬ್ಬ ಇನ್ನೊಂದು ರೀತಿಯಲ್ಲಿ ಯೋಚಿಸುತ್ತಾನೆ, ಒಬ್ಬನ ಧೋರಣೆ ಒಂದು ರೀತಿಯದಾಗಿರುತ್ತದೆ, ಇನ್ನೊಬ್ಬನದು ಇನ್ನೊಂದು ರೀತಿಯ–ದಾಗಿರುತ್ತದೆ. ಅವುಗಳನ್ನು ಒಟ್ಟಿಗೆ ತಂದು, ಅವುಗಳಲ್ಲಿ ಸಾಮರಸ್ಯ ಮೂಡಿಸು–ವುದರ ಬದಲಾಗಿ ಒಂದರ ವಿರುದ್ಧ ಇನ್ನೊಂದನ್ನು ಇರಿಸಲಾಗುತ್ತದೆ, ಅದು ಮನುಷ್ಯರು ಮುಷ್ಠಿ ಕಾಳಗದಲ್ಲಿ ತೊಡಗಿಕೊಂಡ ಹಾಗಿರುತ್ತದೆ, ಬೇರೇನೂ ಅಲ್ಲ.

ಆದರೆ ನಿಮ್ಮ ದೃಷ್ಟಿಕೋನದ ಸಂಪೂರ್ಣ ಸಾಪೇಕ್ಷತೆ, ನಿಮ್ಮ ಯೋಚನೆ, ಯಾವುದು ಒಳ್ಳೆಯದು ಎಂಬುದರ ಬಗ್ಗೆ ನಿಮ್ಮ ಮನವರಿಕೆ, ವಿಶ್ವದ ನಡೆಯಲ್ಲಿ ಎಷ್ಟರ ಮಟ್ಟಿಗೆ ಇದೆಲ್ಲ ಸಾಪೇಕ್ಷವಾಗಿದೆ ಇವೆಲ್ಲವುಗಳ ಬಗ್ಗೆ ಅರಿವುಳ್ಳವರಾದರೆ, ನಿಮ್ಮ ಪ್ರತಿಕ್ರಿಯೆಗಳಲ್ಲಿ ಕಡಿಮೆ ಹಿಂಸಾತ್ಮಕ ಮತ್ತು ಹೆಚ್ಚು ಸಹನಶೀಲತೆಯುಳ್ಳವರು ಆಗುತ್ತೀರಿ. ಇದನ್ನು ತಿಳಿದುಕೊಳ್ಳಬೇಕು.

**(6/358–59)** **– ಶ್ರೀಮಾತೆ**

*



# ಇತರರನ್ನು ಅರ್ಥಮಾಡಿಕೊಳ್ಳುವುದು: ಆಧ್ಯಾತ್ಮಿಕ ರಹಸ್ಯ ಜ್ಞಾನವಿರುವ ಪ್ರಜ್ಞೆ

**ಪ್ರಶ್ನೆ :** *ಮನುಷ್ಯ ಇತರರ ಹತ್ತಿರ ಮಾತನಾಡಿದಾಗ, ಅವನಲ್ಲಿ ಒಪ್ಪಂದ ಮಾಡಿಕೊಳ್ಳುವ ಮನೋಭಾವವಿರುವುದು ಅಪರೂಪಕ್ಕೆ ಕಂಡುಬರುತ್ತದೆ, ಜನರು ವಿಷಯಗಳನ್ನು ಒಂದೇ ರೀತಿಯಲ್ಲಿ ನೋಡುವುದಿಲ್ಲ. ಇತರರ ದೃಷ್ಟಿಕೋನ ಏನು ಎಂಬುದು ನನಗೆ ತಿಳಿದಾಗಲೂ ಕೂಡ ನಾನು ಅದನ್ನು ಒಪ್ಪಿಕೊಳ್ಳುವುದಿಲ್ಲ.*

**ಶ್ರೀಮಾತೆ :** ನೀನು ನಮ್ಯ(ಮೆದು)ವಾಗಿಲ್ಲ ಎಂದು ಅದರರ್ಥವಾಗುತ್ತದೆ. ಮನುಷ್ಯನೊಬ್ಬ ನಿನಗೆ ಬೇಸರ ತರಿಸುತ್ತಾನೆ ಎಂಬುದನ್ನು ನೀನು ಕಂಡುಕೊಂಡಾಗ, ಅವನೂ ಕೂಡ ತನಗೆ ನೀನು ಬೇಸರವನ್ನುಂಟು ಮಾಡುತ್ತಿರುವಿ ಎಂಬುದನ್ನು ಕಂಡುಕೊಳ್ಳುತ್ತಾನೆ. ನಿನ್ನನ್ನು ಇನ್ನೊಬ್ಬನ ಸ್ಥಾನದಲ್ಲಿರಿಸಿ ಅರ್ಥಮಾಡಿಕೊಳ್ಳುವ ಮನೋಧರ್ಮವನ್ನು ಹೊಂದದೆ ಇದ್ದರೆ ನೀನು ಎಂದಿಗೂ ಸ್ಪಷ್ಟತೆಯತ್ತ ತಲುಪುವುದಿಲ್ಲ, ಆ ಮನೋಧರ್ಮ ಅತ್ಯಗತ್ಯವಾದದ್ದು. ಯಾರೋ ಒಬ್ಬರು ನಿನಗೆ ಏನನ್ನೋ ಹೇಳಿದಾಗ, ಅದು ಅರ್ಥವಾಗದಿದ್ದರೆ "ಅವನಿಗೇನೂ ತಿಳಿಯದು" ಎಂದು ಹೇಳಕೂಡದು, ಆದರೆ ಅದನ್ನು ಅರ್ಥ–ಮಾಡಿಕೊಳ್ಳಲು ಪ್ರಯತ್ನಿಸಬೇಕು. ನೀನು ಬಹಳ ನಿಷ್ಕಪಟನಾಗಲು ಬಯಸಿದರೆ ಮಗುವೊಂದು ನಿನ್ನ ಬಳಿ ಬಂದು ನಿನಗೆ ಏನನ್ನೋ ಹೇಳಿದಾಗ ನಿನಗೆ ಅದರ ಅರ್ಥವಾಗುವುದಿಲ್ಲ, "ಈ ಮಗು ಮೂರ್ಖ" ಎಂದು ಹೇಳಕೂಡದು, ಆದರೆ "ನಾನೇ ಮೂರ್ಖ, ಏಕೆಂದರೆ ನನಗೆ ಅರ್ಥ ಮಾಡಿಕೊಳ್ಳಲು ಆಗುತ್ತಿಲ್ಲ" ಎಂದು ನಿನಗೆ ಹೇಳಿಕೊಳ್ಳಬೇಕು.

ಒಂದು ಸಮಸ್ಯೆಯತ್ತ ಗಮನ ಹರಿಸುವ ನೂರಾರು ರೀತಿಗಳಿರುತ್ತವೆ. ನೀವು ಅದಕ್ಕೆ ಪರಿಹಾರ ಕಂಡುಕೊಳ್ಳಬೇಕಾಗಿದ್ದರೆ, ಆ ಸಮಸ್ಯೆಯ ಎಲ್ಲ ಅಂಶಗಳನ್ನು ಒಂದರ ನಂತರ ಒಂದರಂತೆ ಕೈಗೆತ್ತಿಕೊಳ್ಳಬೇಕು, ಅವುಗಳ ಮೇಲ್ಗಡೆ ಸಾಗಬೇಕು ಮತ್ತು ಅವು ಸಾಮರಸ್ಯ ಹೇಗೆ ಕಂಡುಕೊಳ್ಳುತ್ತವೆ ಎಂಬುದನ್ನು ನೋಡಬೇಕು.

ಪ್ರಜ್ಞೆಯ ಒಂದು ಸ್ಥಿತಿ ಇದೆ. ಅದನ್ನು ನಾವು ಆಧ್ಯಾತ್ಮಿಕ ರಹಸ್ಯ ಜ್ಞಾನದ್ದೆಂದು ಹೇಳಬಹುದು. ಆ ಪ್ರಜ್ಞೆಯಲ್ಲಿ ನೀವು ಏಕಕಾಲಕ್ಕೆ ಎಲ್ಲ ಸಿದ್ಧಾಂತಗಳನ್ನು, ನಂಬಿಕೆ–ಗಳನ್ನು, ಮನುಷ್ಯರು ತಮ್ಮ ಅತ್ಯುಚ್ಚ ಪ್ರಜ್ಞೆಯಲ್ಲಿ ಅಭಿವ್ಯಕ್ತಪಡಿಸಿದ ವಿಚಾರಗಳನ್ನು ನೋಡಬಲ್ಲಿರಿ–ಬುದ್ಧ ಧರ್ಮದವರ, ವೈದಿಕ, ಕ್ರಿಶ್ಚಿಯನ್‌ರ ಸಿದ್ಧಾಂತಗಳಲ್ಲಿರುವ

ಅಸಾಧಾರಣ ವಿಚಾರಗಳನ್ನು, ದೈವೀ ಸತ್ಯದ ತುದಿಯೊಂದನ್ನು ಹಿಡಿದುಕೊಳ್ಳಲು ಶಕ್ತವಾದ ಮಾನವ ಮನಸ್ಸಿನ ಅನುಭವಗಳನ್ನು ಅರ್ಥಮಾಡಿಕೊಳ್ಳಬಲ್ಲಿರಿ, ಯಾವುದೇ ವಿಷಯ ಕುರಿತು ಏನನ್ನಾದರೂ ತಿಳಿದುಕೊಳ್ಳಲು ನೀವು ಬಯಸಿದರೆ ಪ್ರತಿಯೊಂದೂ ನಿಮಗೆ ಅದ್ಭುತವಾಗಿ ಸತ್ಯವಾಗಿರುವಂತೆ, ಅತ್ಯಗತ್ಯದ್ದಾಗಿರುವಂತೆ ತೋರಿಬರುವುದು. ಪ್ರಜ್ಞೆಯ ಒಂದು ಸ್ಥಿತಿಯಿದೆ. ಓಹ್, ನೀವಿನ್ನೂ ಅರ್ಥ ಮಾಡಿ ಕೊಳ್ಳಲಾಗದ ವಿಷಯಗಳನ್ನು ಕುರಿತು ಹೇಳುವವಳಿದ್ದೆ. ನಾನು ನಿಮಗೊಂದು ಅತಿ ಸರಳ ಉದಾಹರಣೆ ಕೊಡುತ್ತೇನೆ: ಅನಾತೊಲೆ ಫ್ರಾನ್ಸ್ (Anatole France) ಬರೆದ ತನ್ನ ಒಂದು ಪುಸ್ತಕದಲ್ಲಿ ಹೇಳಿದ್ದು ಹೀಗಿದೆ: "ಜಗತ್ತು ಪ್ರಗತಿ ಹೊಂದಲೆಂದು ಜನರು ಏನನ್ನೂ ಮಾಡದೆ ಇರುವವರೆಗೆ ಎಲ್ಲವೂ ಸರಿ–ಯಾಗಿಯೇ ನಡೆಯಿತು ಮತ್ತು ಪ್ರತಿಯೊಬ್ಬನೂ ತೃಪ್ತಿಯಿಂದಿದ್ದನು.–ತನ್ನನ್ನು ಇಲ್ಲವೆ ಜಗತ್ತನ್ನು ಪರಿಪೂರ್ಣಗೊಳಿಸುವುದಕ್ಕಾಗಿ ಯಾವ ಚಿಂತೆಯೂ ಇರಲಿಲ್ಲ, ಪರಿಣಾಮವಾಗಿ ಎಲ್ಲವೂ ಸರಿಯಾಗಿಯೇ ನಡೆಯಿತು. ಆದ್ದರಿಂದ ಅತ್ಯಂತ ಕೆಟ್ಟ ಸಂಗತಿ ಎಂದರೆ ಇತರರು ಪ್ರಗತಿ ಹೊಂದಲಿ ಎಂದು ಬಯಸುವುದಾಗಿದೆ, ತಮಗೆ ಬೇಕಾದುದನ್ನು ಮಾಡಲು ಅವರನ್ನು ಬಿಟ್ಟುಕೊಡಿರಿ, ಯಾವುದರ ಬಗೆಗೂ ತಲೆಕೆಡಿಸಿಕೊಳ್ಳಲು ಹೋಗಬೇಡಿರಿ, ಅದು ಹೆಚ್ಚು ಜಾಣತನದ ವಿಷಯ–ವಾಗುವುದು." ತದ್ವಿರುದ್ಧವಾಗಿ ಇನ್ನಿತರರು ನಿಮಗೆ ಹೇಳುತ್ತಾರೆ. "ದೈವೀ ಸತ್ಯವೊಂದನ್ನು ಸಿದ್ಧಿಸಿಕೊಳ್ಳುವುದಿದೆ, ಜಗತ್ತು ಅಜ್ಞಾನದ ಸ್ಥಿತಿಯಲ್ಲಿದೆ, ಮತ್ತು ಮನುಷ್ಯ ಎಷ್ಟೇ ಬೆಲೆ ತೆತ್ತಾದರೂ, ಮಾರ್ಗದಲ್ಲಿ ಬರುವ ಎಲ್ಲ ತೊಂದರೆಗಳನ್ನು ಎದುರಿಸಿ ತನ್ನ ಪ್ರಜ್ಞೆಗೆ ಜ್ಞಾನೋದಯವನ್ನುಂಟು ಮಾಡಿಕೊಳ್ಳಬೇಕು, ಅಜ್ಞಾನ–ದಿಂದ ತನ್ನನ್ನು ಹೊರಗೆಳೆದುಕೊಳ್ಳುವುದಕ್ಕೆ ಪ್ರಯತ್ನಿಸಬೇಕು." ಆದರೆ ಒಂದು ಬಗೆಯ ಪ್ರಜ್ಞೆಯಿದೆ, ಅದರಲ್ಲಿ ನೋಡಿದರೆ ಈ ಎರಡೂ ರೀತಿಗಳು ಪರಿಪೂರ್ಣವಾಗಿ, ಸಮನಾಗಿ ಸತ್ಯವಾದವುಗಳಾಗಿವೆ ಎಂದು ನಾನು ನಿಮಗೆ ಹೇಳುತ್ತೇನೆ. ಸ್ವಾಭಾವಿಕವಾಗಿ ನೀವು ಎರಡೇ ಮುಖಗಳತ್ತ ಲಕ್ಷ್ಯಗೊಟ್ಟು ನೋಡಿದಾಗ, ಸ್ಪಷ್ಟವಾಗಿ ನೋಡುವುದು ಕಠಿಣವಾಗುತ್ತದೆ, ಮಾನವ ಬುದ್ಧಿ–ಮತ್ತೆಯ ಇಣುಕು ನೋಟಕ್ಕೆ ಸಿಗುವ ಎಲ್ಲ ಮುಖಗಳನ್ನು ಮತ್ತು ಇನ್ನೂ ಹೆಚ್ಚಿನದನ್ನು ನೋಡಲು ಮನುಷ್ಯ ಶಕ್ತನಾಗಬೇಕು. ಮತ್ತು ಆಗ ಆ ಸ್ಥಿತಿಯಲ್ಲಿ ಯಾವುದೂ ಪರಿಪೂರ್ಣವಾಗಿ ಮಿಥ್ಯೆಯಾಗಿರುವುದಿಲ್ಲ, ಕೆಟ್ಟದಾಗಿರುವುದಿಲ್ಲ. ಆ ಸ್ಥಿತಿಯಲ್ಲಿ ಮನುಷ್ಯ ಎಲ್ಲ ಸಮಸ್ಯೆಗಳಿಂದ, ಎಲ್ಲ ತೊಂದರೆಗಳಿಂದ, ಎಲ್ಲ



ಸಮರಗಳಿಂದ ಮುಕ್ತನಾಗಿರುತ್ತಾನೆ ಮತ್ತು ಪ್ರತಿಯೊಂದೂ ಅದ್ಭುತವಾಗಿ ಸಾಮರಸ್ಯದಲ್ಲಿರುವಂತೆ ತೋರಿಬರುತ್ತದೆ.

ಆದರೆ ನೀವು ಈ ಸ್ಥಿತಿಯನ್ನು ಮಾನಸಿಕವಾಗಿ ಅನುಕರಣ ಮಾಡಲು ಪ್ರಯತ್ನಿಸಿದರೆ,–ಇದರರ್ಥ ನಿಮಗಾಗುತ್ತದೆಯೆ? ಮಾನಸಿಕ ಅನುಕರಣ ಮಾಡುವುದೆಂದರೆ ನೀವು ಮೂರ್ಖತನದ ಕಾರ್ಯಗಳನ್ನು ಮಾಡುತ್ತಿರುವುದು ನಿಶ್ಚಿತ. ತಲೆಯಲ್ಲಿ ಅಸ್ತವ್ಯಸ್ತತೆ ತುಂಬಿಕೊಂಡ ಜನರಲ್ಲಿ ನೀವೊಬ್ಬರಾಗುತ್ತೀರಿ. ನೀವು ಏನನ್ನು ಕೈಕೊಳ್ಳುತ್ತಿರುವಿರಿ ಎಂಬುದರ ಅರಿವಿಲ್ಲದೆ ಒಂದಕ್ಕೊಂದು ಅತ್ಯಂತ ವಿರೋಧವಾಗಿರುವ ಸಂಗತಿಗಳನ್ನು ಹೇಳಬಲ್ಲವರಾಗುವಿರಿ.

ಆ ವಿಶೇಷ ಪ್ರಜ್ಞೆಯ ಸ್ಥಿತಿಯಲ್ಲಿ ವೈರುದ್ಧ್ಯವಿರುವುದಿಲ್ಲ. ಅದು ಒಂದು ಒಟ್ಟುಗೂಡಿರುವಿಕೆ, ಆ ಒಂದುಗೂಡಿರುವಿಕೆಯಲ್ಲಿ ಮನುಷ್ಯನಿಗೆ ಅಭಿವ್ಯಕ್ತ–ಪಡಿಸಲಾದ ಎಲ್ಲ ಸತ್ಯಗಳ (ಈ ಸತ್ಯಗಳು ಇಡೀ ದೈವೀಸತ್ಯವನ್ನು ಅಭಿವ್ಯಕ್ತ–ಪಡಿಸಲು ಸಾಕಾಗುವುದಿಲ್ಲ) ಪೂರ್ಣ ಜ್ಞಾನವಿರುತ್ತದೆ, ಆ ಸತ್ಯಗಳಲ್ಲಿ ಮನುಷ್ಯ ಎಲ್ಲ ವಸ್ತು–ವಿಷಯಗಳಿಗೆ ಅನುಗುಣವಾಗಿ ಸ್ಥಾನಗಳನ್ನು ಮತ್ತು ವಿಶ್ವ ಹೇಗೆ ಮತ್ತು ಏಕೆ ರೂಪುಗೊಂಡಿದೆ ಎಂಬುದನ್ನು ತಿಳಿದುಕೊಳ್ಳುತ್ತಾನೆ. ನಾನು ಕೂಡಲೆ ಹೇಳ–ಬೇಕಾದದ್ದು ಇದು: ಆ ಸ್ಥಿತಿಯನ್ನು ಕೇವಲ ವೈಯುಕ್ತಿಕ ಪ್ರಯತ್ನದಿಂದ ಮನುಷ್ಯ ತಲುಪುವುದು ಸಾಧ್ಯವಿಲ್ಲ. ಅದನ್ನು ಮನುಷ್ಯ ದೊರಕಿಸಲು ಪ್ರಯತ್ನಿಸುತ್ತಿದ್ದಾನೆಂಬ ಕಾರಣದಿಂದಾಗಿ ಅದನ್ನು ದೊರಕಿಸುವುದಿಲ್ಲ. ನೀವು ಸಹಜವಾಗಿ ಅದೇ ಆಗಿಬಿಡುತ್ತೀರಿ. ನಿಮ್ಮಲ್ಲಿ ಇನ್ನು ಮುಂದೆ, ಯಾವುದೇ ಪಕ್ಷಪಾತ, ಆದ್ಯತೆ, ವಿಚಾರ–ವೊಂದಕ್ಕೆ ಅಂಟಿಕೊಂಡಿರುವಿಕೆ ಇಲ್ಲದೆ ಇದ್ದಾಗ ನೀವು ಆ ಸತ್ಯ ಏನೆಂಬುದನ್ನು ತಿಳಿದುಕೊಳ್ಳಲು ಪ್ರಯತ್ನವನ್ನು ಕೂಡ ಮಾಡದೇ ಇದ್ದಾಗ ಅದು ಪರಿಪೂರ್ಣ ಮಾನಸಿಕ ನಿಷ್ಪಾಪಟ್ಯಕ್ಕೆ ಕಿರೀಟಪ್ರಾಯವಾದ ಸ್ಥಿತಿಯಾಗಿರುತ್ತದೆ.

ನೀವು ಆ ದೈವೀ ಪ್ರಕಾಶದಲ್ಲಿ ಸರಳ ರೀತಿಯಲ್ಲಿ ನಿಮ್ಮನ್ನು ತೆರೆದುಕೊಂಡಿ–ರುತ್ತೀರಿ, ಅಷ್ಟೇ.

*

**ನೈತಿಕತೆ ಹಾಗೂ ದೈವೀಸತ್ಯ :**

ಕೆಲವೊಮ್ಮೆ ನೈತಿಕ ವಿಚಾರಗಳು ಮಧ್ಯೆ ಸೇರಿಕೊಂಡು ತೀರ್ಮಾನವನ್ನು ಮಿಥ್ಯೆಯಾಗಿಸುತ್ತವೆ, ಆದರೆ ನಾವು ನಮ್ಮಿಂದ ಎಲ್ಲ ನೈತಿಕ ವಿಚಾರಗಳನ್ನು ದೂರ

ಚೆಲ್ಲಿ ಕೊಡಬೇಕು, ಏಕೆಂದರೆ ನೈತಿಕತೆ ಹಾಗೂ ದೈವೀಸತ್ಯ ಇವು ಪರಸ್ಪರರಿಂದ ಬಹಳ ದೂರದಲ್ಲಿರುತ್ತವೆ. (ಹೀಗೆ ಹೇಳುವುದರಿಂದ ನಾನು ಯಾರಿಗಾದರೂ ಆಘಾತವನ್ನುಂಟು ಮಾಡುತ್ತಿದ್ದರೆ ನನಗೆ ವಿಷಾದವಾಗುತ್ತದೆ, ಆದರೆ ಅದಿರುವುದು ಹಾಗೆ). ಎಲ್ಲ ಆಕರ್ಷಣೆಗಳು ಹಾಗೂ ವಿಕರ್ಷಣೆಗಳ ಮೇಲೆ ಜಯ ಸಾಧಿಸಿದ ನಂತರವಷ್ಟೆ ನೀವು ಸರಿಯಾದ ತೀರ್ಮಾನವನ್ನು ತೆಗೆದುಕೊಳ್ಳಬಲ್ಲಿರಿ. ನಿಮ್ಮನ್ನು ಆಕರ್ಷಿಸುವ ಹಾಗೂ ನಿಮಗೆ ತಿರಸ್ಕರಣೀಯವಾದ ಸಂಗತಿಗಳು ಇರುವವರೆಗೆ ಇಂದ್ರಿಯಗಳು ಸಂಪೂರ್ಣ ನಿಶ್ಚಿತ ರೀತಿಯಲ್ಲಿ ಕಾರ್ಯಕೈಕೊಳ್ಳುವಂತೆ ಮಾಡು–ವುದು ನಿಮಗೆ ಸಾಧ್ಯವಾಗುವುದಿಲ್ಲ.

**(4/157–58, 4/11)** **– ಶ್ರೀಮಾತೆ.**

*

## ಮನಸ್ಸು ಮತ್ತು ದೈವೀಸತ್ಯದ ದರ್ಶನ

ಮನುಷ್ಯನಲ್ಲಿ ಒಟ್ಟಿಗಿರುವ ಎರಡು ಸಾಮರ್ಥ್ಯಗಳಿವೆ: ಜ್ಞಾನ ಹಾಗೂ ವಿವೇಕ: ಜ್ಞಾನ ಸತ್ಯವನ್ನು ಕುರಿತು ವಿಕೃತ ಮಾಧ್ಯಮದಲ್ಲಿ ಕಂಡುಕೊಂಡಷ್ಟರ ಮಟ್ಟಿನದು, ಏಕೆಂದರೆ ಮನಸ್ಸು ತಡಕಾಡುತ್ತ ಸತ್ಯದತ್ತ ತಲುಪುತ್ತದೆ, ದೈವೀ ದರ್ಶನದ ಕಣ್ಣು ಆತ್ಮದಲ್ಲಿ ಕಂಡುಕೊಂಡದ್ದು ವಿವೇಕ.

– ಶ್ರೀ ಅರವಿಂದರು : (ಯೋಚನೆಗಳು ಹಾಗೂ ಸೂಕ್ತಿಗಳು)

ಇವೆರಡರಲ್ಲಿ ಒಂದು ಸಾಮರ್ಥ್ಯ ಮನಸ್ಸಿಗೆ ಸೇರಿದ್ದು, ಇನ್ನೊಂದು ಆತ್ಮಕ್ಕೆ ಸೇರಿದ್ದು ಎಂದು, ತಿಳಿದುಕೊಳ್ಳಬಲ್ಲವರಿಗೆ, ಶ್ರೀ ಅರವಿಂದರು ಸಾಕಷ್ಟು ಸ್ಪಷ್ಟವಾಗಿ ಹೇಳಿದ್ದಾರೆ. ಅದು ನಿಖರವಾಗಿ ಗಾಢ ಸತ್ಯವಾಗಿದ್ದು ಅದನ್ನು ಶ್ರೀ ಅರವಿಂದರು ಸೂಕ್ತಿಯಲ್ಲಿ ತೆರೆದು ತೋರಿಸಲು ಬಯಸಿದ್ದಾರೆ. ಮನಸ್ಸು ಎರಡನೆಯ ಸಾಮರ್ಥ್ಯವನ್ನು ದೊರಕಿಸಲು ಸಾಧ್ಯವಾಗುವುದಿಲ್ಲ, ಏಕೆಂದರೆ ಆ ಸಾಮರ್ಥ್ಯ ಆತ್ಮಕ್ಕೆ ಸೇರಿದ ವಿಷಯ ಮತ್ತು ಅದು ಮಾನವ ಸತ್ತೆಯಲ್ಲಿ ಆಧ್ಯಾತ್ಮಿಕ ಪ್ರಜ್ಞೆ–ಯೊಂದಿಗೆ ಮೇಲಕ್ಕೆದ್ದು ಬರುತ್ತದೆ. ಜ್ಞಾನವನ್ನು ಮನಸ್ಸಿನ ಪ್ರಯತ್ನದಿಂದ ಪಡೆಯಬಹುದು, ಆದಾಗ್ಯೂ ಅದು ನಿಜವಾದ ಜ್ಞಾನವಾಗಿರುವುದಿಲ್ಲ, ಆದರೆ ಮನಸ್ಸಿನಿಂದ ದೊರಕಿಸುವ ಜ್ಞಾನದ ಮುಖವಾಗಿರುತ್ತದೆ. ಇದು ಹಾಗಿರುವಾಗ ವಿವೇಕ ಮನಸ್ಸಿಗೆ ಸೇರಿದ ವಿಷಯವೇ ಅಲ್ಲ, ಮನಸ್ಸಿಗೆ ವಿವೇಕವನ್ನು ದೊರಕಿಸುವ ಕ್ಷಮತೆ ಇಲ್ಲ, ಏಕೆಂದರೆ ವಾಸ್ತವದಲ್ಲಿ ಮನಸ್ಸಿಗೆ ವಿವೇಕ ಎಂದರೇನು ಎಂಬುದು ತಿಳಿದಿರುವುದಿಲ್ಲ. ವಿವೇಕ ಆತ್ಮದ ಒಂದು ಸಾಮರ್ಥ್ಯ ಮತ್ತು ಆಧ್ಯಾತ್ಮಿಕ ಪ್ರಜ್ಞೆಯಿಂದ ಮೇಲಕ್ಕೇರಿ ಬರುತ್ತದೆ ಎಂದು ಮತ್ತೆ ನಾನು ಹೇಳುತ್ತೇನೆ.



ಈ ವಿಕೃತಗೊಂಡ ಮಾಧ್ಯಮ ಎಂದರೇನು, ಮತ್ತು ಸತ್ಯಕ್ಕೆ ಈ ವಿಕೃತಗೊಂಡ ಮಾಧ್ಯಮದಲ್ಲಿ ಏನಾಗುತ್ತದೆ ಎಂಬುದನ್ನು ಮೊದಲಿಗೆ ತಿಳಿದುಕೊಳ್ಳೋಣ

ಯಾವಾಗಲೂ ಕಂಡು ಬರುವ ಹಾಗೆ ಶ್ರೀ ಅರವಿಂದರು ಹೇಳಿದುದಕ್ಕೆ ಹಲವಾರು ಅರ್ಥಗಳ ಹಂತಗಳಿರುತ್ತವೆ.–ಒಂದು ಹೆಚ್ಚು ವಿಶಿಷ್ಟವಾದದ್ದು, ಇನ್ನುಳಿದವುಗಳು ಸರ್ವಸಾಧಾರಣ ರೀತಿಯವಾಗಿರುತ್ತವೆ. ಬಹಳ ವಿಶಿಷ್ಟವಾದ ಅರ್ಥದಲ್ಲಿ ವಿಕೃತಗೊಂಡ ಮಾಧ್ಯಮ ಮಾನಸಿಕ ಮಾಧ್ಯಮವಾಗಿರುತ್ತವೆ, ಅದು ಅಜ್ಞಾನದಲ್ಲಿ ಕಾರ್ಯ ಮಾಡುತ್ತದೆ ಮತ್ತು ಆ ಕಾರಣದಿಂದಾಗಿ ಸತ್ಯವನ್ನು ಅದರ ಪರಿಶುದ್ಧತೆಯಲ್ಲಿ ಅಭಿವ್ಯಕ್ತಪಡಿಸಲು ಅಸಮರ್ಥವಾಗಿರುತ್ತದೆ. ಆದರೆ ಇಡೀ ಜೀವನವನ್ನೇ ಅಜ್ಞಾನದಲ್ಲಿ ಜೀವಿಸುವುದಾಗಿರುತ್ತದೆ, ವಿಕೃತಗೊಂಡ ಮಾಧ್ಯಮ ಪೃಥ್ವಿಯ ವಾತಾವರಣ ಕೂಡ ಆಗಿರುತ್ತದೆ, ಅದರ ಒಟ್ಟುಗೂಡುವಿಕೆಯಲ್ಲಿ ತನ್ನನ್ನು ಅದರ ಮೂಲಕ ಅಭಿವ್ಯಕ್ತಗೊಳಿಸಲು ಅರಸುತ್ತಿರುವ ಸತ್ಯವನ್ನು ವಿಕೃತ–ಗೊಳಿಸುತ್ತದೆ.

ಇಲ್ಲಿಯೇ ಸೂಕ್ತಿಯ ಅತ್ಯಂತ ಸೂಕ್ಷ್ಮ ವಿಚಾರ ಇದೆ. ಮನಸ್ಸು ತಡಕಾಡುತ್ತ ಏನನ್ನು ತಲುಪುತ್ತದೆ? ಅದು ಯಾವಾಗಲೂ ತಡಕಾಡುತ್ತಿರುತ್ತದೆ ಎಂಬುದು ನಮಗೆ ತಿಳಿದಿದೆ; ತಿಳಿದುಕೊಳ್ಳುವುದಕ್ಕಾಗಿ ಅದು ತಪ್ಪು ಮಾಡುತ್ತದೆ, ತನ್ನ ಮೊದಲಿನ ಪ್ರಯತ್ನಗಳತ್ತ ಮರಳಿ ಹೋಗುತ್ತದೆ, ಮತ್ತೆ ಪ್ರಯತ್ನ ಮಾಡುತ್ತದೆ. ಅದರ ಪ್ರಗತಿ ತಡೆದು ಸಾಗುವಂತಹದು. ಆದರೆ ಸತ್ಯದ ಬಗ್ಗೆ ಅದು ಏನನ್ನು ಗ್ರಹಿಸಬಹುದು? ಅದು ಇನ್ನೂ ಸತ್ಯವಾಗಿರುವುದರ ಒಂದು ಚೂರು, ಒಂದು ತುಂಡು ಆಗಿರಬಹುದೆ? ಆದರೆ ಅದು ಭಾಗಶಃ ಅಪರಿಪೂರ್ಣವಾಗಿ ಹಾಗಿರು–ತ್ತದೆಯೆ, ಇಲ್ಲವೆ ಅದು ಇನ್ನು ಮುಂದೆ ಸತ್ಯವಾಗಿ ಉಳಿದಿರುತ್ತದೆಯೆ? ಅದು ಸ್ವಾರಸ್ಯಕರ ವಿಷಯ.

ನಮಗೆ ಹೇಳಲಾಗುವ ರೂಢಿಯಿದೆ–ಬಹುಶಃ ನಾವೂ ಕೂಡ ಹಲವಾರು ಸಲ ಅದನ್ನು ಪುನರುಚ್ಚರಿಸಿ ಹೇಳಿರಬಹುದು, ಅದೆಂದರೆ "ಮನುಷ್ಯ ಕೇವಲ ಭಾಗಶಃ, ಅಪರಿಪೂರ್ಣ, ತುಂಡು ತುಂಡಾದ ಜ್ಞಾನವನ್ನು ಪಡೆಯಬಲ್ಲ ಮತ್ತು ಆ ಕಾರಣ–ದಿಂದಾಗಿ ಅದು ನಿಜವಾದ ಜ್ಞಾನವಾಗಿರುವುದಿಲ್ಲ." ಈ ದೃಷ್ಟಿಕೋನ ಚರ್ವಿತ ಚರ್ವಣವಾದದ್ದು. ಅದನ್ನು ತಿಳಿದುಕೊಳ್ಳಲು ಜೀವನದಲ್ಲಿ ಸ್ವಲ್ಪ ವಿದ್ಯಾಭ್ಯಾಸ ಮಾಡಿರಬೇಕು. ಹಾಗಿದ್ದರೂ "ವಿಕೃತಗೊಂಡ ಮಾಧ್ಯಮದಲ್ಲಿ ನೋಡಿದ ಸತ್ಯ"

ಎಂದು ಶ್ರೀ ಅರವಿಂದರು ಹೇಳಿದ್ದು ಅದಕ್ಕಿಂತ ಹೆಚ್ಚು ಸ್ವಾರಸ್ಯಕರವಾಗಿದೆ.

ಸತ್ಯವೇ ಇನ್ನೊಂದು ಮುಖವನ್ನು ಧರಿಸಿರುತ್ತದೆ, ಮಾಧ್ಯಮದಲ್ಲಿ ಅದು ಆ ಸತ್ಯವಾಗಿ ಉಳಿದಿರುವುದಿಲ್ಲ, ವಿಕೃತಗೊಳಗಾದದ್ದು ಉಳಿದುಕೊಂಡಿರುತ್ತದೆ, ಪರಿಣಾಮವಾಗಿ ಅದನ್ನು ಕುರಿತು ಹಿಡಿದುಕೊಳ್ಳಬಹುದಾದುದು ಸತ್ಯವಾಗಿರ–ಬಹುದಾದ ಅದರ ಒಂದು ತುಂಡನ್ನಲ್ಲ, ಆದರೆ ಅದರ ಒಂದು ಮುಖವನ್ನು, ಕರಗಿ ಹೋದ ಆ ಸತ್ಯದ ಒಂದು ಮಿಥ್ಯಾರೂಪವನ್ನು ಮಾತ್ರ.

ನಾನು ಹೇಳಿದ್ದು ಅರ್ಥಮಾಡಿಕೊಳ್ಳಲು ಸುಲಭವಾಗಲೆಂದು ನಿಮಗೆ ಒಂದು ಪ್ರತೀಕವನ್ನು ಕೊಡುತ್ತೇನೆ, ಅದು ಪ್ರತೀಕಕ್ಕಿಂತ ಹೆಚ್ಚಿನದೇನಲ್ಲ, ಅದನ್ನು ಅಕ್ಷರಶಃ ತೆಗೆದುಕೊಳ್ಳಬಾರದು.

ಸಾರಭೂತವಾದ ಸತ್ಯವನ್ನು ನಾವು ಪರಿಶುದ್ಧ, ಶ್ವೇತವರ್ಣದ ಕಣ್ಣು ಕುಕ್ಕಿಸುವ ಗೋಲವೊಂದಕ್ಕೆ ಹೋಲಿಸಿದರೆ ಮಾನಸಿಕ ಮಾಧ್ಯಮದಲ್ಲಿ, ಮಾನಸಿಕ ವಾತಾವರಣದಲ್ಲಿ ಈ ಸಮಗ್ರ ಬಿಳಿ ಬೆಳಕು ಸಾವಿರಾರು ಛಾಯೆಗಳಲ್ಲಿ ಪರಿವರ್ತನೆಗೊಳ್ಳುತ್ತದೆ, ಅವುಗಳಲ್ಲಿ ಪ್ರತಿಯೊಂದಕ್ಕೆ ಅದರದೇ ವಿಶಿಷ್ಟ ಬಣ್ಣವಿರುತ್ತದೆ, ಏಕೆಂದರೆ ಅವುಗಳೆಲ್ಲ ಒಂದರಿಂದ ಇನ್ನೊಂದು ಪ್ರತ್ಯೇಕ–ಗೊಂಡಿರುತ್ತವೆ. ಮಾಧ್ಯಮ ಬಿಳಿಯ ಬಣ್ಣವನ್ನು ವಿಕೃತಗೊಳಿಸುತ್ತದೆ ಮತ್ತು ಅದು ಭಿನ್ನ ಬಣ್ಣಗಳಲ್ಲಿ, ಎಂದರೆ ಕೆಂಪು, ಹಳದಿ, ಹಸಿರು, ನೀಲಿ ಇತ್ಯಾದಿ ಬಣ್ಣಗಳಲ್ಲಿ ಕಂಡು ಬರುವಂತೆ ಮಾಡುತ್ತದೆ, ಕೆಲವೊಮ್ಮೆ ಆ ಬಣ್ಣಗಳು ಒಂದಕ್ಕೊಂದು ಹೊಂದಿಕೆಯಾಗದ ರೀತಿಯಲ್ಲಿರುತ್ತವೆ. ಮತ್ತು ಮನಸ್ಸು ಬಿಳಿ ಬಣ್ಣದ ಗೋಲದ ಒಂದು ತುಂಡನ್ನು ಹಿಡಿದುಕೊಳ್ಳುವುದಿಲ್ಲ, ಆದರೆ ವಿಸ್ತಾರದ ಇಲ್ಲವೆ ಚಿಕ್ಕದಾದ ರೀತಿಯಲ್ಲಿ ಭಿನ್ನ ಬಣ್ಣಗಳ ನಾನಾ ಬಗೆಯ ಪ್ರಕಾಶಗಳನ್ನು ಹಿಡಿದುಕೊಳ್ಳುತ್ತದೆ, ಆ ಭಿನ್ನ ಬಣ್ಣಗಳಿಂದ ಅದು ಬಿಳಿ ಬಣ್ಣ ಮತ್ತೆ ರಚನೆಗೊಳ್ಳುವಂತೆ ಮಾಡಲಾರದು. ಹಾಗಾಗಿ ಅದು ಸತ್ಯವನ್ನು ತಲುಪಲಾರದು. ಅದು ವಿಭಜಿತ ಸತ್ಯವನ್ನು ವಶಪಡಿಸಿಕೊಳ್ಳುತ್ತದೆ, ಸತ್ಯದ ತುಂಡುಗಳನ್ನಲ್ಲ. ಅದು ಒಂದು ಬಗೆಯ ವಿಘಟಿತವಾದ ಸ್ಥಿತಿ.

ಸತ್ಯ ಇಡಿಯಾದದ್ದು ಮತ್ತು ಪ್ರತಿಯೊಂದು ಅವಶ್ಯವಾದದ್ದು. ನೀವು ಮಾನಸಿಕ ವಾತಾವರಣದ ಮೂಲಕ ನೋಡುತ್ತೀರಿ, ಅದು ವಿಕೃತಗೊಂಡ ಮಾಧ್ಯಮ ಅದು ಸತ್ಯದ ಪ್ರಕಟಣೆಗೆ, ಅಭಿವ್ಯಕ್ತಿಗೆ, ಅದರ ಎಲ್ಲ ಅಂಗಗಳ ಗ್ರಹಿಕೆಗೂ ಕೂಡ ಯೋಗ್ಯವಾಗಿರುವುದಿಲ್ಲ. ಒಳ್ಳೆಯ ಭಾಗ ಕಳೆದು ಹೋಗಿರುತ್ತದೆಂದು ಕೂಡ ಹೇಳಬಹುದು. ಹಾಗಾಗಿ ಅದನ್ನು ಇನ್ನು ಮುಂದೆ ಸತ್ಯ ಎಂದು ಕರೆಯಲಾಗದು,



ಆದರೆ ಅದಕ್ಕೂ ಹೆಚ್ಚಾಗಿ ಸಾರದಲ್ಲಿ ಸತ್ಯವಾಗಿರುವ ಏನೋ ಒಂದು, ಆದಾಗ್ಯೂ ಇನ್ನು ಮುಂದೆ ಮಾನಸಿಕ ವಾತಾವರಣದಲ್ಲಿ ಹಾಗಿರುವುದು ಸಾಧ್ಯವಿಲ್ಲ. ಅದು ಅಜ್ಞಾನವಾಗಿರುತ್ತದೆ.

ಸಂಗ್ರಹ ರೂಪದಲ್ಲಿ ಹೇಳುವುದಾದರೆ ಮಾನವ ಮನಸ್ಸಿನಿಂದ ಗ್ರಹಿಸ–ಬಹುದಾದ ಜ್ಞಾನ ಅವಶ್ಯವಾಗಿ ಅಜ್ಞಾನದಲ್ಲಿರುವ ಜ್ಞಾನ, ಅದನ್ನು ಬಹುಮಟ್ಟಿಗೆ ಅಜ್ಞಾನೀ ಜ್ಞಾನ (ignorant knowledge) ಎಂದು ಹೇಳಬಹುದು.

ಸತ್ಯವನ್ನು ಅದರ ಸಾರದಲ್ಲಿ ಕಾಣುವ ದರ್ಶನ ಮತ್ತು ಪ್ರಕಟಣೆಯಲ್ಲಿ ಅದನ್ನು ಅನ್ವಯಿಸುವುದು ವಿವೇಕವಾಗಿರುತ್ತದೆ.

*

"ಯೋಚನೆ ಸತ್ಯದತ್ತ ಗುರಿಯಿಟ್ಟು ಎಸೆದ ಬಾಣದ ಹಾಗಿರುತ್ತದೆ. ಅದು ಒಂದು ಬಿಂದುವಿನ ಮೇಲೆ ತಾಗುತ್ತದೆ, ಆದರೆ ಇಡೀ ಗುರಿಯನ್ನು ಆವರಿಸುವುದಿಲ್ಲ. ಆದರೆ ಗುರಿಕಾರ ತನ್ನ ಯಶಸ್ಸಿನಿಂದ ಬಹಳ ಸಂತೃಪ್ತಿಯಿಂದ ಇರುತ್ತಾನೆ, ಹೆಚ್ಚಿನದೇನನ್ನೂ ಕೇಳುವುದಿಲ್ಲ."

– ಶ್ರೀ ಅರವಿಂದರು: ಸೂಕ್ತಿಗಳು ಮತ್ತು ಯೋಚನೆಗಳು.

ಆದರೆ ಅದು ಸ್ಪಷ್ಟವಿದೆ! ಅದು ನಮಗೆ ಎಷ್ಟೊಂದು ಸ್ಪಷ್ಟವಿದೆ.

**ಪ್ರಶ್ನೆ:** *ಹೌದು ಆದರೆ ಗುರಿಯನ್ನು ಇಡಿಯಾಗಿ ಆವರಿಸಬೇಕಾದರೆ ನಾವು ಏನು ಮಾಡಬೇಕು ?*

**ಶ್ರೀಮಾತೆ:** ಗುರಿಕಾರರಾಗುವುದನ್ನು ನಿಲ್ಲಿಸಿಬಿಡಬೇಕು.

ಅದು ಒಳ್ಳೆಯ ಪ್ರತೀಕ. ತಾವು ದೈವೀಸತ್ಯವನ್ನು ಶೋಧಿಸಿದ್ದೇವೆ ಎಂದು ಕಲ್ಪನೆ ಮಾಡಿಕೊಳ್ಳುವ ಸ್ಥಿತಿಯಲ್ಲಿರುವ ಜನರಿಗೆ ಇದು ಒಳ್ಳೆಯದು.

ತಾವು ದೈವೀಸತ್ಯವನ್ನು ಕಂಡುಕೊಂಡಿದ್ದೇವೆ ಎಂದು ಯೋಚಿಸುವ ಜನರಿಗೆ ಹೇಳಲು ಇದು ಒಳ್ಳೆಯ ವಿಷಯ, ಏಕೆಂದರೆ ಅವರು ಒಂದು ಬಿಂದುವನ್ನು ಸ್ಪರ್ಶಿಸಿರುತ್ತಾರೆ.

*

ಅದು ಪ್ರಶಂಸನೀಯ ಸ್ಥಿತಿ, ಅದು ಮನಸ್ಸಿನ ಪರಿಪೂರ್ಣ ಶಾಂತಿ. ಇನ್ನು ಮುಂದೆ ಸಂಪಾದಿಸಿದ ಜ್ಞಾನವನ್ನು, ನೆನಪಿನಲ್ಲಿ ಇಟ್ಟುಕೊಳ್ಳಬೇಕಾದ ಹಾಗೂ ಸ್ವೀಕರಿಸಿದ ವಿಚಾರಗಳನ್ನು ಸಂಗ್ರಹ ಮಾಡಿಟ್ಟುಕೊಳ್ಳುವ ಆವಶ್ಯಕತೆ ಇರುವುದಿಲ್ಲ.

ಸಮಯ ಸನ್ನಿಹಿತವಾದಾಗ ಕ್ರಿಯೆಗಾಗಿ, ಬೋಧನೆಗಾಗಿ, ಸಮಸ್ಯೆಯ ಪರಿಹಾರ–ಕ್ಕಾಗಿ ಅವಶ್ಯವಾದ ಜ್ಞಾನ ಸಂಗ್ರಹವನ್ನು ಸ್ವಾಧೀನದಲ್ಲಿಟ್ಟುಕೊಳ್ಳಲು ಮಿದುಳಿನಲ್ಲಿ ಸಾವಿರಾರು ವಿಷಯಗಳನ್ನು ಅಸ್ತವ್ಯಸ್ತವಾಗಿ ತುಂಬುವ ಆವಶ್ಯಕತೆ ಇರುವುದಿಲ್ಲ. ಮನಸ್ಸು ನಿಶ್ಚಲ ನೀರವತೆಯಲ್ಲಿರುತ್ತದೆ, ಮಿದುಳು ಸ್ತಬ್ಧವಾಗಿರುತ್ತದೆ, ಮತ್ತು ಸರಿಯಾದ ಕ್ಷಣದಲ್ಲಿ ದೈವೀಕೃಪೆಯಿಂದ ಪ್ರಕಾಶದ ಒಂದು ಹನಿ ಪ್ರಜ್ಞೆಯಲ್ಲಿ ಬೀಳುತ್ತದೆ, ತಿಳಿದುಕೊಳ್ಳಬೇಕಾದುದನ್ನು ತಿಳಿದುಕೊಳ್ಳಲಾಗುತ್ತದೆ. ನೆನಪಿನಲ್ಲಿಟ್ಟು–ಕೊಳ್ಳಲು ಮನುಷ್ಯ ಏಕೆ ಕಾಳಜಿ ಮಾಡಬೇಕು! ಆ ಜ್ಞಾನವನ್ನು ಉಳಿಸಿಕೊಳ್ಳಲು ಪ್ರಯತ್ನವನ್ನೇಕೆ ಮಾಡಬೇಕು? ಅದು ಅವಶ್ಯವಾದ ದಿನದಂದು ಇಲ್ಲವೆ ಕ್ಷಣದಲ್ಲಿ ಅದನ್ನು ಮನುಷ್ಯ ಮತ್ತೆ ದೊರಕಿಸುತ್ತಾನೆ. ಪ್ರತಿಯೊಂದು ಸೆಕೆಂಡಿನಲ್ಲಿ ಮನುಷ್ಯ ಖಾಲಿ ಪುಟದಂತಿರುತ್ತಾನೆ. ಶಾಂತಿ, ವಿಶ್ರಾಮಗಳಿರುವ ಸ್ಥಿತಿಯಲ್ಲಿ, ಪರಿಪೂರ್ಣ ಸ್ವೀಕೃತಿಗಾಗಿ ಅವಶ್ಯವಿರುವ ನಿಶ್ಚಲ ನೀರವತೆಯಲ್ಲಿ ತಿಳಿದುಕೊಳ್ಳಬೇಕಾದುದನ್ನು ಆ ಖಾಲಿ ಪುಟದ ಮೇಲೆ ಬರೆಯಲಾಗುತ್ತದೆ.

ಮನುಷ್ಯ ತಿಳಿದುಕೊಳ್ಳಬೇಕಾದುದನ್ನು ತಿಳಿದುಕೊಳ್ಳುತ್ತಾನೆ, ನೋಡಬೇಕಾದು–ದನ್ನು ನೋಡುತ್ತಾನೆ. ತಿಳಿದುಕೊಳ್ಳಬೇಕಾದುದು ಹಾಗೂ ನೋಡಬೇಕಾದುದು ನೇರವಾಗಿ ಪರಮೋಚ್ಚನಿಂದ ಬರುವುದರಿಂದ ಅದು ದೈವೀಸತ್ಯವೇ ಆಗಿರುತ್ತದೆ; ತರ್ಕ ಹಾಗೂ ಮೂರ್ಖತನದ ಎಲ್ಲ ವಿಚಾರಗಳಿಂದ ತಪ್ಪಿಸಿಕೊಳ್ಳುತ್ತದೆ ಮತ್ತು ಅದು ಮೂರ್ಖತನದ್ದೋ ಎಂದು ತಿಳಿದುಕೊಳ್ಳಲು ಮನುಷ್ಯ ಬಹಳ ಕೀಳು–ಮಟ್ಟಕ್ಕೆ ಇಳಿಯಬೇಕಾಗುತ್ತದೆ.

ನಿಶ್ಚಲ ನೀರವತೆ ಮತ್ತು ನಿರಹಂಕಾರ, ವಿನಮ್ರ, ಲಕ್ಷ್ಯಗೊಡುವ ಸ್ವೀಕೃತಿ, ತೋರಿಕೆಗಳಿಗಾಗಿ ಯಾವ ಕಾಳಜಿಯಿಲ್ಲದೆ ಇರುವುದು, ಅಸ್ತಿತ್ವದಲ್ಲಿ ಇರುವುದ–ಕ್ಕಾಗಿಯೂ ಕೂಡ ತಳಮಳವಿಲ್ಲದೆ ಇರುವುದು. ಮನುಷ್ಯ ನಿರಹಂಕಾರಿಯಾದ ಬಹಳ ವಿನಮ್ರತೆಯಿಂದ ಕೂಡಿದ, ಬಹಳ ಸರಳ ಉಪಕರಣವಾಗುತ್ತಾನೆ, ಆ ಉಪಕರಣ ತನ್ನಲ್ಲಿಯೇ ಏನೂ ಆಗಿರುವುದಿಲ್ಲ, ಏನನ್ನೂ ತಿಳಿದುಕೊಂಡಿ–ರುವುದಿಲ್ಲ, ಆದರೆ ಪ್ರತಿಯೊಂದನ್ನೂ ಸ್ವೀಕರಿಸುವುದಕ್ಕೆ, ತನ್ನಿಂದ ಕಳಿಸಿಕೊಡು–ವುದಕ್ಕೆ ಸುಸಜ್ಜಿತವಾಗಿರುತ್ತದೆ.

ತನ್ನನ್ನು ತಾನು ಮರೆತು ಬಿಡುವುದು, ಸ್ವ–ಸಮರ್ಪಣ, ಅಹಂಕಾರ ಇಲ್ಲದೆ ಇರುವುದು ಇದೆಲ್ಲ ಮೊದಲ ನಿಬಂಧನೆ.



"ಪರಮೋಚ್ಚ ಪ್ರಭು, ನಾನೇನಾಗಬೇಕೆಂದು ನೀನು ಬಯಸುವೆಯೋ ನಾನು ಅದಾಗುತ್ತೇನೆ, ನಾನೇನು ತಿಳಿದುಕೊಳ್ಳಬೇಕೆಂದು ನೀನು ಬಯಸುವೆಯೋ ಅದನ್ನು ನಾನು ತಿಳಿದುಕೊಳ್ಳುತ್ತೇನೆ, ನಾನೇನು ಕೈಕೊಳ್ಳಬೇಕೆಂದು ನೀನು ಬಯಸುವೆಯೋ ಅದನ್ನು ನಾನು ಕೈಕೊಳ್ಳುತ್ತೇನೆ" ಎಂದು ದೇಹ ಹೇಳುತ್ತದೆ.

(10/1,23,123,10) – ಶ್ರೀ ಮಾತೆ

*

## ಅಂತಿಮ ಸತ್ಯ ಕುರಿತು ವಿಜ್ಞಾನ ಮತ್ತು ಯೋಗ

ವಿಜ್ಞಾನವೇ ಸ್ವತಃ ಅಂತಿಮ ಸತ್ಯವನ್ನು ತಲುಪಿದೆಯೇ ಎಂದು ನಾನು ಕೇಳಬಹುದು. ತದ್ವಿರುದ್ಧವಾಗಿ ವಿಜ್ಞಾನ ಮುಂದುವರಿಯುತ್ತಿದ್ದ ಹಾಗೆ ಅಂತಿಮ ಸತ್ಯ ಹಿಂದೆ ಸರಿದು ಹೋಗುತ್ತಿರುವಂತೆ ತೋರಿಬರುತ್ತದೆ. ಅಂತಿಮ ಸತ್ಯ ಭೌತಿಕ–ವಾಗಿದೆ ಹಾಗೂ ವಸ್ತು ನಿಷ್ಠವಾಗಿದೆ ಎಂಬ ಊಹೆಯಿಂದ ವಿಜ್ಞಾನ ಪ್ರಾರಂಭಿಸಿತು ಮತ್ತು ವಸ್ತುನಿಷ್ಠ ಅಂತಿಮ ಸತ್ಯ (ಇಲ್ಲವೆ ಅದಕ್ಕಿಂತಲೂ ಕಡಿಮೆಯಾದುದ್ದು) ಎಲ್ಲ ವ್ಯಕ್ತಿನಿಷ್ಠ ಗೋಚರ ಸಂಗತಿಗಳಿಗೆ ವಿವರಣೆ ಕೊಡುವುದು ಎಂದು ಭಾವಿಸಿತ್ತು. ಯೋಗವು ಅಂತಿಮ ಸತ್ಯ ಆಧ್ಯಾತ್ಮಿಕವಾಗಿರುತ್ತದೆ ಮತ್ತು ವ್ಯಕ್ತಿನಿಷ್ಠವಾಗಿರುತ್ತದೆ ಮತ್ತು ಆ ಅಂತಿಮ ಪ್ರಕಾಶದಲ್ಲಿ ನಾವು ವಸ್ತುನಿಷ್ಠ ಗೋಚರ ರೂಪಗಳನ್ನು ನೋಡಬೇಕು ಎಂಬ ವಿರುದ್ಧ ದೃಷ್ಟಿಕೋನದಿಂದ ಮುಂದುವರಿಯುತ್ತದೆ. ಅವೆರಡೂ ವಿರುದ್ಧ ದೆಸೆಯಲ್ಲಿರುವ ಧ್ರುವಗಳಂತಿವೆ, ಅವುಗಳ ನಡುವಿನ ಕಂದರ ಸಾಧ್ಯವಿರಬಹುದಾದಷ್ಟು ವಿಸ್ತಾರವಾಗಿದೆ.

ಆದಾಗ್ಯೂ ಯೋಗ ವೈಜ್ಞಾನಿಕವಾಗಿದೆ, ಅದು ವ್ಯಕ್ತಿನಿಷ್ಠ ಪ್ರಯೋಗದಿಂದ ಮುಂದುವರಿಯುತ್ತದೆ ಮತ್ತು ತನ್ನ ಎಲ್ಲ ಶೋಧಗಳಿಗೆ ಅನುಭವದ ಆಧಾರ ನೀಡುತ್ತದೆ. ಕೇವಲ ಮೊದಲ ಹೆಜ್ಜೆಯೆಂದು ಮಾನಸಿಕ ಅಂತರ್ಬೋಧೆಗಳನ್ನು ಒಪ್ಪಿಕೊಳ್ಳಲಾಗುತ್ತದೆ ಮತ್ತು ಅವುಗಳನ್ನು ಸಿದ್ಧಿಗಳೆಂದು ಭಾವಿಸುವುದಿಲ್ಲ–ಅವು ಅನುಭವಕ್ಕೆ ಬರುವಂತೆ ಪರಿವರ್ತನೆ ಪಡೆದು ನ್ಯಾಯಸಮ್ಮತವಾಗುವ ರೀತಿಯಲ್ಲಿ ದೃಢೀಕರಣಗೊಳ್ಳಬೇಕು. ಅನುಭವದ ಮೌಲ್ಯವನ್ನು ಕುರಿತು ಹೇಳುವುದಾದರೆ ಭೌತಿಕ ಮನಸ್ಸು ಅವುಗಳ ಬಗ್ಗೆ ಸಂಶಯ ವ್ಯಕ್ತಪಡಿಸುತ್ತದೆ, ಏಕೆಂದರೆ ಅದು ವ್ಯಕ್ತಿ ನಿಷ್ಠವಾಗಿರುತ್ತದೆ, ವಸ್ತುನಿಷ್ಠವಾಗಿರುವುದಿಲ್ಲ. ಆದರೆ ಈ ಭಿನ್ನತೆಗೆ ಹೆಚ್ಚು

ಮೌಲ್ಯವಿದೆಯೆ? ಎಲ್ಲ ಜ್ಞಾನ ಹಾಗೂ ಅನುಭವಗಳು ಅಡಿ (bottom) ಯಲ್ಲಿ ವ್ಯಕ್ತಿನಿಷ್ಠವಾಗಿರುವುದಿಲ್ಲವೆ? ವಸ್ತುನಿಷ್ಠ ಬಾಹ್ಯ ಭೌತಿಕ ವಸ್ತುಗಳನ್ನು ಮನುಷ್ಯರು ತಮ್ಮ ಮನಸ್ಸಿನ ಹಾಗೂ ಇಂದ್ರಿಯಗಳ ರಚನೆಗಳಿಂದಾಗಿ ಒಂದೇ ರೀತಿಯಲ್ಲಿ ನೋಡುತ್ತಾರೆ. ಮನಸ್ಸಿನ ಹಾಗೂ ಇಂದ್ರಿಯಗಳ ಬೇರೆ ರಚನೆ ಭೌತಿಕ ಜಗತ್ತಿನ ಬಗ್ಗೆ ಬೇರೆ ರೀತಿಯ ಮಾಹಿತಿಯನ್ನು ಕೊಡುತ್ತದೆ. ವಿಜ್ಞಾನವೇ ಅದನ್ನು ಸ್ಪಷ್ಟಪಡಿಸಿದೆ. ಯೋಗದ ಅನುಭವ ವ್ಯಕ್ತಿನಿಷ್ಠವಾಗಿದೆ, ಅನುಭವ ಪಡೆಯುವವನ ವ್ಯಕ್ತಿವಿಶಿಷ್ಟತೆಯಿಂದ ಅದು ಬೇರೆ ಬಣ್ಣ ಪಡೆದಿರುತ್ತದೆ ಎಂಬುದು ನಿನ್ನ ಮಿತ್ರನ ಅಭಿಪ್ರಾಯವಾಗಿದೆ. ವಿಶಿಷ್ಟ ಕ್ಷೇತ್ರಗಳಲ್ಲಿ ಅನುಭವಕ್ಕೆ ಕೊಟ್ಟ ಪ್ರತಿಲಿಪಿ (transcription) ಯ ನಿಖರವಾದ ರೂಪ ಕುರಿತು ಅದು ಸ್ವಲ್ಪ ಮಟ್ಟಿಗೆ ನಿಜವಾಗಿರಬಹುದು, ಆದರೆ ಇಲ್ಲಿಯೂ ಕೂಡ ಭಿನ್ನತೆ ಮೇಲ್ಮೈಯ– ದಾಗಿರಬಹುದು. ಯೋಗದ ಅನುಭವ ಎಲ್ಲೆಡೆಯಲ್ಲಿ ಒಂದೇ ರೀತಿಯಲ್ಲಿ ಆಗುತ್ತಿರುತ್ತದೆ ಎಂಬುದು ವಾಸ್ತವ ಸಂಗತಿ. ನಾವು ಅನಂತದೊಡನೆ ವ್ಯವಹರಿ– ಸುತ್ತಿರುವ ಕಾರಣದಿಂದಾಗಿ ಅದನ್ನು ಸಮೀಪಿಸುವುದಕ್ಕೆ ಹಲವಾರು ದಾರಿಗಳು ಇರಬೇಕು, ಒಂದೇ ದಾರಿಯಿರುವುದಿಲ್ಲ ಎಂಬುದು ಒಪ್ಪಿಕೊಳ್ಳಬೇಕಾದ ಸಂಗತಿ. ಆದಾಗ್ಯೂ ಎಲ್ಲೆಡೆಯಲ್ಲಿ ದಾರಿಗಳು ಸರ್ವಸಾಮಾನ್ಯವಾಗಿ ಒಂದೇ ಆಗಿರುತ್ತವೆ. ಮತ್ತು ಅಂತರ್ಬೋಧೆಗಳು, ಅನುಭವಗಳು, ಗೋಚರ ವಿಷಯಗಳು ಯುಗ ಯುಗಗಳಲ್ಲಿ ಒಂದರಿಂದ ಇನ್ನೊಂದು ದೂರವಿರುವ ದೇಶವಿದೇಶಗಳಲ್ಲಿ ಒಂದೇ ಆಗಿರುತ್ತವೆ ಮತ್ತು ಆಚರಣೆಗೆ ಒಳಪಡಿಸಿದ ಪದ್ಧತಿಗಳು ಒಂದರಿಂದ ಇನ್ನೊಂದು ಸ್ವತಂತ್ರವಾಗಿರುತ್ತವೆ. ಮಧ್ಯಯುಗದ ಯುರೋಪಿಯನ್ ಭಕ್ತನ ಅನುಭವಗಳು ನಿಖರವಾಗಿ ಅವುಗಳ ಸತ್ವದಲ್ಲಿ ಮಧ್ಯಯುಗದ ಭಾರತೀಯ ಭಕ್ತನ ಅನುಭವಗಳ ಹಾಗೇ ಇವೆ, ಆದಾಗ್ಯೂ ಹೆಸರುಗಳಲ್ಲಿ, ರೂಪಗಳಲ್ಲಿ ಧಾರ್ಮಿಕ ಬಣ್ಣ ತಳೆಯುವುದರಲ್ಲಿ ಭಿನ್ನತೆ ಇರಬಹುದು. ಈ ಭಕ್ತರು ಪರಸ್ಪರರೊಂದಿಗೆ ಪತ್ರವ್ಯವಹಾರ ನಡೆಸಿಲ್ಲ ಇಲ್ಲವೆ ಪರಸ್ಪರರ ಅನುಭವಗಳ ಹಾಗೂ ಪರಿಣಾಮಗಳ ಬಗ್ಗೆ ಅರಿವುಳ್ಳವರಾಗಿರಲಿಲ್ಲ, ಅದು ನ್ಯೂಯಾರ್ಕಿನ ಆಧುನಿಕ ವಿಜ್ಞಾನಿ ಯೊಕೋ ಹೊಮಾದ ವಿಜ್ಞಾನಿಯೊಡನೆ ಸಂಪರ್ಕವಿಟ್ಟುಕೊಂಡ ರೀತಿಯದಾಗಿರಲಿಲ್ಲ. ಇದು ಒಂದೇ ಬಗೆಯದಾದ, ವಿಶ್ವಂಭರವಾದ ಮತ್ತು ಸಂಭಾವ್ಯವಾದ, ನಿಜವಾದ ಏನೋ ಒಂದಾಗಿರಬೇಕು ಎಂದು ತೋರಿಬರುತ್ತದೆ. ಆದರೆ ಮನಸ್ಸು ಅರಿತುಕೊಳ್ಳುವ ಭಾಷೆಯ ಭಿನ್ನತೆಯಿಂದಾಗಿ ಅನುವಾದದ ಛಾಯೆಯಲ್ಲಿ ಭಿನ್ನತೆ ಕಂಡುಬರಬಹುದು.



ಅಂತಿಮ ದೈವೀಸತ್ಯವನ್ನು ಕುರಿತು ಹೇಳುವುದಾದರೆ ವ್ಹಿಕ್ಟೋರಿಯಾ ಕಾಲದ ನಾಸ್ತಿಕ ಮತ್ತು ಭಾರತದ ವೇದಾಂತಿ ಇವರೀರ್ವರೂ ಅದು ಪರದೆಯ ಹಿಂದೆ ಅಡಗಿದೆ, ಆದರೆ ಇದೆ ಎನ್ನುವುದನ್ನು ಒಪ್ಪಿಕೊಳ್ಳಬಹುದು. ಅದನ್ನು ಕುರಿತು ಅವರೀರ್ವರೂ ಅದು ಅಜ್ಞಾನವೆಂದು ಕರೆಯುವರು. ಇರುವ ಭಿನ್ನತೆ ಎಂದರೆ ಅದನ್ನು ಮನಸ್ಸಿನಿಂದ ತಿಳಿದುಕೊಳ್ಳುವುದು ಸಾಧ್ಯವಿಲ್ಲ, ಮಾತಿನಿಂದ ವ್ಯಕ್ತಪಡಿಸಲಿಕ್ಕಾಗುವುದಿಲ್ಲ, ಆದಾಗ್ಯೂ ಮಾನಸಿಕ ಗ್ರಹಿಕೆಗಿಂತ ಆಳಾತಿ ಆಳದ ಇಲ್ಲವೆ ಉಚ್ಚತರವಾದ ಏನೋ ಒಂದರಿಂದ ಸಿದ್ಧಿಸಿಕೊಳ್ಳಬಹುದು ಎಂದು ವೇದಾಂತಿ ಹೇಳುತ್ತಾನೆ, ಅದು ಹಾಗಿರುವಾಗ ಸಿದ್ಧಿಸಿಕೊಂಡದ್ದನ್ನು ಮನಸ್ಸು ಪ್ರತಿಫಲಿಸಬಹದು, ಅದು ಮನಸ್ಸಿನ ಆಂತರಿಕ ಹಾಗೂ ಬಾಹ್ಯ ಅನುಭವಗಳಿಗೆ ತೋರಿಸಿದ್ದರ ಹಲವಾರು ಮುಖಗಳನ್ನು ಮಾತು ಅಭಿವ್ಯಕ್ತಪಡಿಸಬಹುದು. ವ್ಹಿಕ್ಟೋರಿಯನ್ ಕಾಲದ ನಾಸ್ತಿಕ ಈ ನ್ಯೂನತೆ (qualification) ಯನ್ನು ರದ್ದು– ಗೊಳಿಸಬಹುದು. ಅದು ಅಸ್ತಿತ್ವದಲ್ಲಿದ್ದುದರ ಬಗ್ಗೆ ಸಂಶಯವನ್ನು, ಅಸ್ತಿತ್ವದಲ್ಲಿದ್ದರೆ ಅಜ್ಞಾತವಾಗಿರುವುದರ ಸಂಪೂರ್ಣ ಅಜ್ಞಾತವಾಗಿರುವಿಕೆಯನ್ನು ಕುರಿತು ಅಭಿಪ್ರಾಯ ವ್ಯಕ್ತಪಡಿಸಬಹುದು.

(22/189–90)

– ಶ್ರೀ ಅರವಿಂದರು

*

## ಬೌದ್ಧಿಕ ಸತ್ಯಗಳು ಹಾಗೂ ಆತ್ಮದ ಸತ್ಯಗಳು

ಭಾರತೀಯ ಮನಸ್ಸಿಗೆ ಅದರ ಮತತತ್ವ ಕನಿಷ್ಠ ಮಹತ್ವವಾದದ್ದು, ಧಾರ್ಮಿಕ ಮನೋಭಾವ ಹೆಚ್ಚು ಮಹತ್ವದ್ದು, ಸೈದ್ಧಾಂತಿಕ ನಿಶ್ಚಿತಾಭಿಪ್ರಾಯವಲ್ಲ. ತದ್ವಿರುದ್ಧ– ವಾಗಿ ಪಾಶ್ಚಾತ್ಯ ಮನಸ್ಸಿಗೆ ಒಂದು ಪಂಥದ ನಿರ್ದಿಷ್ಟ ಬೌದ್ಧಿಕ ನಂಬಿಕೆ ಅತಿ ಹೆಚ್ಚು ಮಹತ್ವದ್ದು, ಅದು ಅದರ ಅರ್ಥದ ತಿರುಳು, ಅದೇ ಇತರ ನಂಬಿಕೆಗಳಿಂದ ಭಿನ್ನ– ವೆಂದು ತೋರಿಸಿಕೊಡುವಂತಹದು. ಏಕೆಂದರೆ ಆ ಧರ್ಮದ ವಿಮರ್ಶಕಾರನ ಸೈದ್ಧಾಂತಿಕ ನಿಶ್ಚಿತಾಭಿಪ್ರಾಯಕ್ಕನುಗುಣವಾಗಿ, ಅದರ ರೂಪಿಸಲಾದ ನಂಬಿಕೆಗಳು ಅದನ್ನು ನಿಜವಾದ ಇಲ್ಲವೆ ಮಿಥ್ಯೆಯಾದ ಧರ್ಮವನ್ನಾಗಿ ಮಾಡುತ್ತವೆ. ಈ ವಿಚಾರ ಎಷ್ಟೇ ಮೂರ್ಖತನದ್ದಾಗಲಿ, ಆಳವಿಲ್ಲದ್ದಾಗಲಿ, ಪಾಶ್ಚಾತ್ಯ ವಿಚಾರದ ಪರಿಣಾಮ– ವಾಗಿರುತ್ತದೆ. ಈ ಪಾಶ್ಚಾತ್ಯ ವಿಚಾರ ಬೌದ್ಧಿಕ ಸತ್ಯವೇ ಉಚ್ಚತರ ನಿಜವಾದ ಹೇಳಿಕೆ,

ಅಲ್ಲದೆ ಅದರ ಹೊರತಾಗಿ ಬೇರೆ ಯಾವುದೂ ಇಲ್ಲ ಎಂದು ತಪ್ಪಾಗಿ ಭಾವಿಸುತ್ತದೆ. ಭಾರತೀಯ ಧಾರ್ಮಿಕ ಚಿಂತಕನು ಎಲ್ಲ ಸನಾತನ ಉಚ್ಚತರ ನಿಜವಾದ ಹೇಳಿಕೆಗಳು ಆತ್ಮದ ಸತ್ಯಗಳೆಂದು ತಿಳಿದುಕೊಂಡಿರುತ್ತಾನೆ. ಪರಮೋಚ್ಚ ಸತ್ಯಗಳು ತರ್ಕಬದ್ಧ ಯೋಚನೆಯ ಕಟ್ಟುನಿಟ್ಟಿನ ತೀರ್ಮಾನಗಳಾಗಿರುವುದಿಲ್ಲ, ಆದರೆ ಆತ್ಮದ ಆಂತರಿಕ ಅನುಭವದ ಫಲಗಳಾಗಿರುತ್ತವೆ. ಬೌದ್ಧಿಕ ಸತ್ಯ ಕೇವಲ ಹಲವಾರು ದ್ವಾರಗಳಲ್ಲಿ ಒಂದು, ಅದು ದೇವಾಲಯದ ಬಾಹ್ಯ ಪ್ರಾಕಾರದತ್ತ ಕರೆದೊಯ್ಯುತ್ತದೆ. ಅನಂತದತ್ತ ಹೊರಳಿದ ಬೌದ್ಧಿಕ ಸತ್ಯ ಅದರ ಸ್ವಭಾವದಲ್ಲಿ ಹಲವಾರು ಮುಖಗಳುಳ್ಳದ್ದು ಆಗಿರಬೇಕು, ಸಂಕುಚಿತ ಒಂದೇ ಮುಖ ಇರಲಾರದು. ಅತ್ಯಂತ ವ್ಯತ್ಯಾಸ ಹೊಂದಿರುವಂತೆ ಕಂಡುಬರುವ ಬೌದ್ಧಿಕ ನಂಬಿಕೆಗಳು ಸರಿಸಮಾನವಾಗಿ ಸತ್ಯವಾದವುಗಳೇ ಆಗಿರಬಲ್ಲವು, ಏಕೆಂದರೆ ಅವು ಅನಂತನ ಅನೇಕ ಭಾಗಗಳನ್ನು ಪ್ರತಿಫಲಿಸಿ ತೋರಿಸುತ್ತವೆ. ಬೌದ್ಧಿಕವಾಗಿ ಅವುಗಳ ನಡುವೆ ಎಷ್ಟೇ ಅಂತರವಿದ್ದರೂ ಅವು ಅಷ್ಟೊಂದು ಬಗೆಯ ಪ್ರವೇಶ ದ್ವಾರಗಳನ್ನು ರೂಪಿಸುತ್ತವೆ, ಅವು ಮನಸ್ಸಿನಲ್ಲಿ ಪರಮೋಚ್ಚ ದೈವೀ ಪ್ರಕಾಶದ ಮಸುಕಾದ ಕಿರಣವೊಂದಕ್ಕೆ ಒಳಗೆ ಬರಲು ಅವಕಾಶ ಮಾಡಿಕೊಡುತ್ತವೆ. ಸತ್ಯ ಮತ್ತು ಮಿಥ್ಯೆಯಿಂದ ಕೂಡಿದ ಧರ್ಮಗಳಿವೆ ಎಂದು ಹೇಳಲಾಗದು, ಅದಕ್ಕೂ ಹೆಚ್ಚಾಗಿ ಎಲ್ಲ ಧರ್ಮಗಳು ತಮ್ಮದೇ ರೀತಿಯಲ್ಲಿ ಹಾಗೂ ದರ್ಜೆಯಲ್ಲಿ ಸತ್ಯವಾಗಿವೆ. ಪ್ರತಿಯೊಂದೂ ಸನಾತನನಾದ ಏಕೈಕನತ್ತ ಸಾಗುವ ಮಾರ್ಗಗಳಲ್ಲಿ ಒಂದು.

*

ಜೀವನದ ಪ್ರಗತಿ ಅಭಿವೃದ್ಧಿಯನ್ನು ಹಾಗೂ ಅಗಾಧವಾದ ಸಂಖ್ಯೆಯಲ್ಲಿರುವ ವಿಷಯಗಳು ಒಂದರೊಳಗೊಂದು ತಳಕುಹಾಕಿಕೊಳ್ಳುವಿಕೆಯನ್ನು ಒಳಗೊಳ್ಳು–ತ್ತದೆ, ಆ ವಿಷಯಗಳು ಬಹಳಷ್ಟು ಸಲ ಪರಸ್ಪರ ಹೋರಾಟದಲ್ಲಿ ಹಾಗೂ ವೈರುಧ್ಯಗಳಲ್ಲಿ ತೊಡಗಿರುವಂತೆ ತೋರಿಬರುತ್ತದೆ. ಈ ವೈರುಧ್ಯಗಳ ಮಧ್ಯದಲ್ಲಿ ಯಾವುದೋ ಒಂದು ತತ್ವ, ಇಲ್ಲವೆ ಏಕತೆ ಸ್ಥಾಪಿತಗೊಳ್ಳಲು ಒಂದು ಸ್ಥಾನ, ಕಾರ್ಯ ಸಾಧ್ಯವಾಗುವಂತೆ ಮಾಡುವ ಯಾವುದೋ ರಾಜೀಮಾಡುವ ಸನ್ನೆ ಇವುಗಳನ್ನು ಕಂಡುಕೊಳ್ಳಬೇಕಾಗುತ್ತದೆ. ಇವು ವಿಸ್ತಾರವಾದ, ಹೆಚ್ಚು ಒಳ್ಳೆಯದಾದ ಸಾಮರಸ್ಯದ ಆಧಾರದ ಮೇಲೆ ಸ್ಥಾಪಿತವಾಗಿರಬೇಕು. ಸಂಘರ್ಷ ಮತ್ತು ಹೋರಾಟದವಾಗಿರಬಾರದು. ಮಾನವತೆಯ ಕ್ರಿಯಾಶೀಲ ಉತ್ಕ್ರಾಂತಿಯಲ್ಲಿ ಇದು



ಹೆಚ್ಚು, ಹೆಚ್ಚಾಗಿ ಸಾಮಾನ್ಯ ಗುರಿಯಾಗಬೇಕು. ಹಾಗಾದಾಗ ಜೀವನದ ಹೆಚ್ಚು ಗೊಂದಲಕ್ಕೀಡಾದ, ವೇದನೆಗೊಳಗಾದ, ಮತ್ತು ಮಬ್ಬಾದ ಚಲನೆಯಿಂದ, ಜೀವನದ–ಮನಸ್ಸಿನ ಅಜ್ಞಾನದೊಡನೆ ಮತ್ತು ಭೌತದ್ರವ್ಯದ ಅಚೇತನದೊಡನೆ ಪ್ರಕೃತಿ ಮಾಡಿಕೊಂಡ ಹೊಂದಾಣಿಕೆಯಿಂದ ಮೇಲೆದ್ದು ಬರುವಂತಾಗುವುದು. ಆತ್ಮ ತನ್ನ ಅತ್ಯುಚ್ಚ ಮತ್ತು ಅತ್ಯಂತ ಸಂಪೂರ್ಣ ನೈಜತೆಯನ್ನು ಶೋಧಿಸಿದಾಗ, ಮತ್ತು ಅದರ ಜೀವನ ಮೌಲ್ಯಗಳನ್ನು ಆತ್ಮದವನ್ನಾಗಿ ಪ್ರಗತಿಪರ, ಊರ್ಧ್ವಮುಖ ಪರಿವರ್ತನೆಯಲ್ಲಿ ಪರಿಣಾಮಕಾರಿಯಾಗಿಸಿದಾಗ ಇದನ್ನು, (ಮೇಲೆದ್ದು ಬರುವಿಕೆ–ಯನ್ನು) ನಿಜವಾಗಿ ಮತ್ತು ತೃಪ್ತಿಕರವಾಗಿ ಮಾಡಲು ಸಾಧ್ಯವಾಗುವುದು, ಅಲ್ಲಿ ಅವು ತಮ್ಮ ಆಧ್ಯಾತ್ಮಿಕ ಸತ್ಯವನ್ನು ಕಂಡುಕೊಳ್ಳುವವು ಮತ್ತು ಆ ಸತ್ಯದಲ್ಲಿ ಪರಸ್ಪರ ಪರಿಚಯಕ್ಕೆ ಹಾಗೂ ರಾಜೀಮಾಡಿಕೊಳ್ಳುವುದಕ್ಕೆ ನಿಲ್ಲಲು ಸ್ಥಾನವನ್ನು ಕಂಡು–ಕೊಳ್ಳುವವು. ಆಧ್ಯಾತ್ಮಿಕವಾದದ್ದು ಸತ್ಯವಾದ ವಿಷಯ, ಉಳಿದವುಗಳೆಲ್ಲವೂ ಮುಸುಕಿನಲ್ಲಿರುವ ಅದರ ಮುಖಗಳು. ಪ್ರಜ್ವಲವಾದದ್ದು ಮುಖವಾಡ ಧರಿಸಿ–ರುತ್ತದೆ ಇಲ್ಲವೆ ಅದನ್ನು ಅಂಧಕಾರ ವಿರೂಪಗೊಳಿಸಿರುತ್ತದೆ, ಆ ಸ್ಥಿತಿಯಲ್ಲಿಯೇ ಅವು ತಮ್ಮದೇ ಸರಿಯಾದ ರೂಪವನ್ನು ಮತ್ತು ಪರಸ್ಪರರಲ್ಲಿ ನಿಜವಾದ ಸಂಬಂಧವನ್ನು ಕಂಡುಕೊಳ್ಳುತ್ತವೆ. ಈ ಕಾರ್ಯವನ್ನು ತರ್ಕ ಮಾಡಲಾರದು. ತರ್ಕದ ವ್ಯವಹಾರ ಮಧ್ಯದಲ್ಲಿ ಇರುತ್ತದೆ, ಅದು ಬುದ್ಧಿಮತ್ತೆಯಿಂದ ಜೀವನವನ್ನು ಅವಲೋಕಿಸುವುದಾಗಿರುತ್ತದೆ ಮತ್ತು ತಿಳಿದುಕೊಳ್ಳುವುದಾಗಿರುತ್ತದೆ ಮತ್ತು ಅದು ಸಾಗುತ್ತಿರುವ ದಿಶೆಯನ್ನು ಹಾಗೂ ಮಾರ್ಗದಲ್ಲಿ ಸ್ವ–ಅಭಿವೃದ್ಧಿಯ ನಿಯಮ–ಗಳನ್ನು ತನಗಾಗಿ ಶೋಧಿಸುವುದಾಗಿರುತ್ತದೆ. ಅದು ತನಗೆ ಒಪ್ಪಿಸಲಾದ ಕಾರ್ಯವನ್ನು ಕೈಕೊಳ್ಳಲು ತಾತ್ಕಾಲಿಕವಾಗಿ ನಿಶ್ಚಿತ ಪಡಿಸಿದ ದೃಷ್ಟಿಕೋನಗಳನ್ನು ಆಯ್ದುಕೊಳ್ಳಬೇಕಾದ ನಿರ್ಬಂಧಕ್ಕೊಳಗಾಗುತ್ತದೆ, ಅವುಗಳಲ್ಲಿ ಯಾವುದೂ ಭಾಗಶಃ ಸತ್ಯವಾಗಿರುವುದಕ್ಕಿಂತ ಹೆಚ್ಚಿನದಾಗಿರುವುದಿಲ್ಲ ಮತ್ತು ಪದ್ಧತಿಗಳನ್ನು ಸೃಷ್ಟಿಸುವುದಕ್ಕಾಗಿ ಅವುಗಳಲ್ಲಿ ಯಾವುದೂ ವಸ್ತು–ವಿಷಯಗಳ ಸಮಗ್ರ ಸತ್ಯದ ಕೊನೆಯ ಅಭಿವ್ಯಕ್ತಿಯೆಂದು ನಿಜವಾಗಿ ನಿಲ್ಲಲಾರದು. ವಸ್ತು–ವಿಷಯಗಳ ಸಮಗ್ರ ಸತ್ಯ ಆತ್ಮದ್ದಾಗಿರುತ್ತದೆ, ತರ್ಕದ್ದಲ್ಲ.

(14/123/24) – **ಶ್ರೀ ಅರವಿಂದರು**

*

## ದೈವೀಸತ್ಯದ ಉಚ್ಚತರ ಶಾಖೆಗಳು

ಜೀವತತ್ವವಾದಿ (vitalistic) ಮತ್ತು ಪ್ರಯೋಜನವಾದಿ ಹೊರಳುವಿಕೆ ಮತ್ತು ನೈತಿಕ ಸತ್ತೆಯ ಒತ್ತಾಯದ ಬೇಡಿಕೆ ಇವುಗಳಿಂದ ಇನ್ನೂ ಹೆಚ್ಚಿನ ರೀತಿಯಲ್ಲಿ ಬೌದ್ಧಿಕತೆಯ ಅರಸುವಿಕೆಯಲ್ಲಿ ಪ್ರಯೋಜನವಾದಿ ಜ್ಞಾನ ತನ್ನ ಕೊನೆಯ ಶಬ್ದವೆಂದು ಮಾನವತೆಯ ಉಚ್ಚತರ ಮನಸ್ಸು ತೃಪ್ತಿಯಿಂದಿರಲಾರದು. ನೈತಿಕತೆಯಲ್ಲಿ ಇರುವಂತೆ ಮಾನವ ಸತ್ತೆಯ ಬೌದ್ಧಿಕ ಸತ್ತೆಯಲ್ಲೂ ಕೂಡ ಜ್ಞಾನದ ಆವಶ್ಯಕತೆ ಹೊರಹೊಮ್ಮುತ್ತದೆ, ಅದು ಕೇವಲ ಜೀವನಕ್ಕೆ ಪ್ರಯೋಜನ–ಕಾರಿಯಾದುದು, ಸರಿಯಾದ ಕ್ರಿಯೆ ಕೈಕೊಳ್ಳುವುದಕ್ಕಾಗಿ ಸರಿಯಾದ ರೀತಿಯನ್ನು ಅರಿತುಕೊಂಡಿರುವುದು, ಅದರ ಸುತ್ತಲಿರುವ ಜಗತ್ತಿನೊಡನೆ ಯಶಸ್ವಿಯಾಗಿ ಹಾಗೂ ಬುದ್ಧಿಯುಕ್ತವಾಗಿ ವ್ಯವಹರಿಸುವುದು ಇದಿಷ್ಟಕ್ಕೆ ಸೀಮಿತವಾಗಿರುವುದಿಲ್ಲ. ಆದರೆ ಅದು ಆತ್ಮದ ಆವಶ್ಯಕತೆಯನ್ನು, ಆಂತರಿಕ ಸತ್ತೆಯ ಆಜ್ಞಾರ್ಥಕ ಒತ್ತಾಯದ ಬೇಡಿಕೆಯನ್ನು ಒಳಗೊಂಡಿರುತ್ತದೆ. ಜ್ಞಾನಕ್ಕಾಗಿಯೇ ಜ್ಞಾನವನ್ನು ಬೆಂಬತ್ತುವುದು ಬುದ್ಧಿಮತ್ತೆಯ ನಿಜವಾದ, ಸ್ವಭಾವಜನ್ಯ (intrinsic) ಧರ್ಮ, ಪ್ರಾಥಮಿಕವಾಗಿ ಇಲ್ಲವೆ ಅವಶ್ಯವಾಗಿ ಅದು ಜೀವನದ ಸಾಧನಗಳನ್ನು ಹೆಚ್ಚಿಸುವುದಕ್ಕಾಗಿ, ಕ್ರಿಯೆ–ಯಲ್ಲಿ ಯಶಸ್ಸನ್ನು ದೊರಕಿಸುವುದಕ್ಕಾಗಿ ಇರುವುದಿಲ್ಲ.

ಅತ್ಯುಚ್ಚ ಮನಸ್ಸಿನ ಮೂರನೆಯ ಚಲನೆಯಲ್ಲಿ ಆ ಮನಸ್ಸು ಅದರ ಸಂಕಲ್ಪ ಮತ್ತು ಬುದ್ಧಿಮತ್ತೆಯ ಪರಿಶುದ್ಧ ಆತ್ಮವನ್ನು, ಪ್ರಾಣಿಕ ಉದ್ದೇಶದ ಅಧೀನತೆಯಿಂದ ಹೊರತರಲು ಅದರ ಪ್ರಯತ್ನದ ಪ್ರಕಾಶಮಯ ಶಿರವನ್ನು ಬಿಡುಗಡೆ ಮಾಡಲು ತಯಾರಿ ಮಾಡಿಕೊಳ್ಳುತ್ತಿದ್ದಾಗ, ಸ್ವಭಾವದ ಈ ಆಜ್ಞೆ, ಮೂಲ ಸ್ವಭಾವದ ಈ ಆವಶ್ಯಕತೆ ಮಾನವ ಮನಸ್ಸಿನಲ್ಲಿ ಜ್ಞಾನದತ್ತ ಈ ಹಂಬಲವನ್ನು ಸೃಷ್ಟಿಸುತ್ತದೆ, ಶ್ರೇಷ್ಠತರವಾದ ಏನೋ ಒಂದಾಗುತ್ತದೆ, ಬದಲಾಗಿ ಹೆಚ್ಚು ಹೆಚ್ಚಾಗಿ ಸರಳ ರೀತಿಯಲ್ಲಿ, ಅಜ್ಞಾನದ ಹೊಟ್ಟು ಹಾಗೂ ಚಿಪ್ಪಿನಿಂದ ಹೊರಹೊಮ್ಮುತ್ತಿರುವ ಮತ್ತು ಸತ್ಯದತ್ತ ಮತ್ತು ಪ್ರಕಾಶದತ್ತ ಮುಂದೆ ದೂಡುತ್ತಿರುವ ಆತ್ಮದ ಆಜ್ಞೆಯಾಗುತ್ತದೆ, ಆ ಪ್ರಕಾಶ ಆತ್ಮದ ನೆರವೇರಿಕೆಯ ಮತ್ತು ಸತ್ತೆಗೆ ಭಗವಂತ ಕೊಟ್ಟ ಕರೆಯ ಸ್ಥಿತಿಯಾಗಿರುತ್ತದೆ. ಜ್ಞಾನದತ್ತ ಉತ್ತೇಜನಗೊಳ್ಳುವ ಆವಶ್ಯಕತೆಯೆಂದು ಬಾಹ್ಯ ಪ್ರಯೋಜನದ ಪ್ರಲೋಭನೆ ನಿಂತುಹೋಗುತ್ತದೆ, ಇದು ಅದೇ ಉಚ್ಚ ಸ್ತರದ ಮೇಲೆ ಸದ್ಗುಣಕ್ಕಾಗಿ ಉತ್ತೇಜನವೆಂದು ಪ್ರಾಣಿಕ ಪ್ರತಿಫಲಕ್ಕಾಗಿರುವ ಪ್ರಲೋಭನೆ



ನಿಂತು ಹೋಗುವ ರೀತಿಯದಾಗಿರುತ್ತದೆ ಮತ್ತು ಯಾವುದೇ ಬಗೆಯ ಸೋಗಿನ ಬಣ್ಣದ ಅಡಿಯಲ್ಲಿ ಅದಕ್ಕೆ ಮಹತ್ವವನ್ನು ಅಂಟಿಸುವುದು ಅನಾಸಕ್ತಿಯನ್ನು ಕೀಳ್ದೆಸೆಗೆ ಇಳಿಸಿದ ಹಾಗೂ ಆತ್ಮದ ಉದ್ದೇಶದ ಉಚ್ಚ ಪರಿಶುದ್ಧತೆಯಿಂದ ಪತನಗೊಂಡ ಭಾವನೆ ತರುತ್ತದೆ. ಅದಾಗಲೆ ಬೌದ್ಧಿಕ ಅರಸುವಿಕೆಗಳ ಅತಿ ಬಾಹ್ಯ ರೂಪ–ಗಳಲ್ಲಿಯೂ ಕೂಡ ಈ ಪರಿಪೂರ್ಣತ್ವದ ಭಾವನೆ ಬರತೊಡಗುತ್ತದೆ ಮತ್ತು ಅದು ಆಳಿಕೆ ನಡೆಸುತ್ತದೆ. ವಿಶ್ವದ ವಿಧಾನದ ನಿಯಮವನ್ನು ಹಾಗೂ ಸತ್ಯವನ್ನು ತಿಳಿದುಕೊಳ್ಳಲೆಂದು ವಿಜ್ಞಾನಿ ತನ್ನ ಶೋಧಗಳನ್ನು ಬೆಂಬತ್ತುತ್ತಾನೆ, ಅವುಗಳ ಪ್ರಾಯೋಗಿಕ ಪರಿಣಾಮಗಳು ಅನ್ವೇಷಿಸುವ ಮನಸ್ಸಿಗೆ ಗೌಣವಾಗಿರುತ್ತವೆ, ಉಚ್ಚತರ ವೈಜ್ಞಾನಿಕ ಬುದ್ಧಿಮತ್ತೆಗೆ ಎಳ್ಳಷ್ಟು ಪ್ರೇರಕವಾಗಿರುವುದಿಲ್ಲ. ಏಕೈಕ ದೈವೀ ಸತ್ಯಕ್ಕಾಗಿ ವಸ್ತು–ವಿಷಯಗಳ ಕಟ್ಟಕಡೆಯ ಸತ್ಯವನ್ನು ಶೋಧಿಸುವುದಕ್ಕಾಗಿ ತತ್ವಜ್ಞಾನಿಗೆ ಒಳಗಿನಿಂದ ಎಳೆತವಿರುತ್ತದೆ, ದೈವೀ ಸತ್ಯದ ಮುಖವನ್ನು ನೋಡು–ವುದನ್ನು ಹೊರತುಪಡಿಸಿ ಉಳಿದದ್ದೆಲ್ಲವೂ ಅವನ ಮಗ್ನವಾಗಿಸುವ ಮನಸ್ಸಿಗೆ ಮತ್ತು ಜ್ಞಾನದ ಆತ್ಮಕ್ಕೆ ಗೌಣವಾಗುತ್ತದೆ ಇಲ್ಲವೆ ಯಾವ ಮಹತ್ವವನ್ನೂ ಹೊಂದಿ–ರುವುದಿಲ್ಲ, ಅತ್ಯಾವಶ್ಯಕವಾದ ಆ ಒಂದು ವಿಷಯಕ್ಕೆ ಅಡೆತಡೆ ಉಂಟು ಮಾಡುವ ಯಾವುದಕ್ಕೂ ಅನುವು ಮಾಡಿಕೊಡಲಾಗುವುದಿಲ್ಲ. ಚಿಂತಕನಿಗೆ ಸತ್ಯವನ್ನು ಅರಸುವ ಹಾಗೂ ಅದನ್ನು ತಾನು ಹಾಗೂ ಜಗತ್ತು ಒತ್ತಾಯ–ಪೂರ್ವಕವಾಗಿ ಅನುಸರಿಸುವಂತೆ ಮಾಡುವ ಕಾತರವಿರುತ್ತದೆ, ಅದರ ಪರಿಣಾಮ ಸ್ಥಾಪಿತವಾದ ಆಧಾರಗಳ ಮೇಲೆ, ಧರ್ಮ ನೈತಿಕತೆ ಸಮಾಜ ಇವುಗಳ ಮೇಲೆ ಏನಾಗಬಹುದು ಎಂಬುದರ ಬಗ್ಗೆ ಅವನು ಲಕ್ಷ್ಯಗೊಡುವುದಿಲ್ಲ. ಅವನು ದೈವೀ ಸತ್ಯದ ಶಬ್ದವನ್ನು ಅದರ ಕ್ರಿಯಾಶೀಲ ಪರಿಣಾಮಗಳನ್ನು (ಅವು ಏನೇ ಆಗಿರಲಿ) ಅಭಿವ್ಯಕ್ತ–ಪಡಿಸಬೇಕು, ಸರ್ವತಂತ್ರ ಸ್ವತಂತ್ರವಾದ ಇದು ಅತ್ಯಂತ ಸರ್ವತಂತ್ರ ಸ್ವತಂತ್ರವಾಗುವುದು, ಈ ಅನುಶಾಸನ ಅತ್ಯಂತ ಹೆಚ್ಚಿನ ಅನುಶಾಸನವಾಗುವುದು, ಆಂತರಿಕ ಕ್ರಿಯೆ ಬಲವತ್ತರವಾದಾಗ ಅದು ಬೌದ್ಧಿಕ ಅರಸುವಿಕೆಯ ಶೀತಲತೆಯನ್ನು ಅತಿಶಯಿಸುತ್ತದೆ ಮತ್ತು ಸತ್ಯವಾದ ಅನುಭವಕ್ಕಾಗಿ ಕಿಚ್ಚಿನ (fiery) ಹೆಣಗುವಿಕೆ, ಪ್ರಕಾಶಮಯ ಆಂತರಿಕ ಜೀವನ, ಹೊಸ ಸತ್ಯಪ್ರಜ್ಞೆಯಲ್ಲಿ ಜನ್ಮತಾಳುವಿಕೆ ಆಗುತ್ತದೆ. ಪ್ರಕಾಶಕ್ಕಾಗಿ ಮುಗ್ಧರಾದವರು, ಋಷಿ, ಜ್ಞಾನವನ್ನು ಅರಸುವ ಯೋಗಿ, ದಾರ್ಶನಿಕ ಇವರೆಲ್ಲರೂ ಜ್ಞಾನಕ್ಕಾಗಿ ಹಾಗೂ ಜ್ಞಾನದಲ್ಲಿ

ಜೀವಿಸುತ್ತಾರೆ, ಏಕೆಂದರೆ ಅವರು ಸತ್ಯ ಹಾಗೂ ಪ್ರಕಾಶಗಳ ಪರಿಪೂರ್ಣತೆಯನ್ನು ಬೆಂಬತ್ತಿರುತ್ತಾರೆ ಮತ್ತು ಅವರ ಮೇಲೆ ಅದರ ಹಕ್ಕು ಏಕೈಕ ಹಾಗೂ ಪರಿಪೂರ್ಣವಾಗಿರುತ್ತದೆ.

ಆ ಬೆಳವಣಿಗೆ, ದೈವೀ ಜನ್ಮ ಇಲ್ಲವೆ ಆಧ್ಯಾತ್ಮಿಕವಾಗಿ ತನ್ನನ್ನು ಮೀರಿ ಹೋಗುವಿಕೆ ಅದೇ ಪರಮೋಚ್ಚ ಪ್ರತಿಫಲ, ಅದು ಪೌರ್ವಾತ್ಯ ಮನಸ್ಸಿಗೆ ಯಾವಾಗಲೂ ಅತ್ಯುಚ್ಚ ಲಾಭದಾಯಕ ವಿಷಯವಾಗಿದೆ–ಅದು ಮಾನವ ಅಜ್ಞಾನದಿಂದ ಹೊರಗೆ ಬಂದು ದೈವೀ ಸ್ವ–ಜ್ಞಾನದಲ್ಲಿ ಬೆಳೆಯುವುದಾಗಿದೆ.

**(16/216–20)** **– ಶ್ರೀ ಅರವಿಂದರು**

*

## ದೈವೀಸತ್ಯವನ್ನು ಕುರಿತು ಈಶಾವಾಶ್ಯೋಪನಿಷತ್

ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖಮ್

ತತ್ ತ್ವಂ ಪೂಷನ್ ಅಪಾವೃಣು ಸತ್ಯಧರ್ಮಾಯ ದೃಷ್ಟಯೆ ॥ 14 ॥

ದೈವೀಸತ್ಯದ ಮುಖವನ್ನು ಪ್ರಜ್ವಲಿಸುವ ಸುವರ್ಣವರ್ಣದ ಮುಚ್ಚಳ ಮುಚ್ಚಿ ಹಾಕಿದೆ. ಆ ದೈವೀಸತ್ಯದ ನಿಯಮವನ್ನು ಓ ಪೋಷಕನೆ, ಅದರ ನಿಯಮಕ್ಕಾಗಿ ಹಾಗೂ ದರ್ಶನಕ್ಕಾಗಿ ತೆರೆದಿಡು.

**ಶ್ರೀ ಅರವಿಂದರ ವಿಶ್ಲೇಷಣೆ :**

ಈ ದೈವೀಸತ್ಯದ ಮುಖವನ್ನು* ಪ್ರಜ್ವಲಿಸುವ ಬಂಗಾರವರ್ಣದ ಮುಚ್ಚಳ ಮುಚ್ಚಿಹಾಕಿದೆ, ಎಂದರೆ ಮಾನವ ಪ್ರಜ್ಞೆಯ ದೃಷ್ಟಿಗೆ ಅದು ಗೋಚರಿಸುವುದಿಲ್ಲ. ಏಕೆಂದರೆ ನಾವು ಮಾನಸಿಕ ಸತ್ತೆಗಳಾಗಿದ್ದೇವೆ ಮತ್ತು ನಮ್ಮ ಅತ್ಯುಚ್ಚ ಮಾನವ ದೃಷ್ಟಿಯು ಕಲ್ಪನೆಗಳಿಂದ ಹಾಗೂ ಗ್ರಹಿಕೆಗಳಿಂದ ಕೂಡಿದೆ, ಅವು, ನಿಜವಾಗಿ, ಸತ್ಯದ ಕಿರಣಗಳನ್ನು ತಿಳಿದುಕೊಳ್ಳಲು ಜ್ಞಾನದ ಸಾಧನಗಳಾಗಿರುತ್ತವೆ; ಆದರೆ ಅವುಗಳ ಮೂಲಕ ಅಸ್ತಿತ್ವದ ಸತ್ಯದ ಸ್ವಭಾವವನ್ನು ಅರಿತುಕೊಳ್ಳಲಾಗುವುದಿಲ್ಲ, ಕೇವಲ

---

* ಪರಿಶುದ್ಧ ಅಂತರ್ಬೋಧೆಯ ಇಲ್ಲವೆ ಆಧ್ಯಾತ್ಮಿಕ ರಹಸ್ಯ ಜ್ಞಾನದ ದೈವೀ ವಿಚಾರ ದೈವೀ ಸತ್ತೆಯಲ್ಲಿ ಹಾಗೆಯೇ ದೈವೀ ಸಂಭೂತಿಯಲ್ಲಿ ತನ್ನನ್ನು ಕಂಡುಕೊಳ್ಳುತ್ತದೆ. ತನ್ನದೇ ಸಂಕೇತವೆಂದು ಹೊರಚೆಲ್ಲುವ ಆ ವಿಚಾರ ಅಸ್ತಿತ್ವದೊಂದಿಗೆ ಏಕವಾಗಿರುತ್ತದೆ ಮತ್ತು ಆದ್ದರಿಂದ ರೂಪದ ಹಿಂದಿರುವ ದೈವೀ ಜ್ಞಾನದ ಸತ್ಯವನ್ನು ಅದರೊಡನೆ ಯಾವಾಗಲೂ ಕರೆದೊಯ್ಯುತ್ತದೆ.



ಸತ್ಯದ ರೂಪವನ್ನು ಅರಿತುಕೊಳ್ಳಬಹುದು. ಅವುಗಳ ಮೂಲಕ ನಾವು ವಸ್ತು–ವಿಷಯಗಳ ತೋರಿಕೆಯ ಜ್ಞಾನವನ್ನು ವ್ಯವಸ್ಥೆಗೆ ಒಳಪಡಿಸುತ್ತೇವೆ ಮತ್ತು ಅವುಗಳ ಹಿಂದಿರುವ ಜ್ಞಾನದ ಬಗ್ಗೆ ನಿರ್ಣಯ ಕೈಕೊಳ್ಳುತ್ತೇವೆ. ನಿಜವಾದ ಜ್ಞಾನವೆಂದರೆ 'ಅಸ್ತಿತ್ವದ ಸತ್ಯ' ಕೇವಲ ಅದರ ರೂಪದ ಇಲ್ಲವೆ ತೋರಿಕೆಯ ಸತ್ಯವಲ್ಲ.

ಕಲ್ಪನೆಗಳ ಹಾಗೂ ಗ್ರಹಿಕೆಗಳ ಈ ಪ್ರಜ್ವಲ ರೂಪ ತಾಳುವಿಕೆಯನ್ನು ನಿವಾರಿಸಲು ಸೂರ್ಯ ನಮ್ಮಲ್ಲಿ ಕಾರ್ಯ ಕೈಕೊಂಡರೆ ನಾವು ನಿಜವಾದ ಸತ್ಯ–ವನ್ನು ತಲುಪಬಹುದು, ಅವುಗಳ ಸ್ಥಾನದಲ್ಲಿ ಸ್ವ–ದರ್ಶನ ಮತ್ತು ಎಲ್ಲದರ ದರ್ಶನವನ್ನು ಇರಿಸುತ್ತಾನೆ.

ಇದಕ್ಕಾಗಿ ದೈವೀಸತ್ಯದ ನಿಯಮ ಮತ್ತು ಕ್ರಿಯೆ ನಮ್ಮಲ್ಲಿ ಪ್ರಕಟವಾಗಬೇಕು, ವಸ್ತು–ವಿಷಯಗಳು ಹೇಗಿರುತ್ತವೆಯೋ ಹಾಗಿರುವುದನ್ನು ನೋಡಲು ಶಕ್ತರಾಗ–ಬೇಕು. ನಮ್ಮ ಸದ್ಯದ ಕ್ರಿಯೆಗಳಲ್ಲಿ ಸ್ವ–ಜ್ಞಾನ ಹಾಗೂ ಸಂಕಲ್ಪಗಳು ವಿಭಜಿತ–ಗೊಂಡಿವೆ. ಇತರರಿಂದ ಪ್ರತ್ಯೇಕವಾದ ನಮ್ಮದೊಂದು ಅಸ್ತಿತ್ವವಿದೆ ಎಂಬ ಮೂಲಭೂತ ಮಿಥ್ಯೆಯಿಂದ ನಾವು ಪ್ರಾರಂಭಿಸುತ್ತೇವೆ. ಪ್ರತ್ಯೇಕ ಸತ್ತೆಗಳೊಡನಿರುವ ಸಂಬಂಧಗಳನ್ನು ಅವರ ಪ್ರತ್ಯೇಕತೆಯಲ್ಲಿ ತಿಳಿದುಕೊಳ್ಳಲು ಪ್ರಯತ್ನಿಸುತ್ತೇವೆ ಮತ್ತು ವ್ಯಕ್ತಿಗತ ಏಕತೆಗಾಗಿ ಆ ರೀತಿ ರೂಪುಗೊಂಡ ಜ್ಞಾನದ ಆಧಾರದಿಂದ ಕಾರ್ಯ ಕೈಕೊಳ್ಳುತ್ತೇವೆ. ನಮ್ಮ ಅಸ್ತಿತ್ವದ ಪೂರ್ಣತೆ ಉಳಿದೆಲ್ಲವನ್ನು ಒಳಗೊಂಡದ್ದನ್ನು ಪೂರ್ಣತೆಯ ಕ್ರಿಯೆಯಿಂದ ಸೃಷ್ಟಿಯಾದ ಅದರ ರೂಪಗಳನ್ನು, ಅದರ ಸಾಮರ್ಥ್ಯಗಳು ಈ ಪೂರ್ಣತೆಯಲ್ಲಿ ಹಾಗೂ ಪೂರ್ಣತೆಯಿಂದ ಕಾರ್ಯ ಕೈಕೊಳ್ಳುವುದನ್ನು ನೋಡಿದರೆ ದೈವೀ ಸತ್ಯದ ನಿಯಮ ನಮ್ಮಲ್ಲಿ ಕಾರ್ಯ ಮಾಡಲು ಸಾಧ್ಯವಾಗುವುದು. ನಮ್ಮ ಆಂತರಿಕ ಹಾಗೂ ಬಾಹ್ಯ ಕ್ರಿಯೆ ಆಗ ಸರಿಯಾಗಿಯೇ ಸ್ವಾಭಾವಿಕವಾಗಿ, ನೇರವಾಗಿ ನಮ್ಮ ಸ್ವ–ಅಸ್ತಿತ್ವದಿಂದ, ವಸ್ತು–ವಿಷಯಗಳ ಸತ್ಯದಿಂದ ಹೊರಬರುತ್ತದೆ, ಮಧ್ಯವರ್ತಿ ತತ್ವಕ್ಕೆ ವಿಧೇಯವಾಗಿ ಅಲ್ಲ. ಅ ತತ್ವ ಅದರ ಸ್ವಭಾವದಲ್ಲಿ ಮಿಥ್ಯೆಗೊಳಪಡಿಸುವ ಪ್ರತಿಫಲನವಾಗಿರುತ್ತದೆ.

*

ಏನೇ ಇರಲಿ, ನಮ್ಮ ಸಾಮಾನ್ಯ ಕಾರ್ಯದಲ್ಲಿಯೂ ಕೂಡ, ದೈವೀ ಸತ್ಯದ ಪ್ರಾರಂಭ ಇಲ್ಲವೆ ಕನಿಷ್ಠ ಪಕ್ಷ ಅದರ ಬೀಜ ನಮ್ಮನ್ನು ಮುಕ್ತಗೊಳಿಸುವುದಕ್ಕಾಗಿ ಇರಲೇಬೇಕು. ಪ್ರತಿಯೊಂದು ಕ್ರಿಯೆ ಹಾಗೂ ಗ್ರಹಿಕೆಯ ಹಿಂದೆ ಒಂದು ಅಂತರ್ಬೋಧೆ, ಒಂದು ಸತ್ಯವಿರುತ್ತದೆ, ಅದನ್ನು ರೂಪದಲ್ಲಿ ಸತತ ಮಿಥ್ಯೆಗೊಳ–

ಪಡಿಸಿದರೆ, ಅದು ಸಾರದಲ್ಲಿ ಇನ್ನೂ ತನ್ನನ್ನು ರಕ್ಷಿಸಿಕೊಳ್ಳುತ್ತದೆ ಮತ್ತು ಹೆಚ್ಚುತ್ತಿರುವ ಪ್ರಕಾಶ ಹಾಗೂ ಭವ್ಯತೆಯಿಂದ ನಮ್ಮನ್ನು ಪ್ರಕಟಣೆಯಲ್ಲಿರುವ ಸತ್ಯದತ್ತ ಕರೆದೊಯ್ಯುತ್ತದೆ. ಈ ಎಲ್ಲ ವ್ಯತ್ಯಾಸ ಹಾಗೂ ವಿಭಜನೆಯ ಕ್ಲೇಶದ ಹಿಂದೆ ಏಕತೆಗೊಳಪಡಿಸುವ ಒತ್ತಾಯಪೂರ್ವಕವಾದ ಪ್ರವೃತ್ತಿ ಇದೆ. ಅದನ್ನೂ ಕೂಡ ಪ್ರತ್ಯೇಕತೆಯ ಪರಿಣಾಮ ಮಿಥ್ಯೆಗೊಳಪಡಿಸುತ್ತದೆ, ಆದಾಗ್ಯೂ ಅದು ಪಟ್ಟುಬಿಡದೆ, ನಮ್ಮ ಸತ್ತೆಯಲ್ಲಿ ಹಾಗೂ ಸಂಕಲ್ಪದಲ್ಲಿ ನಮ್ಮ ಜ್ಞಾನದ ಕೊನೆಯ ಸಮಗ್ರತೆಯತ್ತ ಕರೆದೊಯ್ಯುತ್ತದೆ.

ಸೂರ್ಯ ಪೋಷಕನು, ಹೆಚ್ಚಿಸುವವನೂ ಆಗಿದ್ದಾನೆ. ಅವನ ಕಾರ್ಯ ವಿಸ್ತರಿಸಿಕೊಂಡ ವಿಭಜಿತ ಕ್ರಿಯೆ ಹಾಗೂ ಗ್ರಹಿಕೆಗಳು ಸಮಗ್ರ ಸಂಕಲ್ಪ ಹಾಗೂ ಜ್ಞಾನ ಇವುಗಳಲ್ಲಿ ಪರಿಣಾಮ ಕಂಡುಕೊಳ್ಳುವಂತೆ ಮಾಡುವುದಾಗಿರಬೇಕು. ಅವನು ಏಕೈಕ ದೃಷ್ಟಾರ. ಜ್ಞಾನದ ಇತರ ರೂಪಗಳ ಸ್ಥಾನದಲ್ಲಿ ಅವನ ಏಕಗೊಳಿಸುವ ದೃಷ್ಟಿ ನಾವು ಕೊನೆಗೆ ಏಕತೆಯನ್ನು ತಲುಪುವುದಕ್ಕೆ ನಮ್ಮನ್ನು ಶಕ್ತರನ್ನಾಗಿ ಮಾಡುತ್ತದೆ. ಎಲ್ಲದರಲ್ಲಿಯೂ ಏಕೈಕನಿದ್ದಾನೆ, ಎಲ್ಲವೂ ಏಕೈಕ–ನಾದವನು ಎಂಬ ಪೂರ್ಣತೆಯನ್ನು ಕುರಿತಾದ ಪೂರ್ಣತೆಯ ಬಗೆಗಿನ ಆ ಅಂತರ್ಬೋಧೆಯ ದರ್ಶನ ನಮ್ಮಲ್ಲಿ ಕ್ರಿಯೆಯ ಸರಿಯಾದ ನಿಯಮವನ್ನು ಮತ್ತು ದೈವೀ ಸತ್ಯದ ನಿಯಮವನ್ನು ವಿಧಿಸುತ್ತದೆ.

**(12/67,124–25)** **– ಶ್ರೀ ಅರವಿಂದರು**

*

## ಋಗ್ವೇದದಲ್ಲಿ ದೈವೀಸತ್ಯದ ಕಲ್ಪನೆ

**ಅಗ್ನಿ ಮತ್ತು ದೈವೀಸತ್ಯ :**

ಉಪನಿಷತ್ತುಗಳಲ್ಲಿ ಕಂಡುಬರುವ ಆದಿಕಾಲದ ವೇದಾಂತದ ಬೋಧನೆಯಲ್ಲಿ ದೈವೀ ಸತ್ಯದ ಬಗ್ಗೆ ಒಂದು ಕಲ್ಪನೆ ಇರುವುದನ್ನು ನಾವು ನೋಡುತ್ತೇವೆ. ಅದನ್ನು ಬಹಳಷ್ಟು ಸಲ ವೇದಗಳಲ್ಲಿ ಬರುವ ಸ್ತೋತ್ರಪಾಠ (hymn) ಗಳಿಂದ ಆಯ್ದು–ಕೊಂಡು ಸೂತ್ರರೂಪದಲ್ಲಿ ಅಭಿವ್ಯಕ್ತಪಡಿಸಲಾಗಿರುತ್ತದೆ; 'ಸತ್ಯಮ್, ಋತಮ್, ಬೃಹತ್' ಸತ್ಯವಾದದ್ದು, ಸರಿಯಾದದ್ದು ಮತ್ತು ವಿಶಾಲವಾದದ್ದು, ಎಂಬುದು ಅಂತಹ ಒಂದು ಅಭಿವ್ಯಕ್ತಿ. ದೈವೀಸತ್ಯ ಪರಮಾನಂದದತ್ತ, ಅಮರತ್ವದತ್ತ ಕೊಂಡೊಯ್ಯುವುದಕ್ಕೆ ಮಾರ್ಗವಾಗಿದೆ ಎಂದು ವೇದದಲ್ಲಿ ಹೇಳಲಾಗಿದೆ. ಉಪನಿಷತ್ತುಗಳಲ್ಲಿಯೂ ಕೂಡ ದೈವೀ ಸತ್ಯದ ಮಾರ್ಗದ ಮೂಲಕವೇ ಋಷಿ



ಅಥವಾ ಕವಿ (seer) ಆಚೆಗೆ ಸಾಗಿ ಹೋಗುತ್ತಾನೆ, ಮಿಥ್ಯೆಯಿಂದಾಚೆಗೆ ಸಾಗಿ ಹೋಗುತ್ತಾನೆ ಮತ್ತು ಮರ್ತ್ಯ ಸ್ಥಿತಿಯಿಂದ ಅಮರತ್ವದ ಸ್ಥಿತಿಗೆ ಸಾಗಿ ಹೋಗುತ್ತಾನೆ. ಆದ್ದರಿಂದ ಅದೇ ಕಲ್ಪನೆ ಕುರಿತಾದ ಪ್ರಶ್ನೆ ವೇದದಲ್ಲಿ ಹಾಗೂ ವೇದಾಂತದಲ್ಲಿ ಇದೆ ಎಂದು ಭಾವಿಸುವ ಹಕ್ಕನ್ನು ನಾವು ಪಡೆಯುತ್ತೇವೆ.

ಈ ಮನಶ್ಶಾಸ್ತ್ರೀಯ ಕಲ್ಪನೆ ಒಂದು ಸತ್ಯ ಕುರಿತಾಗಿರುತ್ತದೆ, ಆ ಸತ್ಯ ದೈವೀ ಸಾರದ್ದಾಗಿರುತ್ತದೆ, ನೈತಿಕ ಸಂವೇದನೆಯದು ಹಾಗೂ ತೋರಿಕೆಯದು ಆಗಿರುವುದಿಲ್ಲ. ಅದು 'ಸತ್ಯಮ್', ಸತ್ತೆಯ ಸತ್ಯ, ಅದು ದೇಹ, ಮನಸ್ಸುಗಳ ಕ್ರಿಯೆಯಲ್ಲಿ ಋತಮ್–ಸರಿಯಾದದ್ದು, ದೈವೀ ಸತ್ತೆಯ ಸತ್ಯ ದೇಹ, ಮನಸ್ಸುಗಳ ಕ್ರಿಯೆಯನ್ನು ಸರಿಯಾದ ರೀತಿಯಲ್ಲಿ ಕ್ರಮಬದ್ಧಗೊಳಿಸುತ್ತದೆ. ಅದು 'ಬೃಹತ್', ವಿಶ್ವಂಭರ ಸತ್ಯ, ಅನಂತನಿಂದ ನೇರವಾಗಿ, ವಿರೂಪಕ್ಕೊಳಗಾಗದೆ ಹೊರಹೊಮ್ಮಿ ಬಂದದ್ದು, ಅದಕ್ಕೆ ಅನುಗುಣವಾದ ಪ್ರಜ್ಞೆ ಕೂಡ ಬೃಹತ್ತಾಗಿರುತ್ತದೆ, ಸೀಮಿತತೆಯ ಆಧಾರದ ಮೇಲೆ ಸ್ಥಾಪಿತವಾದ ಇಂದ್ರಿಯ ಪ್ರಜ್ಞೆಗೆ ವಿರುದ್ಧವೆನಿಸುವ ರೀತಿಯಲ್ಲಿ ವಿಶಾಲವಾಗಿರುತ್ತದೆ, ಅವುಗಳಲ್ಲಿ ಒಂದನ್ನು ವಿಶಾಲವಾಗಿರುವ 'ಬ್ರಹ್ಮ' ನೆಂದು ಇನ್ನೊಂದನ್ನು 'ಅಲ್ಪ' ಎಂದರೆ ಚಿಕ್ಕದಾದದ್ದೆಂದು ವರ್ಣಿಸಲಾಗಿದೆ. ಅತಿಮಾನಸ–ದ್ದಾದ ಇಲ್ಲವೆ ಸತ್ಯ ಪ್ರಜ್ಞೆಯದಾದ ಇದಕ್ಕೆ ಇನ್ನೊಂದು ಹೆಸರು 'ಮಹಸ್' ಎಂದಿದೆ. ಅದರರ್ಥ ಕೂಡ ವಿಶಾಲವಾದದ್ದು ಎಂದಾಗುತ್ತದೆ. ಮಿಥ್ಯೆಗಳಿಂದ ತುಂಬಿಕೊಂಡ ಸಂವೇದನೆಯ ಹಾಗೂ ತೋರಿಕೆಯ ವಾಸ್ತವತೆಗಳನ್ನು ('ಅನೃತಮ್' ಎಂದರೆ ಅಸತ್ಯವಾದದ್ದು, ಇಲ್ಲವೆ ಮಾನಸಿಕ ಹಾಗೂ ದೈಹಿಕ ಚಟುವಟಿಕೆಯಲ್ಲಿ ಸತ್ಯವನ್ನು ತಪ್ಪು ರೀತಿಯಲ್ಲಿ ಅನ್ವಯಿಸಿದ್ದು) ಕುರಿತು ಹೇಳುವುದಾದರೆ ನಮಗೆ ಉಪಕರಣ–ಗಳೆಂದಾಗಿ ಇಂದ್ರಿಯಗಳಿವೆ, ಇಂದ್ರಿಯ ರೂಪದ ಮನಸ್ಸಿದೆ, ಅವುಗಳು ಒದಗಿಸಿದ ಸಾಕ್ಷ್ಯಾಧಾರಗಳ ಮೇಲೆ ಕಾರ್ಯ ಕೈಕೊಳ್ಳುವ ಬುದ್ಧಿಮತ್ತೆಯಿದೆ, ಹಾಗೆಯೇ ಇವುಗಳಿಗೆ ಅನುಗುಣವಾಗಿ ಸತ್ಯಪ್ರಜ್ಞೆಗೆ ದೃಷ್ಟಿ, ಸೃಷ್ಟಿ ಮತ್ತು ವಿವೇಕಗಳೆಂಬ ಸಹಜ ಶಕ್ತಿಗಳಿವೆ, ಎಂದರೆ ಸತ್ಯದ ನೇರ ದರ್ಶನ, ಅದರ ಶಬ್ದವನ್ನು ನೇರವಾಗಿ ಕೇಳಿಸಿಕೊಳ್ಳುವುದು, ಸರಿಯಾದದ್ದನ್ನು ನೇರವಾಗಿ ಭಿನ್ನಪಡಿಸಿ ನೋಡುವುದು. ಈ ಸತ್ಯಪ್ರಜ್ಞೆಯನ್ನು ವಶದಲ್ಲಿಟ್ಟುಕೊಂಡ ಇಲ್ಲವೆ ಈ ಸಹಜ ಶಕ್ತಿಗಳ ಕ್ರಿಯೆಗೆ ತೆರೆದಿಟ್ಟು ಕೊಂಡ ಯಾರೇ ಆಗಲಿ, ಅವರು ಋಷಿ ಇಲ್ಲವೆ ಕವಿಯಾಗಿರುತ್ತಾರೆ. ಸತ್ಯದ ಕಲ್ಪನೆಗಳಾದ 'ಸತ್ಯಮ್' ಮತ್ತು 'ಋತಮ್' ಇವುಗಳನ್ನು ವೇದಗಳ ಪ್ರಾರಂಭದಲ್ಲಿ ಬರುವ ಸ್ತೋತ್ರಪಾಠಗಳಿಗೆ ಅನ್ವಯಿಸಬೇಕು.

ಹೀಗೆ ಸಿದ್ಧಿಸಿಕೊಂಡ ಅಮರತ್ವದ ಸ್ಥಿತಿ, ಪರಿಪೂರ್ಣ ದೈವೀಸತ್ಯ ಹಾಗೂ ಸರಿಯಾಗಿರುವಿಕೆ ಇವುಗಳ ಆಧಾರದ ಮೇಲೆ ಸ್ಥಾಪಿತವಾಗಿರುತ್ತದೆ, 'ಸತ್ಯಮ್, ಋತಮ್'. "ಕಾಣಿಕೆ ನೀಡುವವನಿಗಾಗಿ ನೀನು ಸೃಷ್ಟಿಸಿದ ಒಳ್ಳೆಯದು (ಸೌಖ್ಯ) ಓ ಅಗ್ನಿಯೆ, ನಿನ್ನ ಸತ್ಯವಾಗಿರುತ್ತದೆ." ಬೇರೆ ಶಬ್ದಗಳಲ್ಲಿ ಹೇಳುವುದಾದರೆ ಅಗ್ನಿಯ ಸ್ವಭಾವವಾದ ಈ ಸತ್ಯದ ಸಾರ ದುಷ್ಟವಾದುದರಿಂದ ಮುಕ್ತಿ, ಪರಿಪೂರ್ಣವಾಗಿ ಒಳ್ಳೆಯದಾದುದರ ಹಾಗೂ ಸೌಖ್ಯದ ಸ್ಥಿತಿ, ಇದನ್ನು ಋತಮ್ ತನ್ನಲ್ಲಿ ಕೊಂಡೊ–ಯ್ಯುತ್ತದೆ, ಮರ್ತ್ಯನಾದವನು ದೈವೀ ಪುರೋಹಿತನಾದ ಅಗ್ನಿಯ ಮೂಲಕ ಯಜ್ಞ ವನ್ನು ಅರ್ಪಿಸಿದಾಗ ಅವನಲ್ಲಿ ಆ ಸ್ಥಿತಿಯನ್ನು ಸೃಷ್ಟಿಸಲಾಗುತ್ತದೆ.

ಹೀಗೆ ವೇದದ ಸ್ತೋತ್ರಪಾಠಗಳ ಮೊದಲಿನ ನಾಲ್ಕು ಶ್ಲೋಕಗಳಲ್ಲಿ ನಾವು ವೈದಿಕ ಋಷಿಗಳ ಮುಖ್ಯ ವಿಚಾರಗಳ ಮೊದಲ ಸೂಚನೆಯನ್ನು ಕಂಡು–ಕೊಳ್ಳುತ್ತೇವೆ.–ಅತಿಮಾನಸದ, ದೈವಿಕವಾದ ಸತ್ಯಪ್ರಜ್ಞೆಯ ಕಲ್ಪನೆ, ಮನುಷ್ಯನನ್ನು ಮರ್ತ್ಯ ಮನಸ್ಸಿನ ಮಿಥ್ಯೆಗಳಿಂದ ಮೇಲಕ್ಕೆತ್ತಲು ದೈವೀ ಸತ್ಯದ ಸಾಮರ್ಥ್ಯಗಳಾದ ದೇವತೆಗಳಿಗೆ ಆಹ್ವಾನ ನೀಡುವುದು, ಪರಿಪೂರ್ಣವಾಗಿ ಒಳ್ಳೆಯದಾದ ಹಾಗೂ ಸೌಖ್ಯಪ್ರದವಾದ ಅಮರತ್ವದ ಸ್ಥಿತಿಯನ್ನು ದೈವೀ ಸತ್ಯದಲ್ಲಿ ಹಾಗೂ ಅದರ ಮೂಲಕ ಸಿದ್ಧಿಸಿಕೊಳ್ಳುವುದು, ಮನುಷ್ಯ ಆಂತರಿಕ ಯಜ್ಞವನ್ನು ಕೈಕೊಳ್ಳುವುದು, ತನ್ನಲ್ಲಿರುವುದನ್ನು, ತಾನೇನಾಗಿರುವುದನ್ನು ಮನುಷ್ಯನಾದವನು ದೈವೀ ಸಂಸರ್ಗದ ಸಾಧನವೆಂದು ಅಮರನಾದವನಿಗೆ ಅರ್ಪಿಸುವುದು. ಉಳಿದೆಲ್ಲ ವೈದಿಕ ವಿಚಾರ, ಅದರ ಆಧ್ಯಾತ್ಮಿಕ ಭಾಗಗಳಲ್ಲಿ, ಈ ಪ್ರಮುಖ ಕಲ್ಪನೆಗಳ ಸುತ್ತ ಗುಂಪುಗೊಂಡಿದೆ.

*

**ಸರಸ್ವತಿ, ಅವಳ ತಂಡ ಹಾಗೂ ದೈವೀಸತ್ಯ :**

ಭಾರತಿ, ಸರಸ್ವತಿ ಮತ್ತು ಇಳಾ ಈ ಮೂರು ದೇವಿಯರು ಮನುಷ್ಯನಿಗಾಗಿ ಪರಮಾನಂದ ಮತ್ತು, ಮಯಸ್ (Mayas) ಜನ್ಮತಾಳಿ ಬರುವಂತೆ ಮಾಡುತ್ತಾರೆ. ದೈವೀಸತ್ಯ ಮತ್ತು ಆನಂದ ಇವುಗಳ ನಡುವೆ ಸತತವಾಗಿರುವ ಸಂಬಂಧ ಕುರಿತು ವೈದಿಕ ದೃಷ್ಟಾರರು ಕಲ್ಪನೆ ಮಾಡಿಕೊಂಡುದದನ್ನು ಕುರಿತು ನಾನು ಈಗಾಗಲೆ ಒತ್ತಾಯಕೊಟ್ಟು ಹೇಳಿದ್ದೇನೆ. ಮನುಷ್ಯನಲ್ಲಿ ಅನಂತ ಪ್ರಜ್ಞೆಯ ಅರುಣೋದಯ–ವಾದಾಗ, ಅವನು ನೋವು, ವೇದನೆಗಳ ಈ ದುಷ್ಟ ಕನಸು, ಈ ವಿಭಜಿತ ಸೃಷ್ಟಿ ಇವುಗಳೊಳಗಿಂದ ಹೊರಗೆ ಬಂದು ಈ ದಿವ್ಯಾನಂದವನ್ನು ತಲುಪುತ್ತಾನೆ, ಈ



ಆನಂದದ ಸ್ಥಿತಿಯನ್ನು ವೇದವು ಭದ್ರಮ್, ಮಯಸ್ (ಪ್ರೇಮ ಮತ್ತು ದಿವ್ಯಾನಂದ), ಸ್ವಸ್ತಿ (ಅಸ್ತಿತ್ವ ಕುರಿತು ಒಳ್ಳೆಯದಾದದ್ದು, ಸರಿಯಾದ ಸತ್ತೆ) ಎಂಬ ಶಬ್ದಗಳಿಂದ ವರ್ಣಿಸಿದೆ. ಹಾಗೆಯೇ ತಾಂತ್ರಿಕ ರೀತಿಯಲ್ಲಿ ಕಡಿಮೆ ಬಳಕೆ–ಯಲ್ಲಿರುವ ವಾರ್ಯಮ್, ರಾಯಃಗಳಂತಹ ಶಬ್ದಗಳಿಂದಲೂ ಕೂಡ ವರ್ಣಿಸಿದೆ. ಋಷಿಗೆ ದೈವೀಸತ್ಯವು ದಾಟಿ ಹೋಗುವ ಮಾರ್ಗ, ಹೊರಕೋಣೆ*, ದೈವೀ ಸತ್ಯದ ದಿವ್ಯಾನಂದವೇ ಗುರಿ ಇಲ್ಲವೆ ದೈವೀಸತ್ಯದ ತಳಹದಿ, ದಿವ್ಯಾನಂದ ಪರಮೋಚ್ಚ ಪರಿಣಾಮ.

**ಅರುಣೋದಯ ಹಾಗೂ ದೈವೀಸತ್ಯ :**

ಉಚ್ಚತರ ಇಲ್ಲವೆ ವಿಭಜಿತಗೊಂಡಿರದ ದೈವೀ ಪ್ರಜ್ಞೆ, ಯಾವಾಗಲೂ ದೈವೀ ಸತ್ಯದ ಪ್ರಕಾಶಿಸುವ ಅರುಣೋದಯವಾಗಿರುತ್ತದೆ; ಉಷಾ ಆ ಪ್ರಕಾಶಿಸುವ ಅರುಣೋದಯವಾಗಿದ್ದರೆ, ಆಗ ಅವಳ ಬರುವಿಕೆಯ ಪ್ರಸ್ತಾಪವನ್ನು ಮತ್ತೆ, ಮತ್ತೆ ಋಗ್ವೇದದ ಶ್ಲೋಕಗಳಲ್ಲಿ ನಾವು ಕಂಡುಕೊಳ್ಳಲೇಬೇಕಾಗುತ್ತದೆ, ಆ ಬರುವಿಕೆ ಸತ್ಯದ ವಿಚಾರ, 'ಋತಮ್' ದೊಂದಿಗೆ ಕೂಡಿಕೊಂಡಿರುತ್ತದೆ ಮತ್ತು ಇಂತಹ ಜತೆಗೂಡುವಿಕೆ ಪುನರಾವರ್ತಿಸಿದ್ದು ಹೀಗಿದೆ: "ದೈವೀಸತ್ಯದ ಮಾರ್ಗವನ್ನು ಪರಿಣಾಮಕಾರಿಯಾಗಿ ಅನುಸರಿಸುವ" ಋತಸ್ಯ ಪಂಥಾಮ್ ಅನ್ವೇತಿ ಸಾಧು. ಇಲ್ಲಿ 'ಋತಮ್' ಶಬ್ದಕ್ಕೆ ಸೂಚಿಸಲಾದ ವೃತಾಚರಣೆಯ ಇಲ್ಲವೆ ಪ್ರಕೃತಿಯ ವಿಧಾನದ ಅರ್ಥ ಅನ್ವಯವಾಗುವುದಿಲ್ಲ. ಅರುಣೋದಯ ಯಜ್ಞದ ಮಾರ್ಗವನ್ನು ಇಲ್ಲವೆ ಜಲದ ಮಾರ್ಗವನ್ನು ಅನುಸರಿಸುತ್ತದೆ ಎಂದು ಸತತ ದೃಢೀಕರಿಸುವುದಕ್ಕೆ ಅರ್ಥವಿರುವುದಿಲ್ಲ. ನಾವು ಸ್ಪಷ್ಟ ಪ್ರಾಮುಖ್ಯತೆಯಿಂದ ತಪ್ಪಿಸಿಕೊಳ್ಳಬೇಕಾದರೆ 'ಪಂಥಾ ಋತಸ್ಯ' ಎಂದರೆ ದೈವೀಸತ್ಯದ ಮಾರ್ಗವಲ್ಲ, ಆದರೆ ಅದು ಸೂರ್ಯನದು ಎಂದು ಅರ್ಥಮಾಡಿಕೊಳ್ಳುವುದನ್ನು ಆಯ್ದುಕೊಳ್ಳಬೇಕಾಗುತ್ತದೆ. ಅದಕ್ಕೂ ಹೆಚ್ಚಾಗಿ ವೇದ ಉಷೆಯ ಮಾರ್ಗವನ್ನು ಸೂರ್ಯ ಅನುಸರಿಸುತ್ತಾನೆ ಎಂದು ಹೇಳುತ್ತದೆ. ಭೌತಿಕ ಅರುಣೋದಯವನ್ನು ಅವಲೋಕಿಸಿದವರಿಗೆ ಇದು ಸ್ವಾಭಾವಿಕ ಪ್ರತೀಕವೆಂದು ಕಂಡುಬರುವುದು. ಅಲ್ಲದೆ ಆ ಪದಗುಚ್ಛ ಸ್ಪಷ್ಟವಾಗಿ ಇನ್ನಿತರ ಪದಗುಚ್ಛಗಳಲ್ಲಿ ದೈವೀ ಸತ್ಯದ ಮಾರ್ಗವೆಂದು ಅರ್ಥವಾಗದಿದ್ದರೂ, ಮನಶ್ಶಾಸ್ತ್ರೀಯ ಪ್ರಾಮುಖ್ಯತೆಯು ಇನ್ನೂ ಮಧ್ಯೆ ಪ್ರವೇಶಿಸುತ್ತದೆ, ಏಕೆಂದರೆ ಆಗ

* ಮುಖ್ಯವಾದ ಕೋಣೆಯನ್ನು ಪ್ರವೇಶಿಸುವುದಕ್ಕೆ ಮೊದಲು ಇರುವ ಕಾಯುವ ಕೋಣೆ.

ಪ್ರಕಾಶದ ಅರುಣೋದಯ ದೈವೀಸತ್ಯವಾದ ಇಲ್ಲವೆ ಸತ್ಯದ ಪ್ರಭುವಾದ ಸೂರ್ಯನನ್ನು ಎಂದರೆ ಸವಿತೃವನ್ನುಅನುಸರಿಸುತ್ತದೆ ಎಂಬ ಅರ್ಥ ಕೊಡುತ್ತದೆ.

*

ನಮ್ಮಲ್ಲಿ ನಿಖರವಾದ ಅದೇ ವಿಚಾರವಿದೆ, ಅದನ್ನು ಪುನರಾವರ್ತಿಸಲಾಗಿದೆ, ಆದರೆ 1.124.3ರಲ್ಲಿ ಅದನ್ನು ಇನ್ನೂ ಹೆಚ್ಚು ಸ್ಪಷ್ಟ ಮತ್ತು ಹೆಚ್ಚು ಪೂರ್ಣ ಮನಶ್ಶಾಸ್ತ್ರೀಯ ಸೂಚನೆಗಳೊಂದಿಗೆ ಮಾಡಲಾಗಿದೆ, ಋತಸ್ಯ ಪಂಥಾಮ್ ಅನ್ವೇತಿ ಸಾಧು, ಪ್ರಜಾನತೀವ ನ ದಿಶೋ ಮಿನಾತಿ: "ಅವಳು ದೈವೀಸತ್ಯದ ಮಾರ್ಗಕ್ಕನು–ಸಾರವಾಗಿ ಮತ್ತು ಅರ್ಥಮಾಡಿಕೊಂಡಿರುವವರ ಹಾಗೆ ಚಲಿಸುತ್ತಾಳೆ, ಅವಳು ಕ್ಷೇತ್ರಗಳನ್ನು ಮಿತಿಗೊಳಪಡಿಸುವುದಿಲ್ಲ."

*

ದೈವೀ ಸತ್ಯದ ವಿಚಾರ ಸತತ ಈ ಪ್ರಕಾಶಮಯ ದೇವಿ ಉಷಾಳೊಂದಿಗೆ ಜತೆಗೂಡಿರುತ್ತದೆ. ಸ್ವರ್ಗದ ಬೆಳಕುಗಳಿಂದ ಆಕೆ ಪೂರ್ಣ ದೈವೀಸತ್ಯವೆಲ್ಲವನ್ನೂ ಜಾಗ್ರತಗೊಳಿಸುತ್ತಾಳೆ. ಅವಳು ದೈವೀಸತ್ಯದ ಶಬ್ದಗಳನ್ನು ಉಚ್ಚರಿಸುತ್ತ ಬರುತ್ತಾಳೆ, ಅವಳ ಅರುಣೋದಯಗಳು ಪ್ರವೇಶಿಸುವಾಗ ಪ್ರಕಾಶಮಯವಾಗಿರುತ್ತವೆ, ಏಕೆಂದರೆ ದೈವೀಸತ್ಯದಿಂದ ಅವೆಲ್ಲವೂ ಜನ್ಮತಾಳಿ ಬಂದುದರ ಕಾರಣದಿಂದಾಗಿ ಅವು ಸತ್ಯವಾದವುಗಳೇ ಆಗಿರುತ್ತವೆ, ದೈವೀ ಸತ್ಯದ ಆಸನದಿಂದ ಅರುಣೋದಯಗಳು ಜಾಗ್ರತಗೊಳ್ಳುತ್ತವೆ. ಉಷಾ ಪರಿಪೂರ್ಣ ಸತ್ಯಗಳ ನೇತಾರಳಾಗಿರುತ್ತಾಳೆ, ಅವಳು ವಿವಿಧ ಬಗೆಯ ಪ್ರಕಾಶವುಳ್ಳ ವಸ್ತು–ವಿಷಯಗಳಲ್ಲಿ ಗ್ರಹಿಕೆ ಎಚ್ಚತ್ತು–ಕೊಳ್ಳುವಂತೆ ಮಾಡುತ್ತಾಳೆ ಮತ್ತು ಎಲ್ಲ ದ್ವಾರಗಳನ್ನು ತೆರೆದಿರಿಸುತ್ತಾಳೆ. ಬಲಿಷ್ಠನಾದ ಅಗ್ನಿ ತನ್ನ ಪ್ರಚೋದನೆಯನ್ನು ಅರುಣೋದಯಗಳ ದೈವೀ ಸತ್ಯದ ತಳಹದಿಯಿಂದ ಸ್ವೀಕರಿಸುತ್ತ ಪೃಥ್ವಿಯ ಹಾಗೂ ಸ್ವರ್ಗದ ವಿಸ್ತಾರದಲ್ಲಿ ಪ್ರವೇಶಿ–ಸುತ್ತಾನೆ. ಏಕೆಂದರೆ ಅರುಣೋದಯದ ಈ ಹೆಚ್ಚಿನ ಬೆಳಕು ಮಿತ್ರ ಮತ್ತು ವರುಣ ಇವರ ಜ್ಞಾನವಾಗಿರುವ ಮತ್ತು ಸಂತೋಷದ ವಿಷಯವಾಗಿರುವ ಅದು ಎಲ್ಲೆಡೆಯಲ್ಲಿ, ಹಲವಾರು ರೂಪಗಳಲ್ಲಿ ಕ್ರಮಬದ್ಧಗೊಳಿಸುವಂತಹದಾಗಿದೆ.

*

ದೈವೀಸತ್ಯ ಸರಳ ವಿಷಯವಾಗಿರುವಂತೆ ತೋರಿಬರುತ್ತದೆ, ಆದಾಗ್ಯೂ ಅದು ಅತ್ಯಂತ ಕಠಿಣವಾಗಿದೆ. ದೈವೀಸತ್ಯ ವೈದಿಕ ಬೋಧನೆಯ ಪ್ರಧಾನ ಶಬ್ದವಾಗಿತ್ತು. ಅದು ಆತ್ಮದಲ್ಲಿಯ ಸತ್ಯ, ದರ್ಶನದಲ್ಲಿಯ ಸತ್ಯ, ಉದ್ದೇಶದಲ್ಲಿಯ ಸತ್ಯ, ಕ್ರಿಯೆ–



ಯಲ್ಲಿಯ ಸತ್ಯ. ಆಚರಣೆಯಲ್ಲಿರುವ ಸತ್ಯ 'ಆರ್ಜವ', ಆಂತರಿಕ ಸಾಚಾತನ, ಬಲವತ್ತರವಾದ ನಿಷ್ಕಾಪಟ್ಯ, ಸ್ಪಷ್ಟತೆ, ಮತ್ತು ಶಬ್ದ ಹಾಗೂ ಕರ್ಮದಲ್ಲಿ ತೆರೆದಿರಿಸಿದ ಮರ್ಯಾದೆ ಇದೆಲ್ಲ ಪ್ರಾಚೀನ ಆರ್ಯ ಜನಾಂಗದ ನೈತಿಕತೆಗಳ ಮನೋಧರ್ಮ–ವಾಗಿತ್ತು. ಅದು ಪರಿಶುದ್ಧ, ಹಾಳು ಮಾಡದೆ ಇದ್ದ ಶಕ್ತಿಯ ರಹಸ್ಯ, ಮನುಷ್ಯ ಪ್ರಕೃತಿಯಿಂದ ಬಹಳ ದೂರ ಪ್ರಯಾಣ ಮಾಡಿಲ್ಲ ಎಂಬುದರ ಕುರುಹು.

**– ಶ್ರೀ ಅರವಿಂದರು**

**(10/60–64, 65, 67, 68, 69, 96, 97, 131, 132, 126–27, 432,17/335)**

*

## ದೈವೀಸತ್ಯವನ್ನು ಜೀವಿಸಬೇಕು

ದೈವೀಸತ್ಯಕ್ಕೆ ರೂಪಕೊಡಲಾಗುವುದಿಲ್ಲ, ವ್ಯಾಖ್ಯೆಕೊಡಲಾಗುವುದಿಲ್ಲ. ಅದನ್ನು ಜೀವಿಸಬೇಕು.

ದೈವೀಸತ್ಯಕ್ಕೆ ಮುಡುಪಾಗಿರಿಸಿಕೊಂಡು ಆ ದೈವೀಸತ್ಯವನ್ನು ಜೀವಿಸಬೇಕು, ಅದಕ್ಕೆ ಸೇವೆ ಸಲ್ಲಿಸಬೇಕು ಎನ್ನುವವರು ಪ್ರತಿಕ್ಷಣ ಕೈಕೊಳ್ಳಬೇಕಾದುದು ಏನು ಎಂಬುದನ್ನು ತಿಳಿದುಕೊಂಡಿರುತ್ತಾರೆ. ಅದು ಒಂದು ಬಗೆಯ ಅಂತರ್ಬೋಧೆ ಇಲ್ಲವೆ ದರ್ಶನ ಇದ್ದ ಹಾಗಿರುತ್ತದೆ (ಬಹಳಷ್ಟು ಸಲ ಅಲ್ಲಿ ಶಬ್ದಗಳಿರುವುದಿಲ್ಲ, ಆದರೆ ಕೆಲವೊಮ್ಮೆ ಅದು ಶಬ್ದಗಳಲ್ಲಿ ಅಭಿವ್ಯಕ್ತವಾಗಿರುತ್ತದೆ) ಅದು ಪ್ರತಿಕ್ಷಣ ಆ ಕ್ಷಣದ ಸತ್ಯವೇನು ಎಂಬುದನ್ನು ನೀವು ತಿಳಿದುಕೊಳ್ಳುವಂತೆ ಮಾಡುತ್ತದೆ. ಈ ವಿಷಯವೇ ಅತ್ಯಂತ ಸ್ವಾರಸ್ಯಕರವಾದದ್ದು. ದೈವೀಸತ್ಯ ಒಂದು ಒಳ್ಳೆಯ ವ್ಯಾಖ್ಯೆ ಪಡೆದ ವಿಷಯ, ಸರಿಯಾಗಿ ವರ್ಗೀಕರಣಗೊಂಡದ್ದು, ಸರಿಯಾಗಿ ಸ್ಥಾಪಿತ–ವಾದದ್ದು ಎಂದು ತಿಳಿದುಕೊಳ್ಳಲು ಬಯಸುತ್ತೀರಿ, ನಂತರ ವಿಶ್ರಾಂತಿ ಸ್ಥಿತಿಯಲ್ಲಿ–ರುತ್ತೀರಿ, ಇನ್ನು ಮುಂದೆ ಅದನ್ನು ಅರಸುವ ಆವಶ್ಯಕತೆ ಇರುವುದಿಲ್ಲ. ಅದನ್ನು ನೀವು ಕೈಗೆತ್ತಿಕೊಳ್ಳುತ್ತೀರಿ ಮತ್ತು "ಇಲ್ಲಿ ಆ ದೈವೀಸತ್ಯವಿದೆ" ಎಂದು ಹೇಳುತ್ತೀರಿ, ನಂತರ ಅದು ಸ್ಥಿರವಾಗುತ್ತದೆ. ಇದನ್ನೇ ಎಲ್ಲ ಧರ್ಮಗಳು ಕೈಕೊಂಡಿವೆ. ಅವರು ತಮ್ಮ ಸತ್ಯವನ್ನು 'ಧರ್ಮತತ್ವ' ವೆಂದು ಸ್ಥಾಪಿಸಿದ್ದಾರೆ. ಆದರೆ ಅದು ಇನ್ನು ಮುಂದೆ ದೈವೀಸತ್ಯವಾಗಿ ಉಳಿಯುವುದಿಲ್ಲ.

ದೈವೀಸತ್ಯ ಜೀವಿಸುತ್ತಿರುವ, ಚಲಿಸುತ್ತಿರುವ, ಪ್ರತಿಕ್ಷಣ ತನ್ನನ್ನು ಅಭಿವ್ಯಕ್ತ–ಪಡಿಸುತ್ತಿರುವ ಏನೋ ಒಂದು, ಅದು ಪರಮೋಚ್ಚನನ್ನು ಸಮೀಪಿಸುವ ಒಂದು ಮಾರ್ಗ. ಪ್ರತಿಯೊಬ್ಬನಿಗೂ ಪರಮೋಚ್ಚನನ್ನು ಸಮೀಪಿಸುವ ಅವನದೇ

ಮಾರ್ಗವಿರುತ್ತದೆ. ಕೆಲವರು ಅವನನ್ನು ಎಲ್ಲ ಬದಿಗಳಿಂದ ಒಂದೇ ವೇಳೆಗೆ ಸಮೀಪಿಸಲು ಶಕ್ತರಾಗಿರುತ್ತಾರೆ, ಆದರೆ ಕೆಲವರು ಪ್ರೇಮದ ಮೂಲಕ, ಕೆಲವರು ಸಾಮರ್ಥ್ಯದ ಮೂಲಕ, ದೈವೀ ಪ್ರಜ್ಞೆಯ ಮೂಲಕ ಸಮೀಪಿಸುತ್ತಾರೆ ಮತ್ತು ದೈವೀಸತ್ಯದ ಮೂಲಕ ಸಮೀಪಿಸುವವರು ಇದ್ದಾರೆ. ಆದರೆ ಇವುಗಳಲ್ಲಿ ಪ್ರತಿಯೊಂದು ಮುಖವೂ ಪರಮೋಚ್ಚನ ಹಾಗೆ ಅಷ್ಟೇ ಪರಿಪೂರ್ಣ, ಆಜ್ಞಾರ್ಥಕ ಹಾಗೂ ವ್ಯಾಖ್ಯೆಗೆ ಮೀರಿದ್ದಾಗಿರುತ್ತದೆ. ಪರಮೋಚ್ಚ ಪ್ರಭು ಪರಿಪೂರ್ಣ–ನಾದವನು, ಆಜ್ಞಾಪಿಸುವವನು, ವ್ಯಾಖ್ಯಾನಕ್ಕೆ ನಿಲುಕದವನು, ತನ್ನ ಕ್ರಿಯೆಯಲ್ಲಿ (ಇತರರ) ಕೈಗೆ ಸಿಗದವನು, ಅವನ ವೈಶಿಷ್ಟ್ಯತೆಗಳಿಗೆ ಅದೇ ಗುಣಧರ್ಮವಿರುತ್ತದೆ.

ಒಮ್ಮೆ ಮನುಷ್ಯ ಇದನ್ನು ತಿಳಿದುಕೊಂಡಾಗ, ಈ ಮುಖಗಳಲ್ಲಿ ಯಾವುದೊ–ಂದರ ಸೇವೆಯಲ್ಲಿ ತೊಡಗಿಕೊಂಡಾಗ, (ಅದು ಜೀವನದಲ್ಲಿ, ಕಾಲದಲ್ಲಿ, ಕಾಲದ ಚಲನೆಯಲ್ಲಿ ಅಭಿವ್ಯಕ್ತವಾಗಿರುತ್ತದೆ) ಅವನು ಪ್ರತಿಯೊಂದು ಕ್ಷಣ ದೈವೀಸತ್ಯ ಯಾವುದು, ದೈವೀಪ್ರಜ್ಞೆ ಯಾವುದು ಎಂಬುದನ್ನು ಅರಿತುಕೊಳ್ಳುವನು ಮತ್ತು ಪ್ರತಿಯೊಂದು ನಿಮಿಷದಲ್ಲಿ ಯಾವುದು ದೈವೀ ಸಾಮರ್ಥ್ಯ, ಯಾವುದು ದೈವೀ ಪ್ರೇಮ ಎಂಬುದನ್ನು ತಿಳಿದುಕೊಳ್ಳುವನು, ಅದು ಅನೇಕ ರೂಪಗಳುಳ್ಳ ದೈವೀ ಸಾಮರ್ಥ್ಯ, ದೈವೀ ಪ್ರೇಮ, ದೈವೀ ಪ್ರಜ್ಞೆ, ದೈವೀಸತ್ಯವಾಗಿರುತ್ತದೆ, ಪ್ರಕಟಣೆಯಲ್ಲಿ ಅಸಂಖ್ಯಾತವಾಗಿ ತನ್ನನ್ನು ಅಭಿವ್ಯಕ್ತಗೊಳಿಸುತ್ತದೆ, ಅದು, ದೈವೀ ಪ್ರಭು ತನ್ನನ್ನು ಅನೇಕ ಬಗೆಯಲ್ಲಿ ಅಭಿವ್ಯಕ್ತಗೊಳಿಸುವ ರೀತಿಯದಾಗಿರುತ್ತದೆ.

*

**ಸಮಗ್ರತೆ ಅವಶ್ಯವಿದೆ :**

ವಸ್ತುನಿಷ್ಠ ಜಗತ್ತಿನಲ್ಲಿ ತನ್ನನ್ನು ಅಭಿವ್ಯಕ್ತಗೊಳಿಸಲು ಅರಸುತ್ತಿರುವ ಜೀವಂತ–ವಿರುವ ಹಾಗೂ ನಿಜವಾದ ದೈವೀಸತ್ಯವಿದೆ ಎಂಬುದರ ಬಗ್ಗೆ ಮನುಷ್ಯನಿಗೆ ಮನವರಿಕೆಯಾದ ಕೂಡಲೆ ಏನಾದರೂ ಮಹತ್ವ ಇಲ್ಲವೆ ಮೌಲ್ಯವಿದೆ ಎಂದು ತೋರಿಬರುವ ಒಂದೇ ವಿಷಯವೆಂದರೆ, ಅವನು ಈ ದೈವೀಸತ್ಯದ ಸಂಪರ್ಕದಲ್ಲಿ ಬರುವುದಾಗಿದೆ, ಅದರೊಡನೆ ಸಾಧ್ಯವಿದ್ದಷ್ಟು ಪರಿಪೂರ್ಣವಾಗಿ ತನ್ನನ್ನು ಗುರುತಿಸಿಕೊಳ್ಳುವುದಾಗಿದೆ, ಮತ್ತು ನಂತರ ಅದನ್ನು ಅಭಿವ್ಯಕ್ತಗೊಳಿಸುವ ಸಾಧನವಾಗುವಂತೆ, ಹಾಗೂ ಅದು ಹೆಚ್ಚು ಹೆಚ್ಚಾಗಿ ಜೀವಂತ ಮತ್ತು ಸ್ಪರ್ಶವೇದ್ಯ–ವಾಗುವಂತೆ ಮಾಡುವುದಾಗಿದೆ. ಅದರಿಂದಾಗಿ ಅದನ್ನು ಹೆಚ್ಚು ಹೆಚ್ಚಾಗಿ ಪರಿಪೂರ್ಣವಾಗಿ ಪ್ರಕಟಿಸಬಹುದಾಗಿದೆ. ಈ ದೈವೀಸತ್ಯವನ್ನು ಅಭಿವ್ಯಕ್ತಗೊಳಿ–



ಸುವುದಕ್ಕಾಗಿ ಎಲ್ಲ ಸಿದ್ಧಾಂತಗಳು, ಎಲ್ಲ ತತ್ವಗಳು, ಎಲ್ಲ ವಿಧಾನಗಳು, ಅವುಗಳ ಕ್ಷಮತೆಗನುಗುಣವಾಗಿ ಹೆಚ್ಚು ಕಡಿಮೆ ಒಳ್ಳೆಯವಾಗಿರುತ್ತವೆ. ಮನುಷ್ಯ ಮಾರ್ಗದಲ್ಲಿ ಮುಂದುವರಿದು ಹೋಗುತ್ತಿದ್ದಂತೆ ಅವನು ಅವಿದ್ಯೆಯ ಎಲ್ಲ ಮಿತಿಗಳಾಚೆ ಸಾಗಿ ಹೋದರೆ, ಅವನು ಈ ಪ್ರಕಟಣೆಯ ಪೂರ್ಣತೆ, ಇಡಿಯಾಗಿರುವಿಕೆ, ಸಮಗ್ರತೆ ಇದೆಲ್ಲ ದೈವೀಸತ್ಯದ ಅಭಿವ್ಯಕ್ತಿಗೆ ಅವಶ್ಯವಾಗಿದೆ ಎಂಬುದರ ಬಗ್ಗೆ, ಯಾವುದನ್ನೂ ಬಿಟ್ಟುಕೊಡಲಾಗದು, ಬಹುಶಃ ಅತಿಮಹತ್ವದ್ದು ಕಡಿಮೆ ಮಹತ್ವದ್ದೆಂದು ಯಾವುದೂ ಇರಲಾರದು ಎಂಬುದರ ಬಗ್ಗೆ ಅವನು ಅರಿವುಳ್ಳವನಾಗುತ್ತಾನೆ, ಅವಶ್ಯವಾದ ಒಂದು ವಿಷಯವೆಂದರೆ ಪ್ರತಿಯೊಂದನ್ನು ಅದರದರ ಸ್ಥಾನದಲ್ಲಿ, ಉಳಿದೆಲ್ಲದರ ಜೊತೆಗೆ ನಿಜವಾದ ಸಂಬಂಧದಲ್ಲಿ ಸಾಮರಸ್ಯದಿಂದ ಇರಿಸು–ವುದಾಗಿದೆ, ಅದರಿಂದಾಗಿ ಇಡೀ ದೈವೀ ಏಕತೆ ಸಾಮರಸ್ಯದಿಂದ ಪ್ರಕಟವಾಗು–ವಂತಾಗುತ್ತದೆ.

ಮನುಷ್ಯ ಈ ಹಂತದಿಂದ ಕೆಳಗಿಳಿದು ಬಂದಾಗ, ನನ್ನ ಅಭಿಪ್ರಾಯದಲ್ಲಿ, ಅವನು ಏನನ್ನೂ ತಿಳಿದುಕೊಳ್ಳಲಾರ. ಅವುಗಳ ಎಲ್ಲ ನಿಜವಾದ ಮೌಲ್ಯವನ್ನು ತೆಗೆದು ಹಾಕುವ ಸಂಕುಚಿತತೆ ಹಾಗೂ ಮಿತಿಗಳಲ್ಲಿ, ಎಲ್ಲ ವಾದವಿವಾದಗಳ ಯೋಗ್ಯತೆ ಒಂದೇ ಆಗಿರುತ್ತದೆ.

**(15/417–18)** – **ಶ್ರೀಮಾತೆ**

*

## ನಾವು ಕೇವಲ ದೈವೀಸತ್ಯಕ್ಕೆ ಅಧೀನರಾಗಬೇಕಾದರೆ

ಕೇವಲ ದೈವೀ ಸತ್ಯಕ್ಕೆ ನಮ್ಮನ್ನು ಅಧೀನಪಡಿಸಿಕೊಳ್ಳಬೇಕಾದರೆ, ನಮ್ಮ ಮಾನಸಿಕ ಇಲ್ಲವೆ ನೈತಿಕ ವಿಚಾರಗಳು ಅನಂತನ ಮೇಲೆ ಬಂಧನಕಾರಿಯಾಗಿವೆ ಎಂಬುದನ್ನು ಇಲ್ಲವೆ ನಮ್ಮ ನಡತೆಯ ಅತ್ಯುಚ್ಚ ಮಾನದಂಡಗಳಲ್ಲಿಯೂ ಕೂಡ ಅತ್ಯಂತ ಪವಿತ್ರವಾದ, ಪರಿಪೂರ್ಣವಾದ ಇಲ್ಲವೆ ಶಾಶ್ವತವಾದ ಏನಾದರೂ ಇದೆ ಎಂಬ ವಿಚಾರವನ್ನು ಬಿಟ್ಟುಕೊಡಬೇಕು. ಉಚ್ಚಸ್ಥಿತಿಗೆ ಏರಿ ಹೋಗುತ್ತವೆ ಎಂಬ ಭಾವನೆ ತಂದುಕೊಡುವ ತಾತ್ಕಾಲಿಕ ಮಾನದಂಡಗಳನ್ನು ಅವಶ್ಯವಾಗಿರುವವರೆಗೆ ರೂಪಿಸುವುದು ಭಗವಂತ ತನ್ನ ಜಗತ್ತಿನಲ್ಲಿ ಮುಂದೆ ಇಡುತ್ತಿರುವ ಹೆಜ್ಜೆಗಳಿಗೆ ಸೇವೆ ಸಲ್ಲಿಸಿದಂತಾಗುತ್ತದೆ. ಕಟ್ಟುನಿಟ್ಟಾದ ಒಂದು ನಿರಂಕುಶ ಮಾನದಂಡವನ್ನು ಸ್ಥಾಪಿಸುವುದೆಂದರೆ ಶಾಶ್ವತ ಪ್ರವಾಹಕ್ಕೆ, ಅದನ್ನು ತಡೆದು ನಿಲ್ಲಿಸುವ ಒಡ್ಡನ್ನು

ನಿರ್ಮಿಸಿದಂತಾಗುತ್ತದೆ. ಸ್ವಭಾವದ ಬಂಧನಕ್ಕೊಳಗಾದ ಆತ್ಮ ಈ ಸತ್ಯವನ್ನು ಅರಿತುಕೊಂಡರೆ ಅದು ಒಳ್ಳೆಯದಾವುದು, ದುಷ್ಟವಾದದ್ದು ಯಾವುದು ಎಂಬ ದ್ವಂದ್ವದಿಂದ ಬಿಡುಗಡೆ ಪಡೆಯುತ್ತದೆ, ಏಕೆಂದರೆ ಒಳ್ಳೆಯದಾದದ್ದು ವ್ಯಕ್ತಿಗೆ ಮತ್ತು ಜಗತ್ತಿಗೆ ದೈವೀ ಪರಿಪೂರ್ಣತೆಯತ್ತ ಸಾಗಲು ಸಹಾಯಕವಾಗುತ್ತದೆ ಮತ್ತು ದುಷ್ಟವಾದದ್ದು ಆ ಹೆಚ್ಚುತ್ತಿರುವ ಪರಿಪೂರ್ಣತೆಗೆ ಹಿನ್ನೆಡೆಯನ್ನುಂಟು ಮಾಡುತ್ತದೆ ಹಾಗೂ ಅದನ್ನು ಭಗ್ನಗೊಳಿಸುತ್ತದೆ. ಆದರೆ ಪರಿಪೂರ್ಣತೆ ಪ್ರಗತಿಪರವಾದು–ದರಿಂದ, ಕಾಲಗತಿಯಲ್ಲಿ, ಒಳ್ಳೆಯದು ಹಾಗೂ ದುಷ್ಟವಾದದ್ದು ಇವೆರಡೂ ಕೂಡ ಪರಿಮಾಣದಲ್ಲಿ ಹೆಚ್ಚು ಕಡಿಮೆಯಾಗುವಂತಹವು ಮತ್ತು ಕಾಲಕಾಲಕ್ಕೆ ತಮ್ಮ ಅರ್ಥವನ್ನು ಹಾಗೂ ಮೌಲ್ಯವನ್ನು ಬದಲಾಯಿಸುವಂತಹವು. ಈಗ ದುಷ್ಟವಾಗಿ–ರುವಂತೆ ಕಂಡುಬರುವ ಮತ್ತು ಅದರ ಸದ್ಯದ ಆಕಾರದಲ್ಲಿ ಕೈ ಬಿಡಬೇಕಾದ ವಿಷಯ ಒಂದಾನೊಂದು ಕಾಲದಲ್ಲಿ ಸಹಾಯಕವಾಗಿತ್ತು, ವ್ಯಕ್ತಿಗತ ಹಾಗೂ ಸಾರ್ವತ್ರಿಕ ಪ್ರಗತಿಗೆ ಅವಶ್ಯವಾಗಿತ್ತು. ಸದ್ಯ ನಾವು ದುಷ್ಟವಾದದ್ದೆಂದು ಪರಿಗಣಿಸುವ ಆ ವಿಷಯ ಇನ್ನೊಂದು ರೂಪದಲ್ಲಿ ಮತ್ತು ವ್ಯವಸ್ಥೆಯಲ್ಲಿ ಭವಿಷ್ಯತ್ತಿನ ಪರಿಪೂರ್ಣತೆಯ ಅಂಶವಾಗಬಹುದು, ಏಕೆಂದರೆ ನಾವು ಒಳ್ಳೆಯದು ಮತ್ತು ದುಷ್ಟವಾದದ್ದು ಎಂದು ಕರೆಯುವ ಎಲ್ಲ ವಿಷಯಗಳ ಈ ಎಲ್ಲ ಉದ್ದೇಶವನ್ನು ಮತ್ತು ದೈವೀ ಉಪಯುಕ್ತತೆಯನ್ನು ಶೋಧಿಸುತ್ತೇವೆ, ಆಗ ನಾವು ದುಷ್ಟವಾದ–ದ್ದೆಂದು ಕರೆದಿರುವ, ಅದಕ್ಕೂ ಕಡಿಮೆಯಲ್ಲದ ರೀತಿಯಲ್ಲಿ ಒಳ್ಳೆಯದೆಂದು ಕರೆದಿರುವ ಎಲ್ಲವುಗಳಲ್ಲಿಯ ಮಿಥ್ಯೆಯನ್ನು, ವಿರೂಪಗೊಂಡದ್ದನ್ನು, ಅಜ್ಞಾನವನ್ನು, ಮಬ್ಬಾದುದನ್ನು ತಿರಸ್ಕರಿಸಬೇಕು. ಏಕೆಂದರೆ ಆಗ ನಾವು ಕೇವಲ ಸತ್ಯವಾದದ್ದನ್ನು, ದೈವಿಕವಾದದ್ದನ್ನು ಸ್ವೀಕರಿಸಬೇಕಾಗುತ್ತದೆ, ಆದರೆ ಸನಾತನ ವಿಧಾನಗಳಲ್ಲಿ ಬೇರೆ ಯಾವ ಭಿನ್ನತೆಯನ್ನು ಮಾಡುವುದಿರುವುದಿಲ್ಲ.

ಕಟ್ಟುನಿಟ್ಟಿನ ಮಾನದಂಡದ ಪ್ರಕಾರ ಕಾರ್ಯಕೈಕೊಳ್ಳುತ್ತಿರುವವರಿಗೆ, ದೈವೀ ಮೌಲ್ಯಗಳನ್ನು ಗಮನಿಸದೆ ಕೇವಲ ಮಾನವ ಮೌಲ್ಯಗಳನ್ನು ಭಾವನೆಗೆ ತಂದುಕೊಳ್ಳುವವರಿಗೆ ಈ ಸತ್ಯ ಒಂದು ಅಪಾಯಕಾರಿ ವಿನಾಯಿತಿ ಎಂದು ಮತ್ತು ಅದು ನೈತಿಕತೆಯ ತಳಹದಿಯನ್ನು ಹಾಳುಮಾಡಬಹುದು, ನಡತೆಯಲ್ಲಿ ಗೊಂದಲ ವನ್ನುಂಟು ಮಾಡಬಹುದು ಮತ್ತು ಅಸ್ತವ್ಯಸ್ತತೆಯನ್ನು ಉಂಟುಮಾಡಬಹುದು ಎಂಬ ಭಾವನೆ ಉಂಟಾಗಬಹುದು. ಸನಾತನ ಮತ್ತು ಬದಲಾಗದ ನೈತಿಕತೆ ಮತ್ತು ಯಾವ ನೈತಿಕತೆ ಇಲ್ಲದಿರುವಿಕೆ ಇವುಗಳ ನಡುವೆ ಆಯ್ಕೆ ಮಾಡಿಕೊಳ್ಳುವುದಾದರೆ



ನಿಶ್ಚಿತವಾಗಿ ಆ ಬಗೆಯ ಪರಿಣಾಮವನ್ನು ಅಜ್ಞಾನಿ ಮನುಷ್ಯ ಕಂಡುಕೊಳ್ಳುತ್ತಾನೆ. ಆದರೆ ಮಾನವ ಸ್ತರದಲ್ಲಿಯೂ ಕೂಡ, ನಡತೆಯ ಮಾನದಂಡ ತಾತ್ಕಾಲಿಕ, ಆದಾಗ್ಯೂ ಅದರ ಕಾಲದಲ್ಲಿ ಅದು ಅವಶ್ಯವಾದದ್ದು ಮತ್ತು ಅದರ ಸ್ಥಾನದಲ್ಲಿ ಹೆಚ್ಚು ಒಳ್ಳೆಯದಾದದ್ದು ಬರುವವರೆಗೆ ಅದನ್ನು ನಿಷ್ಠೆಯಿಂದ ಪಾಲಿಸಬೇಕು ಎಂಬುದನ್ನು ಗುರುತಿಸಲು ಸಾಕಷ್ಟು ಪ್ರಕಾಶ ಹಾಗೂ ನಮ್ಯತೆ ನಮ್ಮಲ್ಲಿದ್ದಾಗ ನಮಗೆ ಅಂತಹ ಹಾನಿಯೇನೂ ಆಗುವುದಿಲ್ಲ, ಅದರೆ ಕೇವಲ ಅಪರಿಪೂರ್ಣ, ಸಹಿಷ್ಣುತೆಯಿಲ್ಲದ ಸದ್ಗುಣದ ಬಗೆಗಿನ ಅಂಧಾಭಿಮಾನವನ್ನು ಕಳೆದುಕೊಳ್ಳಬಹುದು. ಅದರ ಸ್ಥಾನದಲ್ಲಿ ನಾವು ತೆರೆದಿರಿಸಿಕೊಳ್ಳುವಿಕೆಯನ್ನು, ಮುಂದುವರಿಯುವ ನೈತಿಕ, ಪ್ರಗತಿಪರತೆಯ ಸಾಮರ್ಥ್ಯ, ದಾನಶೀಲತೆ, ಹೆಣಗುತ್ತಿರುವ, ಎಡವುತ್ತಿರುವ ಜೀವಿಗಳುಳ್ಳ ಈ ಜಗತ್ತಿನಲ್ಲಿ ಅರ್ಥಮಾಡಿಕೊಳ್ಳುವ ಸಹಾನುಭೂತಿಯಿಂದ ಪ್ರವೇಶಿಸುವ ಕ್ಷಮತೆ, ಅದಕ್ಕೆ ಅದರ ಮಾರ್ಗದಲ್ಲಿ ಸಹಾಯ ನೀಡಲು ಹೆಚ್ಚು ಒಳ್ಳೆಯ ಹಕ್ಕು, ಹೆಚ್ಚಿನ ಬಲ ಇವೆಲ್ಲವುಗಳನ್ನು ಗಳಿಸುತ್ತೇವೆ. ಕೊನೆಯಲ್ಲಿ ಮಾನವ ಮುಕ್ತಾಯಗೊಂಡು ದೇವನ ಪ್ರಾರಂಭವಾದಾಗ ಮಾನಸಿಕವಾದ್ದು ಅತಿಮಾನಸ–ದಲ್ಲಿ ಮಾಯವಾದಾಗ ಮತ್ತು ಸಾಂತವಾದದ್ದು ಅನಂತದ ತಳ ಸೇರಿದಾಗ, ಎಲ್ಲ ದುಷ್ಟತನ ವಿಶ್ವಾತೀತ ದೈವೀ ಒಳ್ಳೆಯದರಲ್ಲಿ ಮಾಯವಾಗುವುದು, ಅದು ಸ್ಪರ್ಶಿಸುವ ಪ್ರತಿಯೊಂದು ಪ್ರಜ್ಞೆಯ ಸ್ತರದಲ್ಲಿ ವಿಶ್ವಂಭರವಾಗುವುದು.

ನಮಗಾಗಿ ಸ್ಥಿರವಾಗಿರುವುದು ಇದು: ಯಾವ ಎಲ್ಲ ಮಾನದಂಡಗಳ ಮೂಲಕ ನಾವು ನಮ್ಮ ಮೇಲೆ ನಾವು ಆಳಿಕೆ ನಡೆಸುವುದನ್ನು ಅರಸುತ್ತಿರುತ್ತೇವೆಯೋ ಅವು ಕೇವಲ ತಾತ್ಕಾಲಿಕ, ಅಪರಿಪೂರ್ಣ ಉತ್ಕ್ರಾಂತಿಪರ ಪ್ರಯತ್ನಗಳು, ಅವು ನಮಗೆ ವಿಶ್ವಂಭರ ಸ್ವ–ಸಿದ್ಧಿಪಡೆದುಕೊಳ್ಳುವುದರಲ್ಲಿ ನಮ್ಮ ಎಡವುತ್ತಿರುವ ಮಾನಸಿಕ ಪ್ರಗತಿಯನ್ನು ಪ್ರತಿನಿಧಿಸುತ್ತವೆ, ಆ ಸಿದ್ಧಿಯತ್ತ ಪ್ರಕೃತಿ ಚಲಿಸುತ್ತಿದೆ. ಆದರೆ ದೈವೀ ಪ್ರಕಟಣೆಯನ್ನು ನಮ್ಮ ಚಿಕ್ಕಪುಟ್ಟ ಸತ್ಯಗಳಿಂದ ಕಟ್ಟಿಹಾಕಲಾಗದು, ಏಕೆಂದರೆ ಅದರ ಹಿಂದಿರುವ ಪ್ರಜ್ಞೆ ಈ ವಿಷಯಗಳಿಗೆ ಅತ್ಯಂತ ವಿಸ್ತಾರವಾಗಿದೆ.

**(20/180–81)** **– ಶ್ರೀ ಅರವಿಂದರು**

*

## ದೈವೀಸತ್ಯದ ಸೇವೆಗೆ ಇರುವ ಮೊದಲ ನಿಬಂಧನೆ

ಅತಿಮಾನಸ ಜೀವನ ಪ್ರಾಣಿಕದ ಹಾಗೂ ದೇಹದ ಆಸೆಗಳಿಗೆ ಉಚ್ಚಮಟ್ಟದ ಸಂತೃಪ್ತಿಯನ್ನು ತಂದುಕೊಡುವುದು ಎಂಬ ಕಲ್ಪನೆಯನ್ನು ತಳ್ಳಿಹಾಕಬೇಕು. ಮಾನವ ಸ್ವಭಾವದಲ್ಲಿರುವ ಪಶುತ್ವವನ್ನು ಭವ್ಯವಾಗಿಸುವ ಭರವಸೆ ಹೊಂದಿ–ರುವುದು ದೈವೀಸತ್ಯದ ಅವರೋಹಣಕ್ಕೆ ಬೇರೆ ಯಾವುದಕ್ಕಿಂತಲೂ ಹೆಚ್ಚಿನ ಅಡೆತಡೆ ಉಂಟುಮಾಡುವುದು. ತಾನು ಇಷ್ಟಪಡುವ ವಿಚಾರಗಳನ್ನು ಮತ್ತು ಪೂರ್ವಮಗ್ನತೆಗಳನ್ನು ಅತಿಮಾನಸ ದೃಢೀಕರಿಸಲಿ ಎಂದು ಮನಸ್ಸು ಬಯಸುತ್ತದೆ; ಪ್ರಾಣಿಕ ತನ್ನ ಆಸೆಗಳು ಭವ್ಯವಾಗಲಿ ಎಂದು ಬಯಸುತ್ತದೆ, ದೇಹ ತನ್ನ ಸುಖಸೌಲಭ್ಯಗಳು, ಸಂತೋಷಕರ ವಿಷಯಗಳು ಮತ್ತು ರೂಢಿಗಳು ಸಮೃದ್ಧಿಯಿಂದ ಮುಂದುವರಿದುಕೊಂಡು ಹೋಗಲಿ ಎಂದು ಬಯಸುತ್ತದೆ. ಅಂತಹದಾಗುವುದಿದ್ದರೆ ಅದು ಮಾನವ ಸ್ವಭಾವದಲ್ಲಿ ಹೆಚ್ಚು ದೊಡ್ಡದಾಗಿರಿಸಿದ, ಉತ್ಪ್ರೇಕ್ಷಿತ ಪಶುವಿನ ಸ್ವಭಾವ ಪರಾಕಾಷ್ಠೆ ಕಂಡುಕೊಂಡಂತಾಗುತ್ತದೆ, ದೈವೀ ಸ್ವಭಾವದಲ್ಲಿ ಮಾನವ ಸ್ವಭಾವದ ಸಂಕ್ರಮಣವಾಗಿರುವುದಿಲ್ಲ.

*

ಸಾಧಾರಣ ಮನಸ್ಸಿನ ಹಾಗೂ ಪ್ರಾಣಿಕದ ಮಿತಿಗಳನ್ನು ಮುರಿದು ಹಾಕಿದಾಗ ಮನುಷ್ಯ ಅತಿ ವಿಸ್ತಾರವಾಗಿರುವ ಹಾಗೂ ಹೆಚ್ಚು ಸಾಮರ್ಥ್ಯಪೂರ್ಣವಾಗಿರುವ ಪ್ರಜ್ಞೆಯನ್ನು, ಸೀಮಾರಹಿತವಾದ ಸಾಧ್ಯತೆಗಳಿರುವುದನ್ನು ಭಾವನೆಗೆ ತಂದು–ಕೊಳ್ಳುತ್ತಾನೆ. ಆದರೆ ಅವನು ಅದನ್ನೆಲ್ಲ ತನ್ನ ಅಹಂಕಾರದ ಬಾಲಕ್ಕೆ ಅಂಟಿಸಿದರೆ ಆಗ ಅವನು ಸಾಮಾನ್ಯ ಮನುಷ್ಯನಲ್ಲಿರುವ ಅಹಂಕಾರದ ಸಹಸ್ರಪಟ್ಟು ಅಹಂಕಾರ ವನ್ನು ಹೊಂದಿರುತ್ತಾನೆ. ಭಗವಂತನ ಶ್ರೇಷ್ಠತೆ ಅವನದೇ ಶ್ರೇಷ್ಠತೆಗೆ ಒಂದು ನಿಮಿತ್ತ ಮತ್ತು ಆಧಾರವಾಗುತ್ತದೆ ಮತ್ತು ಈ ಭವ್ಯ 'ನಾನು' ಕೇವಲ ಪೃಥ್ವಿಯನ್ನಷ್ಟೇ ಅಲ್ಲ, ಆದರೆ ಸ್ವರ್ಗವನ್ನು ಕೂಡ ಆವರಿಸಿಕೊಳ್ಳುವಷ್ಟು ಉಬ್ಬಿಕೊಳ್ಳುತ್ತದೆ. ಜಾಗರೂಕರಾಗಿ, ಕಾಳಜಿಪೂರ್ವಕ ಅಹಂಕಾರದ ಆ ಭವ್ಯವಾಗಿಸುವಿಕೆಯ ವಿರುದ್ಧ ರಕ್ಷಣೆ ಮಾಡಿಕೊಳ್ಳಬೇಕು.

*

ಅದ್ಭುತವಾದ ಅನುಭವಗಳೊಂದಿಗೆ, ಅದ್ಭುತವಾದುದರ ಇಲ್ಲವೆ ಪವಾಡ ಸದೃಶವಾಗಿರುವ ಭಾವನೆ ತಂದುಕೊಳ್ಳುವುದರೊಂದಿಗೆ ಸತ್ತೆಯ ಒಂದು ಬಗೆಯ



ಆನಂದ ಪರಶವತೆ ಸ್ವಾಭಾವಿಕವಾಗಿ ಇರಬಹುದು. ಆದರೆ ಆ ಆನಂದಪರವಶತೆ ಕುರಿತು ಅಹಂಮನ್ಯತೆಯ ಭಾವನೆ ಇರಬಾರದು.

*

ಅಭೀಪ್ಸೆಪಡುವವರಲ್ಲಿ ಅಹಂಭಾವವಿರುವ ಜನರು ಹೆಚ್ಚಿನ ಸಂಖ್ಯೆಯಲ್ಲಿ–ರುತ್ತಾರೆ ಮತ್ತು ಅವರು ತಮ್ಮ ಸ್ವಾರ್ಥಪರತೆಯ ಬಗ್ಗೆ ಅರಿವುಳ್ಳವರಾಗಿರುವುದಿಲ್ಲ. ಅವರ ಸಾಧನೆಯಲ್ಲಿಯೂ ಕೂಡ 'ನಾನು' ಎಂಬುದು ಯಾವಾಗಲೂ ಇರುತ್ತದೆ. 'ನನ್ನ ಸಾಧನೆ', ನನ್ನ ಪ್ರಗತಿ, ನನ್ನ ಎಲ್ಲವೂ ಇತ್ಯಾದಿ. ಅದಕ್ಕೆ ಉಪಾಯವೆಂದರೆ ಸತತ ಭಗವಂತನನ್ನು ಕುರಿತು ಯೋಚಿಸುವುದಾಗಿದೆ, ತನ್ನ ಬಗೆಗಲ್ಲ, ಸಾಧನೆ–ಯನ್ನು, ಕಾರ್ಯವನ್ನು ಭಗವಂತನಿಗಾಗಿ ಮಾಡುವುದಾಗಿದೆ. ಇದು ಅಥವಾ ಅದು ನನ್ನ ಮೇಲೆ ವೈಯಕ್ತಿಕವಾದ ಯಾವ ಪರಿಣಾಮ ಬೀರುತ್ತದೆ ಎಂದು ಯೋಚಿಸಬಾರದು, ಯಾವುದರ ಬಗೆಗೂ ಹಕ್ಕು ಸಾಧಿಸಬಾರದು, ಎಲ್ಲವನ್ನೂ ಭಗವಂತನ ಪರಿಗಣನೆಗೆ ಬಿಟ್ಟುಕೊಡಬೇಕು. ಅದನ್ನು ನಿಷ್ಕಾಪಟ್ಯದಿಂದ ಮತ್ತು ಆದ್ಯಂತವಾಗಿ ಕೈಕೊಳ್ಳಲು ಸಮಯ ಬೇಕಾಗುತ್ತದೆ, ಅದರೆ ಅದೇ ಯೋಗ್ಯವಾದ ವಿಷಯ.

*

**ಮಾತಿನಲ್ಲಿ ಸತ್ಯ :**

ಸಾಧಕನೊಬ್ಬನಿಗೆ ಹೇಳಿದ್ದು: ನೀನು 'ಕ್ಷ' ನಿಂದ ಇಂಗ್ಲೀಷನಲ್ಲಿರುವ ಮೂಲಪ್ರತಿ ಯನ್ನು ನೋಡಿದರೆ ಅದರಲ್ಲಿ ಏನು ಬರೆದಿದೆ ಎಂಬುದನ್ನು ತಿಳಿದುಕೊಳ್ಳುವಿ, ಅದನ್ನು ಅತ್ಯುಚ್ಚ ದೃಷ್ಟಿಕೋನದಿಂದ ಬರೆಯಲಾಗಿದೆ. ಇದರರ್ಥ ನೀನು ಎಲ್ಲವನ್ನೂ ಎಲ್ಲರಿಗೆ ಹೇಳಬೇಕೆಂದಿರುವುದಿಲ್ಲ. ಮೌನದಲ್ಲಿ ಉಳಿದುಕೊಳ್ಳುವುದರ ಮೂಲಕ, ಮಾತನಾಡುವುದನ್ನು ತಿರಸ್ಕರಿಸುವುದರ ಮೂಲಕ ಸತ್ಯವನ್ನು ಬಚ್ಚಿಡುವುದು ತಪ್ಪಲ್ಲ, ಏಕೆಂದರೆ ಸತ್ಯವನ್ನು ಸ್ವೀಕರಿಸಲು ತಯಾರಿಲ್ಲದವರು, ಅದನ್ನು ವಿರೋಧಿಸುವವರು ತಪ್ಪಾಗಿ ಅರ್ಥಮಾಡಿಕೊಳ್ಳಬಹುದು, ದುರುಪಯೋಗ ಮಾಡಬಹುದು–ವಿರೂಪಗೊಳಿಸುವುದಕ್ಕಾಗಿ ಕೇವಲ ಮಿಥ್ಯೆ ಗಾಗಿ ಅದನ್ನು ಪ್ರಾರಂಭ ಬಿಂದುವನ್ನಾಗಿ ಮಾಡಿಕೊಳ್ಳಬಹುದು, ಆದರೆ ಸುಳ್ಳು ಹೇಳುವುದು ಇನ್ನೊಂದು ವಿಷಯ. ಹಾಸ್ಯದಲ್ಲಿಯೂ ಕೂಡ ಸುಳ್ಳು ಹೇಳ ಬಾರದು, ಏಕೆಂದರೆ ಅದು ಪ್ರಜ್ಞೆಯನ್ನು ಕೆಳಸ್ತರಕ್ಕಿಳಿಸುತ್ತದೆ. ಕೊನೆಯಲ್ಲಿ ರುವುದನ್ನೂ ಕೂಡ ಅತ್ಯುಚ್ಚ ದೃಷ್ಟಿಕೋನದಿಂದ ಹೇಳಲಾಗಿದೆ–ಮನುಷ್ಯ

ಮನಸ್ಸಿನಲ್ಲಿ ಅರಿತುಕೊಂಡ ಸತ್ಯ, ಅದರ ಪೂರ್ಣತೆಗೆ ಸಾಕಾಗದು, ಏಕೆಂದರೆ ಮನಸ್ಸಿನ ವಿಚಾರ ದೋಷಪೂರಿತವಾಗಿರಬಹುದು, ಇಲ್ಲವೆ ಸಾಕಾಗದೆ ಇರಬಹುದು. ಸತ್ಯಪ್ರಜ್ಞೆಯಲ್ಲಿ ಸತ್ಯವಾದ ಜ್ಞಾನವಿರುವುದರ ಆವಶ್ಯಕತೆ ಇದೆ.

*

ಮನುಷ್ಯ ಪ್ರತಿಯೊಂದನ್ನೂ ಪ್ರತಿಯೊಬ್ಬರಿಗೆ ಹೇಳುವ ಬಂಧನಕ್ಕೊಳ–ಗಾಗಿರುವುದಿಲ್ಲ.–ಅದು ಬಹಳಷ್ಟು ಸಲ ಒಳ್ಳೆಯದನ್ನು ಮಾಡುವುದಕ್ಕಿಂತ ಹೆಚ್ಚು ಹಾನಿಕಾರಕವಾಗಬಹುದು. ಅವಶ್ಯವಾದದ್ದನ್ನಷ್ಟೇ ಮನುಷ್ಯ ಹೇಳಬೇಕಾಗಿರುತ್ತದೆ. ಸಹಜವಾಗಿ, ಹೇಳಿದ್ದೆಲ್ಲ ಸತ್ಯವಾಗಿರಬೇಕು, ಅಸತ್ಯವಾಗಿರಬಾರದು ಮತ್ತು ಅಲ್ಲಿ ಮೋಸ ಮಾಡುವ ಉದ್ದೇಶವಿರಬಾರದು.

*

ಮೊದಲನೆಯದಾಗಿ, ಮನುಷ್ಯ ಅಸತ್ಯವೆಂದು ತಿಳಿದುಕೊಂಡದ್ದನ್ನು ಸತ್ಯವೆಂದು ಹೇಳುವುದರಲ್ಲಿ ಹಾಗೂ ವಾಸ್ತವದಲ್ಲಿ ಸತ್ಯವಾಗಿರದದ್ದನ್ನು ಮನಃಪೂರ್ವಕ ಸತ್ಯವೆಂದು ನಂಬಿ ಹೇಳುವುದರಲ್ಲಿ ದೊಡ್ಡ ವ್ಯತ್ಯಾಸವಿದೆ. ಮೊದಲನೆಯದು ಸತ್ಯದ ಮನೋಧರ್ಮಕ್ಕೆ ವಿರುದ್ಧವಾಗಿ ಹೋಗುವುದಾಗಿದೆ, ಎರಡನೆಯದು ಸತ್ಯಕ್ಕೆ ಗೌರವ ಕಾಣಿಕೆ ನೀಡುವುದಾಗಿದೆ. ಮೊದಲನೆಯದು ಸ್ಪಷ್ಟವಾಗಿ ಸತ್ಯದ ಮನೋಧರ್ಮಕ್ಕೆ ವಿರುದ್ಧವಾದದ್ದು ಎರಡನೆಯದು ಸತ್ಯಕ್ಕೆ ಸಲ್ಲಿಸಿದ ಗೌರವ ಕಾಣಿಕೆ. ಮೊದಲನೆಯದು ಬೇಕೆಂದೇ ಹೇಳಿದ ಅಸತ್ಯ, ಎರಡನೆಯದು ಅತಿಕೆಟ್ಟ–ದಾದರೂ ಕೇವಲ ಒಂದು ದೋಷ ಇಲ್ಲವೆ ಅಜ್ಞಾನ.

ಇದು ವ್ಯಾವಹಾರಿಕ ದೃಷ್ಟಿಕೋನದಿಂದ ಸತ್ಯ ಮಾತನಾಡುವುದರಿಂದ ಬಂದದ್ದಾಗಿದೆ. ಉಚ್ಚತರ ದೈವೀಸತ್ಯದ ದೃಷ್ಟಿಕೋನದಿಂದ ಪ್ರತಿಯೊಂದು ಸ್ತರಕ್ಕೆ ಅದರದೇ ಮಾನದಂಡವಿದೆ ಎಂಬುದನ್ನು ಮರೆಯಬಾರದು–ಮನಸ್ಸಿಗೆ ಸತ್ಯವೆನಿಸಿದ್ದು ಉಚ್ಚತರ ಪ್ರಜ್ಞೆಗೆ ಕೇವಲ ಭಾಗಶಃ ಸತ್ಯವೆನಿಸಬಹುದು, ಆದರೆ ಆಚೆಗಿರುವ, ವಿಸ್ತಾರವಾದ, ಹೆಚ್ಚು ಪರಿಪೂರ್ಣವಾದ ಸತ್ಯವನ್ನು ತಲುಪಲು ಮನಸ್ಸು ಭಾಗಶಃ ಸತ್ಯದ ಮೂಲಕವೇ ಹೋಗಬೇಕಾಗುತ್ತದೆ. ತೆರೆದಿರಿಸಿ–ಕೊಂಡಿರುವುದು ಮತ್ತು ನಮ್ಯವಾಗಿರುವುದು ಮನಸ್ಸಿಗೆ ಅವಶ್ಯವಾದ ಎಲ್ಲವೂ ಆಗಿರುತ್ತದೆ. ಉಚ್ಚತರ ಸತ್ಯ ಬಂದಾಗ ಅದನ್ನು ಗುರುತಿಸಲು ಅದು



ಸಿದ್ಧವಾಗಿರಬೇಕು, ನಿಮ್ನವಾದುದಕ್ಕೆ ಅಂಟಿಕೊಂಡಿರಬಾರದು, ಏಕೆಂದರೆ ಅದು ಅದರದೇ ಆಗಿರುತ್ತದೆ, ಅದು ದೈವೀ ಪ್ರಕಾಶಕ್ಕೆ ಕುರುಡಾಗುವಂತೆ ಮಾಡಲು ಆಸೆಗಳಿಗೆ, ಭಾವೋದ್ರೇಕಗಳಿಗೆ ಅನುವು ಮಾಡಿಕೊಡಬಾರದು, ಹಾಗೆಯೇ ವಿಷಯಗಳನ್ನು ತಿರುಚಲು ಹಾಗೂ ವಿಕೃತಗೊಳಿಸಲು ಕೂಡ ಅನುವು ಮಾಡಿಕೊಡಬಾರದು. ಉಚ್ಚತರ ಪ್ರಜ್ಞೆ ಒಮ್ಮೆ ಕಾರ್ಯ ಮಾಡಲು ಪ್ರಾರಂಭಿಸಿದಾಗ ತೊಂದರೆ ಕಡಿಮೆಯಾಗುತ್ತದೆ ಮತ್ತು ಸತ್ಯದಿಂದ ಹೆಚ್ಚಿನ ಸತ್ಯದತ್ತ ಸ್ಪಷ್ಟವಾದ ಪ್ರಗತಿ ಇರುತ್ತದೆ.

**(24/1509, 1385, 1384, 1382, 1559, 1560)** **– ಶ್ರೀ ಅರವಿಂದರು**

*

## ಕ್ರಿಯೆಗಾಗಿ ಇರುವ ಪ್ರಚೋದನೆಯಲ್ಲಿ ದೈವೀಸತ್ಯ ಹಾಗೂ ಮಿಥ್ಯೆ ಇವುಗಳನ್ನು ಭಿನ್ನವಾಗಿ ನೋಡುವುದು ಹೇಗೆ ?

ದೈವೀಸತ್ಯದ ಪ್ರಕಾಶಕ್ಕೆ ಸಹಾಯ ನೀಡಬೇಕೆಂದು ಹಾಗೂ ಅಂಧಕಾರದ ಹಾಗೂ ಮಿಥ್ಯೆಯ ಶಕ್ತಿಗಳ ಮೇಲೆ ಜಯ ಸಾಧಿಸಬೇಕೆಂದು ಬಯಸುವವರು ಪ್ರಚೋದನೆಗಳನ್ನು ಪ್ರಾರಂಭಿಸುವ ಅವುಗಳ ಚಲನೆಯನ್ನು ಹಾಗೂ ಕ್ರಿಯೆಯನ್ನು ಕಾಳಜಿಪೂರ್ವಕ ಅವಲೋಕಿಸುವುದರ ಮೂಲಕ, ಮತ್ತು ದೈವೀಸತ್ಯದಿಂದ ಬರುವ, ಮಿಥ್ಯೆಯಿಂದ ಬರುವ ಪ್ರಚೋದನೆಗಳಲ್ಲಿ ವ್ಯತ್ಯಾಸವನ್ನು ಗುರುತಿಸು–ವುದರ ಮೂಲಕ ಅದನ್ನು ಕೈಕೊಳ್ಳಬಹುದು, ಅದರಿಂದಾಗಿ ಮೊದಲನೆಯ–ವುಗಳಿಗೆ ವಿಧೇಯತೆಯನ್ನು ಹಾಗೂ ಎರಡನೆಯವುಗಳಿಗೆ ನಿರಾಕರಣೆಯನ್ನು ತೋರಿಸಲು ಸಾಧ್ಯವಾಗುವುದು.

ವ್ಯತ್ಯಾಸ ಗುರುತಿಸುವ ಸಾಮರ್ಥ್ಯವಿರುವುದು ದೈವೀಸತ್ಯದ ಪ್ರಕಾಶ ಪೃಥ್ವಿಯ ವಾತಾವರಣದಲ್ಲಿ ಆಗಮಿಸುವುದರ ಮೊದಲ ಪರಿಣಾಮವಾಗಿರುತ್ತದೆ.

ನಿಜವಾಗಿ, ದೈವೀಸತ್ಯದ ಪ್ರಚೋದನೆಗಳನ್ನು ಮಿಥ್ಯೆಯ ಪ್ರಚೋದನೆಗಳಿಂದ ಪ್ರತ್ಯೇಕವಾಗಿರಿಸಿ ನೋಡುವುದು ಬಹಳ ಕಠಿಣವಾದ ಕಾರ್ಯ, ಅದು ಯಶಸ್ವಿ–ಯಾಗಬೇಕಾದರೆ ಮನುಷ್ಯ ದೈವೀ ಪ್ರಕಾಶ ತಂದಿರುವ ವ್ಯತ್ಯಾಸ ಗುರುತಿಸುವ ಸಾಮರ್ಥ್ಯದ ವಿಶೇಷ ಕಾಣಿಕೆಯನ್ನು ಸ್ವೀಕರಿಸಿರಬೇಕಾಗುತ್ತದೆ.

ಹಾಗಿದ್ದಾಗ್ಯೂ ಪ್ರಾರಂಭದಲ್ಲಿ ಸಹಾಯಕವೆಂದು ಮನುಷ್ಯ ಪಾಲಿಸಬಹುದಾದ ಮಾರ್ಗದರ್ಶಕ ನಿಯಮ ಹೀಗಿದೆ: ಶಾಂತಿ, ನಂಬಿಕೆ, ಸಂತೋಷ, ಸಾಮರಸ್ಯ, ವಿಸ್ತರಣೆ, ಏಕತೆ, ಆರೋಹಣ ಮಾಡುತ್ತಿರುವ ಬೆಳವಣಿಗೆ ಇವುಗಳನ್ನು ತರುವುದೆಲ್ಲ ದೈವೀಸತ್ಯದಿಂದ ಬರುತ್ತದೆ. ತಳಮಳ, ಸಂಶಯ ಮನೋವೃತ್ತಿ, ದುಃಖ, ಸ್ವಾರ್ಥಪರ ಸಂಕುಚಿತತೆ, ಜಡತ್ವ, ಧೈರ್ಯಗುಂದುವಿಕೆ ಹಾಗೂ ನಿರಾಶೆ ಇವುಗಳನ್ನು ತರುವುದೆಲ್ಲ ಮಿಥ್ಯೆಯಿಂದ ಬರುತ್ತದೆ.

*

ಮನುಷ್ಯ ನಿಯಮಗಳನ್ನು ಮಾಡಿಕೊಂಡಿರಬಾರದು.

ಪ್ರತಿ ನಿಮಿಷ ಮನುಷ್ಯ ತನ್ನ ಗ್ರಹಿಕೆಗೆ ಬರುವ ಉಚ್ಚತರ ಸತ್ಯವನ್ನು ಅನ್ವಯಿ–ಸುವುದಕ್ಕೆ ಪ್ರಯತ್ನ ಮಾಡಬೇಕು. ಅದು ಹೆಚ್ಚು ಕಠಿಣವಾದದ್ದು, ಆದರೆ ಇರುವ ಪರಿಹಾರ ಅದೊಂದೇ.

ನೀವೇನೇ ಕೈಕೊಂಡಿರಲಿ, ಮೊದಲೇ ಅದಕ್ಕಾಗಿ ನಿಯಮಗಳನ್ನು ರೂಪಿಸಿ–ಕೊಂಡಿರುವುದು ಬೇಡ, ಏಕೆಂದರೆ ಒಮ್ಮೆ ಒಂದು ನಿಯಮವನ್ನು ರೂಪಿಸಿದರೆ ಅದನ್ನು ನೀವು, ಹೆಚ್ಚು ಕಡಿಮೆ ಅಂಧರಾಗಿ ಅನುಸರಿಸುತ್ತೀರಿ. ಮತ್ತು ಆಗ ನೂರರಲ್ಲಿ ತೊಂಬತ್ತೊಂಬತ್ತುವರೆ ಸಲ ತಪ್ಪು ಮಾಡುತ್ತೀರಿ ಎಂಬುದು ನಿಶ್ಚಿತ.

ನಿಜವಾದ ಕಾರ್ಯಕೈಕೊಳ್ಳಲು ಒಂದೇ ಮಾರ್ಗವಿದೆ, ಅದು ಪ್ರತಿ ನಿಮಿಷ, ಪ್ರತಿ ಕ್ಷಣ ಪ್ರತಿಯೊಂದು ಚಲನೆಯಲ್ಲಿ ಮನುಷ್ಯ ಗ್ರಹಿಸಬಹುದಾದ ಅತ್ಯುಚ್ಚ ಸತ್ಯವನ್ನು ಅಭಿವ್ಯಕ್ತಪಡಿಸುವುದನ್ನು ಕುರಿತು ಮತ್ತು ಅದೇ ಕಾಲಕ್ಕೆ ಈ ಗ್ರಹಿಕೆ ಪ್ರಗತಿಪರವಾದದ್ದು, ಈಗ ಅತ್ಯಂತ ಸತ್ಯವೆಂದು ತೋರಿಬರುವಂತಹದು ನಾಳೆಗೆ ಹಾಗಿರುವುದಿಲ್ಲ, ಹಾಗಾಗಿ ನಿಮ್ಮ ಮೂಲಕ ಹೆಚ್ಚು, ಹೆಚ್ಚಾಗಿ ಉಚ್ಚತರ ಸತ್ಯವನ್ನು ಅಭಿವ್ಯಕ್ತಪಡಿಸಬೇಕಾಗುತ್ತದೆ ಎಂಬುದನ್ನು ಕುರಿತು ಪ್ರಯತ್ನ ಮಾಡುವುದಿರುತ್ತದೆ. ನೀವು ಸುಖ–ಸೌಲಭ್ಯವಿರುವ ತಮಸ್ಸಿನಲ್ಲಿ ನಿದ್ದೆ ಮಾಡಲು ಇದು ಅವಕಾಶ ಮಾಡಿಕೊಡುವುದಿಲ್ಲ. ಮನುಷ್ಯ ಯಾವಾಗಲೂ ಎಚ್ಚರದಿಂದಿರಬೇಕು–ನಾನು ಭೌತಿಕ (ದೇಹದ) ನಿದ್ದೆ ಕುರಿತು ಹೇಳುವುದಿಲ್ಲ–ಯಾವಾಗಲೂ ಪ್ರಜ್ಞೆಯಿಂದಿರಬೇಕು, ಜ್ಞಾನೋದಯ ಪಡೆದ ಸ್ವೀಕೃತಿ ಹಾಗೂ ಸದಿಚ್ಛೆ ಇರಬೇಕು.

*



**ಪ್ರಶ್ನೆ :** *ವಾದಕ್ಕೆಡೆಯಿಲ್ಲದ ಮತತತ್ವಗಳು ಅತ್ಯಂತ ಅಪಾಯಕಾರಿ ಏಕೆ?*

**ಶ್ರೀಮಾತೆ :** ಸರ್ವತಂತ್ರ ಸ್ವತಂತ್ರ, ಅನಂತ, ಸನಾತನ ದೈವೀಸತ್ಯವನ್ನು ಕುರಿತು ಮನಸ್ಸಿಗೆ ಯೋಚಿಸಲಾಗುವುದಿಲ್ಲ. ಅದು ಕೇವಲ ಸ್ಥಳಾವಕಾಶಕ್ಕೆ ಸೇರಿದ್ದನ್ನು, ಪ್ರಾಪಂಚಿಕವಾದದ್ದನ್ನು, ತುಂಡು ತುಂಡಾದದ್ದನ್ನು ಹಾಗೂ ಸೀಮಿತವಾದದ್ದನ್ನು ಕಲ್ಪನೆ ಮಾಡಿಕೊಳ್ಳಬಲ್ಲದು.

ಹಾಗಾಗಿ ಮಾನಸಿಕ ಸ್ತರದ ಮೇಲೆ ಪರಿಪೂರ್ಣ ಸತ್ಯ ಅಸಂಖ್ಯಾತ, ತುಂಡು ತುಂಡಾದ ಮತ್ತು ಪರಸ್ಪರ ವೈರುಧ್ಯವಿರುವ ಸತ್ಯಗಳಲ್ಲಿ ವಿಭಜಿತಗೊಂಡಿರುತ್ತದೆ. ಹೀಗೆ ವಿಭಜನೆಗೆ ಒಳಗಾದವುಗಳು ತಮ್ಮ ಪೂರ್ಣತೆಯಲ್ಲಿ ಸಾಧ್ಯವಾದಷ್ಟರ ಮಟ್ಟಿಗೆ ಮೂಲ ದೈವೀಸತ್ಯವನ್ನು ಮರು ಉತ್ಪಾದನೆ ಮಾಡಲು ಹೆಣಗುತ್ತವೆ.

ಪೂರ್ಣತೆಯ ಒಂದು ಅಂಶವನ್ನು ಪ್ರತ್ಯೇಕವಾಗಿ ಕೈಗೆತ್ತಿಕೊಂಡು, ಅದು ಮಾತ್ರ ಸತ್ಯವೆಂದು ದೃಢೀಕರಿಸಿದರೆ, ಆ ಸತ್ಯ ಅದೆಷ್ಟೇ ಪ್ರಧಾನವಾಗಿದ್ದರೂ, ಎಲ್ಲವನ್ನೂ ಒಳಗೊಳ್ಳುವಂತಹದಾಗಿದ್ದರೂ ಸರ್ವವ್ಯಾಪಕತ್ವದಲ್ಲಿ ಅದು ಅವಶ್ಯವಾಗಿ ಮಿಥ್ಯೆ–ಯಾಗುತ್ತದೆ, ಏಕೆಂದರೆ ಅದು ಇಡೀ ದೈವೀಸತ್ಯದ ಉಳಿದ ಭಾಗವನ್ನು ನಿರಾಕರಿಸುತ್ತದೆ.

ನಿಖರವಾಗಿ ಈ ರೀತಿಯಲ್ಲಿಯೇ ವಾದಕ್ಕೆಡೆಯಿಲ್ಲದ ಮತತತ್ವಗಳನ್ನು ಸೃಷ್ಟಿಸಲಾಗಿದೆ ಮತ್ತು ಈ ಕಾರಣದಿಂದಾಗಿಯೇ ಅವು ಅತ್ಯಂತ ಅಪಾಯಕಾರಕ ಮಿಥ್ಯೆಯಾಗಿವೆ. ಏಕೆಂದರೆ ಪ್ರತಿಯೊಂದು ಉಳಿದ ಸತ್ಯಗಳಿಂದ ಪ್ರತ್ಯೇಕಗೊಂಡು ತನ್ನದಷ್ಟೇ ಏಕೈಕ ಸತ್ಯ, ಉಳಿದವುಗಳಲ್ಲ ಎಂದು ದೃಢೀಕರಿಸುತ್ತದೆ. ಎಲ್ಲ ಸತ್ಯಗಳು, ಅವುಗಳ ಅಸಂಖ್ಯಾತ ಅಸ್ತಿತ್ವದಲ್ಲಿ ಹಾಗೂ ಒಂದಕ್ಕೊಂದು ಪೂರಕವಾಗಿರು–ವುದರಲ್ಲಿ, ಪ್ರಗತಿಪರವಾಗಿ ಅವುಗಳ ಸಂಭೂತಿಯಲ್ಲಿ ಅನಂತ, ಸನಾತನ, ಪರಿಪೂರ್ಣ ದೈವೀಸತ್ಯವನ್ನು ಅಭಿವ್ಯಕ್ತಗೊಳಿಸುತ್ತದೆ.

**(17/304,7/286–87,10/66–67)** **– ಶ್ರೀಮಾತೆ**

*

## ದೈನಂದಿನ ಜೀವನಕ್ಕೆ ಮಾರ್ಗದರ್ಶನ

ಮಿಥ್ಯೆ ಎಷ್ಟೇ ಚಿಕ್ಕದಾಗಿದ್ದರೂ ಅದನ್ನು ಮಾತನಾಡುವುದರ ಮೂಲಕ ಇಲ್ಲವೆ ಬರೆಯುವುದರ ಮೂಲಕ ಅದು ಅಭಿವ್ಯಕ್ತಗೊಳ್ಳಲು ಅನುವು ಮಾಡಿಕೊಟ್ಟರೆ ನಾವು ಪರಿಪೂರ್ಣ ಸತ್ಯದ ಸಂದೇಶವಾಹಕರು ಆಗುವುದು ಹೇಗೆ ಸಾಧ್ಯ? ದೈವೀ

ಸತ್ಯದ ಪರಿಪೂರ್ಣ ಸೇವಕ ಅತ್ಯಂತ ಅಲ್ಪ ನಿಖರವಲ್ಲದಿರುವಿಕೆ, ಉತ್ಪ್ರೇಕ್ಷೆ ಇಲ್ಲವೆ ವಿರೂಪಗೊಳಿಸುವಿಕೆ ಇವುಗಳಿಂದ ದೂರ ಉಳಿದುಕೊಳ್ಳಬೇಕು...

*

ಮಿಥ್ಯೆಯನ್ನು ತೊಡೆದು ಹಾಕಲು ಕಾತರರಾಗಿರುವವರಿಗೆ ಇಲ್ಲಿ ಮಾರ್ಗವಿದೆ.

ನಿಮ್ಮನ್ನೇ ನೀವು ಸಂತೋಷಗೊಳಿಸಿಕೊಳ್ಳಲು ಪ್ರಯತ್ನಿಸುವುದು ಬೇಡ, ಇತರರನ್ನು ಸಂತೋಷಗೊಳಿಸುವ ಪ್ರಯತ್ನವೂ ಬೇಡ. ಕೇವಲ ಭಗವಂತನನ್ನು ಸಂತೋಷಗೊಳಿಸಲು ಪ್ರಯತ್ನಿಸಬೇಕು.

ಏಕೆಂದರೆ ಕೇವಲ ಅವನು ಮಾತ್ರ ದೈವೀಸತ್ಯವಾಗಿದ್ದಾನೆ. ಭೌತಿಕ ದೇಹ–ದಲ್ಲಿರುವ ನಮ್ಮಲ್ಲಿ ಪ್ರತಿಯೊಬ್ಬನೂ ಮಿಥ್ಯೆಯ ಹೊರ ಅಂಗಿಯಾಗಿದ್ದಾನೆ, ಆ ಅಂಗಿ ಭಗವಂತನ ಮೇಲೆ ಇರಿಸಿದ ಮಿಥ್ಯೆಯ ಅಂಗಿಯಾಗಿದ್ದು ಅವನನ್ನು ಅಡಗಿಸಿಡುತ್ತದೆ.

ಅವನು ಮಾತ್ರ ತನಗೆ ಸತ್ಯವಾಗಿರುವುದರಿಂದ, ಅವನ ಮೇಲೆ ನಾವು ಏಕಾಗ್ರತೆ ವಹಿಸಬೇಕು, ಮಿಥ್ಯೆಯ ಹೊರ ಅಂಗಿಗಳ ಮೇಲಲ್ಲ.

*

ಮಿಥ್ಯೆಗೆ ಕೇವಲ ಒಂದೇ ಪರಿಹಾರವಿದೆ.

ಅದು ನಿಮ್ಮ ಪ್ರಜ್ಞೆಯಲ್ಲಿ ಭಗವಂತನ ಸಾನ್ನಿಧ್ಯಕ್ಕೆ ವಿರುದ್ಧವಾಗಿರುವ ಎಲ್ಲದಕ್ಕೆ ಚಿಕಿತ್ಸೆ ನೀಡುವುದಾಗಿದೆ.

*

ಅತಿಮಾನಸ ಕೇವಲ ದೈವೀಸತ್ಯವಾಗಿದೆಯಷ್ಟೇ ಅಲ್ಲ, ಅದು ಮಿಥ್ಯೆಯನ್ನು ನಿರಾಕರಿಸುವುದೂ ಕೂಡ ಆಗಿದೆ. ಮಿಥ್ಯೆಗೆ ಎಡೆಗೊಡುವ ಪ್ರಜ್ಞೆಯಲ್ಲಿ ಅದು ಎಂದಿಗೂ ಕೆಳಗಿಳಿದು ಬರಲಾರದು, ಅಲ್ಲಿ ನೆಲೆಸಲಾರದು, ಪ್ರಕಟವಾಗಲಾರದು.

ಸ್ವಾಭಾವಿಕವಾಗಿ ಮಿಥ್ಯೆಯ ಮೇಲೆ ಜಯ ಸಾಧಿಸುವುದಕ್ಕೆ ಮೊದಲ ನಿಬಂಧನೆ ಸುಳ್ಳು ಹೇಳುವುದನ್ನು ನಿಲ್ಲಿಸುವುದಾಗಿದೆ, ಆದಾಗ್ಯೂ ಇದು ಪ್ರಾಥಮಿಕ ಹೆಜ್ಜೆ. ಗುರಿಯನ್ನು ಸಿದ್ಧಿಸಿಕೊಳ್ಳಬೇಕಾದರೆ ಸತ್ತೆಯಲ್ಲಿ ಹಾಗೂ ಅದರ ಚಲನೆಗಳಲ್ಲಿ ಪರಿಪೂರ್ಣ, ಸಮಗ್ರ ನಿಷ್ಕಾಪಟ್ಯ ಕೊನೆಯಲ್ಲಿ ಸ್ಥಾಪಿತವಾಗಬೇಕು.

*



ಯಶಸ್ಸಿಗಾಗಿ ಕಾತರರಾಗಿರುವುದಕ್ಕಿಂತ ಹೆಚ್ಚಾಗಿ ಸತ್ಯಕ್ಕಾಗಿ ಕಾತರರಾಗಿರಿ.

*

ದೈವೀಸತ್ಯಕ್ಕಾಗಿರುವ ಪ್ರೇಮ ಹಾಗೂ ದೈವೀ ಪ್ರಕಾಶಕ್ಕಾಗಿರುವ ಹಸಿವು ನಮ್ಮ ಜೀವನದ ಮೇಲೆ ಆಳಿಕೆ ನಡೆಸಬೇಕು.

*

ಮನುಷ್ಯ ಭಗವಂತನಿಗೆ ಹತ್ತಿರವಾಗಲು ಬಯಸಿದರೆ ಅವನ ಜೀವನದ ಮೇಲೆ ಪರಿಪೂರ್ಣ ಸತ್ಯಸ್ಥಿತಿ ಆಳಿಕೆ ನಡೆಸಬೇಕು.

*

ನಮ್ಮ ಗುರಿಯಾದ ಪರಿಪೂರ್ಣತೆಯ ಈ ದರ್ಜೆಯನ್ನು ತಲುಪಿದಾಗ, ನಾವು ಅರಸುತ್ತಿರುವ ಸತ್ಯ ನಾಲ್ಕು ಪ್ರಧಾನ ಮುಖಗಳನ್ನು ಹೊಂದಿದೆ ಎಂಬುದನ್ನು ಗ್ರಹಿಸುತ್ತೇವೆ. ದೈವೀ ಪ್ರೇಮ, ದೈವೀ ಜ್ಞಾನ, ದೈವೀ ಸಾಮರ್ಥ್ಯ ಮತ್ತು ದೈವೀ ಸೌಂದರ್ಯ ಇವೇ ಆ ನಾಲ್ಕು ಮುಖಗಳು. ದೈವೀಸತ್ಯದ ಈ ನಾಲ್ಕು ಗುಣಧರ್ಮಗಳು ಸ್ವಯಂಪ್ರೇರಣೆಯಿಂದ ನಮ್ಮ ಸತ್ತೆಯಲ್ಲಿ ಅಭಿವ್ಯಕ್ತಗೊಳ್ಳುವವು. ಚೈತ್ಯಸತ್ತೆ ನಿಜವಾದ, ಪರಿಶುದ್ಧ ಪ್ರೇಮದ ವಾಹನವಾಗುವುದು, ಮನಸ್ಸು ದೋಷಾತೀತ ಜ್ಞಾನದ ವಾಹನವಾಗುವುದು, ಪ್ರಾಣಿಕ ಅಜೇಯ ಸಾಮರ್ಥ್ಯ ಹಾಗೂ ಬಲದ ವಾಹನವಾಗುವುದು, ದೇಹ ಪರಿಪೂರ್ಣ ಸೌಂದರ್ಯ ಹಾಗೂ ಸಾಮರಸ್ಯ ಇವುಗಳ ಅಭಿವ್ಯಕ್ತಿಯಾಗುವುದು.

*

"ದೈವೀಸತ್ಯ" ಎಂದರೇನು? ಎಂದು ಹದಿನೈದು ವರ್ಷದ ಬಾಲಿಕೆ ಕೇಳಿದಳು.

"ಪರಮೋಚ್ಚ ಪ್ರಭುವಿನ ಸಂಕಲ್ಪ" ಎಂದು ನಾನು ಉತ್ತರ ನೀಡಿದೆ.

ಇದು ಚಿಂತನೆಯಿಂದ ಕೂಡಿದ ಧ್ಯಾನಕ್ಕೆ ಒಂದು ವಿಷಯ.

**(14/202, 196, 15/90, 14/202, 192, 190, 12/8, 16/438)** **– ಶ್ರೀಮಾತೆ**

*

## ವಾರ್ತಾಪತ್ರ

### ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ಮೀರಾಂಬಿಕಾ ಸ್ಕೂಲ್ ಫಾರ್ ನ್ಯೂ ಏಜ್ ಶಾಲಾ ವಾರ್ಷಿಕೋತ್ಸವವು ದಿನಾಂಕ 1/12/12ರ ಶನಿವಾರದಂದು ಶ್ರೀ ಶಿವಬಾಲಾಯೋಗಿ ಆಶ್ರಮದ ಆವರಣದಲ್ಲಿ ಜರುಗಿತು. ಬೆಳಗ್ಗೆ 10 ರಿಂದ 12ರ ವರೆಗೆ ಎಲ್.ಕೆ.ಜಿ.ಯಿಂದ ಐದನೇ ತರಗತಿಯವರಿಗಾಗಿ ನಡೆದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ತಮ್ಮ ಪ್ರತಿಭೆಯನ್ನು ಸಾದರಪಡಿಸಿದರು.

ಸಂಜೆ 4 ರಿಂದ ಆರಂಭವಾದ ಮಾಧ್ಯಮಿಕ ಮತ್ತು ಪ್ರೌಢಶಾಲಾ ಸಾಂಸ್ಕೃತಿಕ ಸಂಜೆಯ ಮುಖ್ಯ ಅತಿಥಿಗಳಾಗಿ ಪ್ರಖ್ಯಾತ ದೂರದರ್ಶನ ನಿರೂಪಕಿ ಶ್ರೀಮತಿ ಅಪರ್ಣ ಆಗಮಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲಾ ಅಧ್ಯಕ್ಷರಾದ ಶ್ರೀಯುತ ಅಜಿತ್ ಸಬ್ನೀಸ್ ನಿರ್ವಹಿಸಿದರು. 2011ರ ಸಾಲಿನಲ್ಲಿ ಹತ್ತನೆಯ ತರಗತಿಯಲ್ಲಿ ಹೆಚ್ಚು ಅಂಕ ಗಳಿಸಿದವರನ್ನು ಸನ್ಮಾನಿಸಲಾಯಿತು ಅಲ್ಲದೆ ಪಠ್ಯೇತರ ಚಟುವಟಿಕೆಗಳಲ್ಲಿ ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಪ್ರಶಸ್ತಿ ಗೆದ್ದ ವಿದ್ಯಾರ್ಥಿ–ಗಳನ್ನು ಸನ್ಮಾನಿಸಲಾಯಿತು. ವಿವಿಧ ಸಂಸ್ಕೃತಿಯ, ವಿವಿಧ ಭಾಷೆ, ದೇಶ–ಭಾಷೆಗಳ ನಾಟಕ, ನೃತ್ಯಗಳಲ್ಲಿ ವಿದ್ಯಾರ್ಥಿಗಳು ಮಿಂಚಿದರು. ಶಾಲಾ ಆಡಳಿತಾಧಿಕಾರಿ ಶ್ರೀಮತಿ ಪ್ರತಿಭಾ ಸಬ್ನೀಸ್, ಶಾಲಾ ಪ್ರಾಂಶುಪಾಲರಾದ ಶ್ರೀಮತಿ ಶಾರದಾಂಬ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ವಿದ್ಯಾರ್ಥಿಗಳು ನಡೆಸಿಕೊಟ್ಟ ಈ ಕಾರ್ಯಕ್ರಮದಲ್ಲಿ ಪೋಷಕರು ಹಾಗು ಶಾಲಾ ಶಿಕ್ಷಕ, ಶಿಕ್ಷಕೇತರ ಸಿಬ್ಬಂದಿಗಳು ಸಕ್ರಿಯವಾಗಿ ಭಾಗವಹಿಸಿದರು.

ದಿನಾಂಕ 5/12/12ರ ಬುಧವಾರದಂದು “ಶ್ರೀ ಅರವಿಂದರ ಮಹಾಸಮಾಧಿ”ಯ ದಿನವನ್ನಾಗಿ ಆಚರಿಸಲಾಯಿತು. ತತ್ಸಂಬಂಧ ಬೆಳಗ್ಗೆ 7.00 ರಿಂದ 7.30ರವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ಅದೇ ದಿನ ಸಾಯಂಕಾಲ 4.30 ರಿಂದ 5.45ರವರೆಗೆ "Meditations on Savitri" ಎಂಬ ವಿಷಯದ ಬಗ್ಗೆ ಚಿತ್ರಪ್ರದರ್ಶನವನ್ನು ತೋರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಅನೇಕ ಗುರು–ಬಂಧುಗಳು ಆಗಮಿಸಿ, ಇದರ ಪ್ರಯೋಜನ–ವನ್ನು ಪಡೆದುಕೊಂಡರು.



## REVISION OF THE SOCIETY'S MEMBERSHIP FEES IN INDIA

### With effect from 1st January, 2013

| Membership Options | Period | India Rs. | By Air Mail US $ |
|---|---|---|---|
| Member without Magazine | 1 Year | 30.00 | |
| Member with Magazine | 1 Year | 180.00 | 25.00 |
| " | 3 Years | 520.00 | 75.00 |
| " | 5 Years | 860.00 | 125.00 |
| * Donor Member | 10 Years | 4000.00 | 375.00 |
| * Institutional Member | 1 Year | 1500.00 | 250.00 |
| * Corporate Member | 20 Years | 25000.00 | 3000.00 |

**ಒಪ್ಪೋಲೆ :**
**ಅಖಿಲ ಭಾರತ ಪತ್ರಿಕೆ, ಡಿಸೆಂಬರ್, 2012**

| ಪುಟ ಮತ್ತು ಸಾಲು | ತಪ್ಪು | ಒಪ್ಪು |
|---|---|---|
| 20, ಸಾಲು 3 | ಅರ್ಥಮಾಡಿಕೊಳ್ಳುವ | ಅರ್ಥಮಾಡಿಕೊಳ್ಳದ |
| 26, ಸಾಲು 4 | ಪ್ರತ್ಯವ್ಯವಹಾರ | ಪತ್ರವ್ಯವಹಾರ |
| 32, ಸಾಲು 19 | ದರ್ಶನಾಶೀವಾದಗಳನ್ನು | ದರ್ಶನಾಶೀರ್ವಾದಗಳನ್ನು |



*In Thy Light we shall see,*
*in Thy Knowledge we shall know,*
*in Thy Will we shall realise.*

- The Mother

**RNI No. 22511/1971**
No. of Pages **64 + 4 (Cov. Page)**
KAR Reg No : CPMG/KA/BGS/368/2012-2014
Permitted to Post 10th of Every Month. Reg. Valid till : 31-12-2014
Licensed to Post at MBC, Bangalore GPO, Bangalore - 560 001

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು – 560 078
ದೂರವಾಣಿ : 080–22449882, 22459268

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bangalore - 560 078. Phone : 080 - 2244 9882.